
ಜನಪ್ರಿಯ ಪುಸ್ತಕ ಮಾಲೆ

ಹಸಿಮಾಂಸ ಮತ್ತು ಹದ್ದುಗಳು

ಶ್ರೀಮತಿ ಗೀತಾನಾಗಭೂಷಣ



ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮.

ಜನಪ್ರಿಯ ಪುಸ್ತಕ ಮಾಲೆ

ಹಸಿಮಾಂಸ ಮತ್ತು ಹದ್ದುಗಳು

ಶ್ರೀಮತಿ ಗೀತಾನಾಗಭೂಷಣ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

HASIMAMSA MATHU HADDUGALU - a Novel Written by Smt. Geethanagabhushana and Published by Kannada Book Authority, Chamarajpet, Bangalore - 560 018. **Pages : 84 + iv** **Rs. 20/-**

First Impression 1978

Second Impression 1998

ಬೆಲೆ : ರೂ. ೨೦/-

ಮುದ್ರಕರು :
ಸ್ವತಂತ್ರ ಮುದ್ರಣಾಲಯ
ನಂ. 3, ಬಿ.ಸಿ.ಸಿ. ಬ್ಯಾಂಕ್ ಕಟ್ಟಡ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - 560 018

ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರೀ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಅತ್ಯಾಕರ್ಷಕವೂ, ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನವೂ, ಬುದ್ಧಿ ಮನಸ್ಸುಗಳವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನ ಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತಾ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನಕಾರಿಯಾದ ಉತ್ತಮ ಜ್ಞಾನ ಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರ್‍ಯಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯ ಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಯ್ಯ ಅವರಿಗೆ ಸಲ್ಲಬೇಕು. ಕನ್ನಡದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸ್ತುತ್ಯ ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸುತ್ತಿದ್ದ ಇಂಥ ಪ್ರಾಚೀನ ಹಾಗೂ ಆಧುನಿಕ ಜನಪ್ರಿಯ ಪುಸ್ತಕಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾಗಿರುವ ಹಾಗೂ ಬಹುಬೇಡಿಕೆಯ ಸಾಹಿತ್ಯ ಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡಿರುವ ಕೃತಿಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕನ್ನಡ ಸಹೃದಯರಿಗೆ ನೀಡುವುದೇ ಈ ಜನಪ್ರಿಯ ಪುಸ್ತಕ ಮಾಲೆಯ ಮುಖ್ಯೋದ್ದೇಶ.

ಈ ಮಾಲೆಯಲ್ಲಿ ಇದೀಗ ಕನ್ನಡದ ಜನಪ್ರಿಯ ಲೇಖಕಿ ಶ್ರೀಮತಿ ಗೀತಾನಾಗಭೂಷಣ ಅವರ 'ಹಸಿಮಾಂಸ ಮತ್ತು ಹದ್ದುಗಳು' ಕೃತಿ ಪುನರುದ್ರಣವಾಗಿದೆ.

ಅನರಕ್ಷರಸ್ಥ ಮುಗ್ಧ ದಲಿತ ಬಡಜನತೆಯನ್ನು ಶ್ರೀಮಂತರು, ಪುರೋಹಿತಶಾಹಿಗಳು, ಮೇಲುವರ್ಗದವರು, ಅಧಿಕಾರ ಗರ್ವಿತ ಪಟ್ಟಭದ್ರರು ಹೇಗೆ ನಿರಂತರವಾಗಿ ಶೋಷಿಸುತ್ತ ಅವರ ಬದುಕನ್ನು ನರಕಗೊಳಿಸುತ್ತಿದ್ದಾರೆ ಎನ್ನುವ ಹೃದಯ ವಿದ್ರಾವಕ ಚಿತ್ರವನ್ನು ಈ ಕೃತಿಯ ಮೂಲಕ ಲೇಖಕಿ ಅತ್ಯಂತ ಪರಿಣಾಮಕಾರಿಯಾಗಿ ಕಂಡರಿಸಿದ್ದಾರೆ. ಇಲ್ಲಿನ ಕೆಳವರ್ಗದವರ ದಾರುಣ ಜೀವನ ಲೋಕ, ಅದನ್ನು ಸಹಜ ರೀತಿಯಲ್ಲಿ ಗುಲಬರ್ಗಾ ಪ್ರಾಂತ್ಯದ ಆಡುನುಡಿಯಲ್ಲಿ ಬಿಚ್ಚಿಟ್ಟಿರುವ ಬಗ್ಗೆ ಶಕ್ತಿವತ್ತಾಗಿದೆ. ಲೇಖಕಿಯ ಮನಸ್ಸಿನ ನೋವು, ಪ್ರತಿಭಟನಾ ಮನೋಧರ್ಮ ಸಮಾಜ ಪರಿವರ್ತನೆಯನ್ನು ಬಯಸುವ ಎಲ್ಲರ ಮನಸ್ಸನ್ನು ತಟ್ಟುತ್ತದೆ. ಇಂಥ ಕೃತಿಯನ್ನು ಪ್ರಕಟಿಸಲು ಅನುಮತಿಯಿತ್ತ ಶ್ರೀಮತಿ ಗೀತಾನಾಗಭೂಷಣ ಅವರಿಗೆ, ಈ ಕಾರ್ಯದಲ್ಲಿ ನೆರವಾದ ಕನ್ನಡ ಪುಸ್ತಕ ಪ್ರಾಧಿಕಾರದ ಸನ್ಮಾನ್ಯ ಸದಸ್ಯರಿಗೆ, ಸುಂದರವಾಗಿ ಅಚ್ಚಿಸಿಕೊಟ್ಟ ಸ್ವತಂತ್ರ ಮುದ್ರಣಾಲಯದ ಶ್ರೀ ರಾಘವೇಂದ್ರ ಮತ್ತು ಸಿಬ್ಬಂದಿ ವರ್ಗದವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

೧೯-೮-೧೯೯೮
ಬೆಂಗಳೂರು

ಎಚ್. ಜಿ. ಲಕ್ಕಪ್ಪಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಮೂಡಲ ದಿಕ್ಕಿನಲ್ಲಿ ತಲೆಯೆತ್ತಿ ಬೆಂಕಿಯುಂಡೆಯಂತೆ ಬಂದ ಸೂರ್ಯ ಬಿಳುಪಿಗೆ ತಿರುಗಿ ಸೊಕ್ಕೇರಿದ ಬಿಳಿ ಗೂಳಿಯಂತೆ ಗುಟುರು ಹಾಕುತ್ತ, ನೀಲಿ ಆಕಾಶದ ಉದ್ದಕ್ಕೂ ಕುಣಿಯುತ್ತ ಮೆರೆದು ಕೊನೆಗೂ ಪಡುವಣಕ್ಕಿಳಿದು; ವೀರ್ಯಸ್ಖಲನ ಹೊಂದಿದ ಮುದಿಯನಂತೆ ತೇಕುತ್ತ ರಕ್ತ ಕಾರಿ ಸತ್ತ. ರಕ್ತ ಉಗುಳಿದ ಅವನ ಕಿರಣಗಳು ಬಾಯೊರೆಸಿಕೊಳ್ಳಲೂ ಆಗದೆ ಅವನ ಜೊತೆಗೆಯೇ ಅವನದೇ ಕುಣಿಯಲ್ಲಿ ಬಿದ್ದು ಚಡಪಡಿಸಿ ಉಸಿರು ಕಳೆದುಕೊಳ್ಳುತ್ತ ಒದ್ದಾಡಿ ಸ್ತಬ್ಧವಾದುವು. ಸೂರ್ಯನ ಹೆಣವನ್ನು ಮಣ್ಣು ಮಾಡಿ ಕತ್ತಲೆ ಏರಿ ನಿಂತಿತು.

"ಎಲಾ ಇವನವ್ವನಾ ಒಯ್ದು. ಈಟ ಜಲ್ದಿ ಕತ್ತಲಾಯ್ತಲ್ಲೋ ಮೈಲಾರಿ. ಭಡಾ ಭಡಾ ಹೆಜ್ಜೆ ಹಾಕು. ಜಲ್ದಿ ಹಳ್ಳಿ ಸೇರಾಮಿ" ಎನ್ನುತ್ತ ಫಕೀರಪ್ಪ ಚುಟ್ಟ ಹೊತ್ತಿಸಿ ದಮ್ಮು ಎಳೆದ. ಕತ್ತಲೆಯಲ್ಲಿ ಚುಟ್ಟದ ತುದಿ ಅರೆಕ್ಷಣ ಮಿಣಕ್ಕನೆ ಕೆಂಪಗೆ ಹೊಳೆದು ಕಪ್ಪಾಯಿತು.

"ಈಗೇನೋ ಮುತ್ಯಾ.... ಹಳ್ಳಿ ಸನ್ಯಾಕ ಬಂತಲ್ಲ. ನಾಕು ಮಾರ ದಾಟಿದ್ರs ಮಾದರ ಕೇರಿ. ಅಲ್ಲೇ ಕೆಂಚಮ್ಮನ ಗುಡಿ ಹಂತ್ಯಾಕೇ ನಿನ್ ಗುಡಿಸಲು. ಯಾಕ ಗಡಬಡ್ ಮಾಡ್ತಿ ನಡಿ...."

ಇಕ್ಕೆಲದಲ್ಲಿಯೂ ದಟ್ಟವಾಗಿ ಬೆಳೆದು ನಿಂತು ಕಿರ್ರೆನ್ನುವ ಲಕ್ಕಿಯ ಪೊದೆಯ ನಡುವಿನ ಕಾಲುದಾರಿಯಲ್ಲಿ ನಡೆಯುತ್ತ ಮೈಲಾರಿ ನುಡಿದ. ಫಕೀರಪ್ಪ ಬೀಡಿಯ ಮತ್ತೊಂದು ಝುರಕಿ ಎಳೆದು ಕೆಮ್ಮಿ ಮಾತಾಡಿದ.

"ಗಡಬಡದಾನೋ ಪೋರ. ನಮ್ ಮುದುಕಿ ಜಡದಲಿಂದ ಬಿದ್ದು ಆರು ತಿಂಗಳಾಯ್ತು. ಜೋಕ್ಯಾನ ಹುಣ್ಯಾಗೇ ಹಾಸಗಿ ಹಾಸ್ಯಾದ ಅದು. ಅದೇನೂ ಇನ್ನ್ ಬದಕಂಗಿಲ್ಲ ಭಾಳದಿನಾ. ಕೆಮ್ಮಾ ದಮ್ಮಾ ಸೇರಿ ನನ್ ಮುದಕಿಗಿ ಹತ್ತಿಟ್ಟಾವಪಾ ತಮ್ಮಾ.... ಅದರ ಹಾಲತ್ ಏನಾಯ್ತೋ ಅಂತ ಗಾಬರಿ...."

ದೂರದ ಕಾಡಿನ ಮರದಿಂದ ಗೂಗೆಯೊಂದು ವಿಕಾರ ಸ್ವರ ಹೊರಡಿಸಿತು. ಇರುಳ ಹಕ್ಕಿ ರೆಕ್ಕೆ ಬಡಿಯುತ್ತ ಹಾರಿ ಹೋಯಿತು. ಫಕೀರಪ್ಪ ಮುತ್ಯಾನ ಹೆಜ್ಜೆ ಗಡಬಡಿಸಿ ಎತ್ತಿಟ್ಟುವು.

"ಹೊಯಿಂದೋ ಮುತ್ಯಾ... ಆಯಿಗಿ ಜಡಾ ಆಗ್ಯದಂಭೋ ಸುದ್ದಿ ನನಗನೂ ಗೊತ್ತದಾ. ಅದರ ಆಕಿಂದು ಜಿಗಟ ಜೀವಾ ನೋಡು. ಹಿನಾ ಭಾಳ ದಿನಾ ಬದಕ್ತಾಳ. ಲಚ್ಚಿ ಮದಿ ಮಾಡೇ ಆಕಿ ಸಾಯಾದು. ನೀ ಏನೂ ಫಾಬರ್ಯಾಗಬ್ಯಾಡ ಬಿಡು."

ಕಲಬುರ್ಗಿಯ ಸಂತೆಗೆ ಹೋಗಿದ್ದವರಿಗೆ ಬಾಜಾರದಲ್ಲಿಯೇ ಹೊತ್ತು ಹೋದದ್ದು ಗೊತ್ತಾಗಿರಲಿಲ್ಲ. ಉಪ್ಪು, ಮೆಣಸಿನಕಾಯಿ, ಉಳ್ಳಾಗಡ್ಡಿ, ಅರಿಶಿಣ, ಬಳ್ಳೊಳ್ಳಿ, ಒಣಮೀನು ಅಂತೆಲ್ಲ ವ್ಯಾಪಾರ ಮಾಡಿ ಗಂಟು ಕಟ್ಟಿದ್ದರು. ಚಾ ಕುಡಿಯೋದಕ್ಕಂತ 'ಸಂಗಮ' ಸಿನಿಮಾ ಥೇಟರ ಮುಂದಿನ ಗೋಣಿಚೀಲಾ ಕಟ್ಟಿ ತಯಾರಿಸಿದ ಭೀಮಳ್ಳಿ ಗಿರ್ಯಾನ ಹೋಟಲ್‌ಗೆ ಹೋದರು. ಅಲ್ಲೇ ಹೊತ್ತು ಮುಳುಗಿತ್ತು. ಆ ಮಾತು ಈ ಮಾತು ಆಡುತ್ತ ಇಬ್ಬರೂ ಅಂಚು ಹರಿದು ಮುಕ್ಕಾದ ಗಾಜಿನ ಗಿಲಾಸಿನಲ್ಲಿ ಸಿಂಗಲ್ ಚಾ ಕುಡ್ದು ಚುಟ್ಟಾ ಹಚಗೊಂಡರು.

"ಹೋಗ್ತೆವೋ ಗಿರ್ಯಾ.... ಹೊತ್ತಾಯ್ತು" ಎನ್ನುತ್ತ ಹೊರಬಂದು 'ಸುಖಶಾಂತಿ' ಹೊಟೇಲ್ ರೋಡಿಗೆ ತಿರುಗಿ, ಗಂಟು ಗದಡಿ ಹೊತ್ತು ಹೋದರೆ ಅಲ್ಲೇನಿತ್ತು? ಭೀಮಳ್ಳಿಗೆ ಹೋಗುವ ಬಸ್ಸು ಹೊರಟು ಹೋಗಿ ಒಂದು ಗಳಿಗೆ ಆಗಿತ್ತು.

"ಇವನವ್ವನಾ ರಂಡಿಮಗಂದು. ಡರೆವರ ಭಾಡಕವು ನನ್ಮಗ್ಗಾ. ಇವತ್ತ ಯೇಟು ಜಲ್ದಿ ಬಸ್ ಬಿಟ್ನಲ್ಲೋ ಮೈಲಾರಿ. ಮಾತ ಮಾತರ ಘಾತಾಯ್ತು."

ಮುದುಕ ಅರೆಸಿಟ್ಟು ಅರೆಬೇಸರದ ದನಿಯಲ್ಲಿ ನುಡಿದು ನಿಂತುಬಿಟ್ಟ. ಮೈಲಾರಿ ಬಾಯಿಗೆ ಕೈಹಚ್ಚಿಕೊಂಡು ಮುದುಕನ ಮುಖವನ್ನು ಮಿಕಿ ಮಿಕಿ ನೋಡುತ್ತ ನಿಂತುಬಿಟ್ಟ.

"ಮುತ್ಯಾ.... ಹಿರಬಾಜಾರ ನಾಕಾದ ಬಲ್ಲಿ ನಿಂದ್ರಾಮಿ ನಡಿಯೋ. ಅಳಂದಕ್ಕ, ಫಾಣಕಾಪುರಕ್ಕ ಹೋಗಾ ಬಸ್ಸುಗೋಳು ಸಿಗತಾವ. ಯದರಾ ಗೆರೆ ಕುಂತು ಪಟ್ಟಣ ಪಾಟಿ ತನಕಾ ಹೋಗಾಮಿ. ಮುಂದ ಅದಾನೇ ಅಲ್ಲ ನಡ್ಯಾದು. ನಡಕೋತ ಹೋಗಾಮೆಂತ ಆಂ?"

"ನೀ ಅನಾದನೂ ಖರೇ ಅದಾನೋ ತಮ್ಮಾ... ನಡಿ ಹಂಗಾರ. ಝಟ ಪಟ್ ಹೋಗಾಮೆಂತ"

ಇಬ್ಬರೂ ಬಿರಬಿರನೆ ಹೆಜ್ಜೆ ಹಾಕುತ್ತ ಶಹಬಜಾರ ನಾಕಾದ ಹತ್ತಿರ ಬಸ್‌ಸ್ಟ್ಯಾಂಡಿಗೆ ಬಂದಾಗ ಇವರಿಗಾಗಿಯೇ ಕಾದಿದ್ದಂತೆ ಹಳದಿ ತಲೆ ಕೆಂಪು ಮೈಯ ಬಸ್ಸೊಂದು ಬಂದು ನಿಂತಿತ್ತು. ಎತ್ತ, ಏನು ಅಂತ ಕೇಳದೆ ಇಬ್ಬರೂ ಅದರಲ್ಲಿ ಹತ್ತಿ ಕುಳಿತರು.

"ಮುತ್ತ್ಯಾ ಯಾ ಊರಿಗಿ?" ಎಂದು ಕೇಳುತ್ತ ಬಂದ ಖಾಕಿ ಉಡುಗೆಯ ಕಂಡಕ್ಟರ್ ಟಿಕೆಟ್ ಹಣಕ್ಕಾಗಿ ಕೈ ನೀಡಿದ. ಫಕೀರಪ್ಪ ಸೊಂಟದಲ್ಲಿ ಸಿಕ್ಕಿಸಿದ್ದ ಗಂಟಿನಿಂದ ನಾಲ್ಕಾರು ಮಡಿಕೆಯಾಗಿ ತುದಿ ಹರಿದ ಎರಡು ರೂಪಾಯಿಯ ನೋಟೊಂದನ್ನು ಅವನ ಕೈಗೆ ತುರುಕುತ್ತ,

"ಪಟ್ಟಣ ಪಾಟಿಗಿ ಒಂದು ಕುಡ್ರಿಯಪ್ಪಾ.... ಆ ಕಾಡಿ ಮುಂದ ನಡಕೋತ ಭೀಮಳ್ಳಿಗೆ ಹೋಗ್ತಿವ್ರಿ" ಎಂದ. ಬಸ್ಸಿನಲ್ಲಿದ್ದ ಪ್ಯಾಂಟು ಷರ್ಟಿನ ಕೆಲವರು ಮುಸಿ ಮುಸಿ ನಕ್ಕರು. ಮೈಲಾರಿಯೂ ಟಿಕೇಟು ಕೊಂಡ. ಮುದುಕ ಅರೆಸುಟ್ಟು ಉಳಿದಿದ್ದ ಬೀಡಿಯನ್ನು ಜೇಬಿನಿಂದ ಹೊರತೆಗೆದು ಮೈಲಾರಿಯ ಬಳಿಯಿಂದ ಕಡ್ಡಿ ಇಸಿದುಕೊಂಡು ಕಡ್ಡಿ ಗೀರಿ ಚುಟ್ಟ ಹೊತ್ತಿಸಿದ. ಬಾಯಿಗಿಟ್ಟು ಒಂದು ಝುರಕಿ ಎಳೆದು "ಧೂಮಪಾನ ನಿಷೇಧಿಸಲಾಗಿದೆ" ಎಂದು ಬರೆದ ಬಸ್‌ನ ಬರಹದಲ್ಲಿಯೇ ಕಣ್ಣು ಕೀಲಿಸುತ್ತ ಹೊಗೆಯುಗುಳಿದ.

ಇಪ್ಪತ್ತು ನಿಮಿಷಗಳಲ್ಲಿ ಬಸ್ ಅವರನ್ನು ಹೊತ್ತು ತಂದು 'ಪಟ್ಟಣ ಪಾಟಿ' ಎಂಬ ಸ್ಥಳಕ್ಕಿಳಿಸಿ ಮುಂದೆ ಸರಿದು ಹೋಯಿತು.

ನಾಲ್ಕಾರು ಗೋಣಿತಟ್ಟಿನ ಮತ್ತು ತಡಸಿಯ ಗುಡಿಸಲುಗಳ ಚಾದ ಅಂಗಡಿಗಳಿದ್ದ ಹಳ್ಳಿಯ ಪುಟ್ಟ ಬಸ್‌ಸ್ಟ್ಯಾಂಡಿಗೆ 'ಪಟ್ಟಣ' ಅಂತ ಹೆಸರು. ಆ ಹಳ್ಳಿಯ ಹೆಸರೇ ಪಟ್ಟಣ. ತಿಂಗಳ ಹಿಂದೆ ಸೂರ್ಯಪಾನದ ಎಣ್ಣೆಯಲ್ಲಿ ಕರಿದಿಟ್ಟಿದ್ದ ಕಾರಾ ಸೇವು, ಬೆಲ್ಲದ ಬೂಂದಿ, ಕರದಂಟು, ಕಾರಾಬೂಂದಿ, ಭಜಿಗಳೆಲ್ಲವೂ ಗಬ್ಬನಾತ ಹರಡಿಸಿದ್ದುವು. ಸ್ಟೌ ದನಿ ತೆಗೆದು ಅಳುತ್ತ ತನ್ನ ತಲೆಯ ಮೇಲಿನ ಸಿಲಾವರ ಬಗೋಣಿಯಲ್ಲಿಯ 'ಚಾ' ಕುದಿಸುತ್ತಿತ್ತು.

"ಮುತ್ತ್ಯಾ... ಚಾ ಕುಡ್ದು ಹೋಗಾಮೇನೋ...."

ಮೈಲಾರಿ ಕೇಳಿದ. ಆದರೆ ಫಕೀರಪ್ಪನ ಕಣ್ಣು ಅಲ್ಲಿಯೇ ದೂರದಲ್ಲಿಯ ಬೇವಿನ ಮರದಡಿಯಲ್ಲಿ ಮುಚ್ಚಳವಿಲ್ಲದ ಕಟ್ಟಿಗೆಯ ಪೆಟ್ಟಿಗೆಗಳಲ್ಲಿ ಪೇರಿಸಿಟ್ಟಿದ್ದ ಸೇಂದಿ ಬಾಟಲಿಗಳನ್ನೇ ನೋಡುತ್ತಿದ್ದವು.

"ಮುತ್ಯಾ.... ಒಂದೊಂದು ಬಾಟ್ಲಿ ಹಾಯ್ಕೊಂಡು ಹೋಗಾಮಿ ಬಾ, ನಡ್ಲಿಕ ಜೋಶ್ ಬರ್ತದ. ಮತ್ತ ಮಜಾನೂ ಬರ್ತದೋ.... ಬಾ...." ಎನ್ನುತ್ತ ಮೈಲಾರಿ ಅವನ ಕೈ ಹಿಡಿದುಕೊಂಡು ಆ ಕಡೆಗೆ ನಡೆದ.

ಹಣ ಕೊಟ್ಟು ಎರಡು ಬಾಟಲಿಗಳನ್ನು ಎತ್ತಿಕೊಂಡು ಬಂದ ಮೈಲಾರಿ. ಇಬ್ಬರೂ ಅಲ್ಲಿಯೇ ಬರಿ ನೆಲದ ಮೇಲೆ ಶಿಸ್ತಾಗಿ ಕುಳಿತು ಬಾಟಲಿಗಳನ್ನೆತ್ತಿ ಬಾಯಿಗಿಟ್ಟರು.

ಮತ್ತೆ ಹದಿನೈದು ನಿಮಿಷಗಳ ನಂತರ ಅವರು ಇಕ್ಕೆಲದ ಸಾಲು ಹೊಲಗಳ ನಡುವಿನ, ಭೀಮಳ್ಳಿಗೊಯ್ಯುವ ಕಾಲುದಾರಿಯನ್ನು ತುಳಿಯುತ್ತಿದ್ದರು.

"ಯಾಕೋ ಮುತ್ಯಾ.... ಇವತ್ತಿನ ಮಾಲ ಹ್ಯಾಂಗದಾನೋ?" ಮೈಲಾರಿ ಮಾತೆಳೆದ.

ಮುದುಕ ಹೆಜ್ಜೆ ಎತ್ತಿಡುತ್ತ ಉತ್ತರಿಸಿದ.

"ಬೇಸಿ ಅದಾನೋ..... ಅದರ ಅಗಸುದ್ಯಾ ಬಕ್ಕಳ ಹಾಕ್ಯಾರ ಸೂಳ್ಯಾ ಮಕ್ಳು. ಕುದ್ದ ಘಳಗಿಗೇ ಸೆಟ್‌ಂತ ತೆಲಿಗೇರಿ ಬಿಡ್ತು ಇವನ್ ಹೆಡ್ತಿ ಭಾಳ ಬೆರಿಕೆದಾನೋ...."

ಇಬ್ಬರ ನಡುವೆ ಸ್ವಲ್ಪ ಹೊತ್ತು ಮೌನ ಮಾತಾಡಿತು. ಫಕೀರಪ್ಪ ಅರವತ್ತು ಸಮೀಪಿಸಿ ನಿಂತಿರುವ ಬಿಳಿ ಮೀಸೆಯ, ಡಾಂಬರುಗಪ್ಪು ಮೈಯಿನ ಮುದುಕ. ಕೆಂಪು ಕಣ್ಣು, ಗರುಡ ಮೂಗುಗಳ ಕೆಳಗಿನ ಹಲ್ಲಿಲ್ಲದ ಬೊಚ್ಚು ಬಾಯಿ. 'ಸಗತಿಯಿಲ್ಲ, ಆದರ ಸಿಟ್ಟವಾ' ಅನ್ನೋ ಜಾಯಮಾನ ಮುದುಕನದು. ಬಾಯಿ ಮಾತ್ರ ಜೋರು. ತೇಪೆ ಹಚ್ಚಿದ ಧೋತರ, ತೋಳು ಹರಿದ ಅಂಗಿ, ತಲೆಯ ಮೇಲೆ ಹಿಂದೆಂದೋ ಬಿಳಿಯದಾಗಿದ್ದು ಈಗ ಕೆಂಪಿಗೆ ತಿರುಗಿದ ಪಟಕಾ.

ಫಕೀರಪ್ಪನ ಮನಸ್ಸು ಸೇಂದಿ ನಿಶೆಯಲ್ಲಿ ನೆನಪುಗಳನ್ನೆಲ್ಲ ಕೆದರತೊಡಗಿತು. ಹೃದಯ ಕೆದಕಿದ ಹೊಂಡವಾಯಿತು. ನೂರಾರು ಚಿಂತೆಗಳು, ನೆನಪುಗಳು, ಆಲೋಚನೆಗಳು, ವಿಚಾರಗಳು.... ಒಂದಲ್ಲ ಎರಡಲ್ಲ. ಮುದುಕಿ ಬ್ಯಾನಿ ಬಂದ ನೆಲ ಹಿಡೀತು..... ಅದೇ ನಿನ್ನ ಭೂಮಿ ಬಿಟ್ಟು ಮ್ಯಾಲೇಳಂಗಿಲ್ಲಂತ ಅನಸಲಕ್ಹತ್ತಾದ. ಒಬ್ಬಕ್ಕೀನೇ ಒಬ್ಬಕ್ಕಿ ಮಗಳು ಲಚ್ಚಿ ಹರ್ಯಾಕ ಬಂದಾಳ. ಆಕಿ ಮೈನರ್ದು ಎಡ್ಡೊರ್ಸ ಆಯ್ತು. ಆಕಿನ ಮನದಿ ಮಾಡ್ಕೊಡಬೇಕು ಆದೋಟು ಜಲ್ದಿ. ಘಳ್ಯಾಗ ಹರೇದ

ಮಗಳಿಗೆ ಬಕ್ಕಳ ದಿನಾ ಮನ್ಯಾಗಿಟ್ಕೊಂಡು ಕೂಡ್ರಾದು ಅಂದ್ರ ಹದ್ದಗೋಳ ಕಣ್ಣಲಿಂದ ಕೋಳಿ ಮರೀಗಿ ಕಾಯ್ದಾಂಗ. ನಾಳಿಗಿ ನಾಡ್ದ ಸಾವಳಗಿಗಿ ಹೋಗಿ ಬರ್ಬೇಕು. ಆ ದೊಡ್ ಕುಂಡಿ ಮಲ್ಲಪ್ಪ ಮಾಂವಗ ಹೇಳಿಟ್ರ ವರ ಹುಡುಕ್ತಾನ....

ಆದರ ಈ ಮುದುಕಿಗೊಂದು ಏನಾಗ್ತದೋ ಏನ್ ಸುದ್ದ್ಯೋ.... ಹಣ್ಣ ಜಂವಾ ಭಾಳ ನಿತ್ರಾಣಾಗ್ಯಾದ. ಒಂದೇ ಮಗಳಿಗಿ ಹಡದ ಮುದ್ಕಿ ಜಲ್ದೀನೇ ಘೋಕಳ ಆಯ್ತು. ಮೈಯಾಗ ಕೈ ಆಡ್ಸಿದರ ಎಲ್ಲಾ ಕಡ್ಲಿಂದ ಬರೇ ಎಲುಗೋಳೇ ವತ್ತತಾವ. ಮನ್ನಿ ಉಚ್ಚಿ ಮನ್ಯಾಗಿಲ್ದಾಗ ಗುಡಿಸಲ ಬಾಗ್ಲಾ ಮರಿ ಮಾಡಿ ಮುದುಕಿ ಮಗ್ಗಲಿಗಿ ಮಲಗಿದ್ನೆಲ್ಲ. ಅದಕ ರಂಬಿಸಬೇಕು, ಧೈರ್ಯಾ ಕುಡ್ಬೇಕು ಅಂತ ಮೈಯೆಲ್ಲಾ ಕೈಯಾಡ್ಸಿದ್ರ ಒಂದ ಕಡಿಯೆರೆ ಮೆತ್ತಗಿನ ಖಂಡಾ ಕೈಗಿ ಹತ್ತಲಿಲ್ಲ. ಬರೇ ಎಲುಗೋಳ ರಾಶಿನೇ. ಎದಿಯೆಲ್ಲಾ ಸೇದಿ ಹೋಗಿ ಬರೇ ಮುಟರಗೊಂಡ ಮಲಿ ಮೊಗ್ಗುಗೋಳು ಕೈಗೆ ಸಿಕ್ಕಾಗ ಮುದಕಿಯ ಕಣ್ಣಲ್ಲಿ ಮಿಂಚು ಹರ್ದಂಗ ಆಗಿತ್ತು. ಅದಕ ಎದಿಗೇ ತಗೊಂಡು ಗಲ್ಲದ ಮ್ಯಾಲ ತುಟಿಯಿಟ್ಟಾಗ ಯಾಕೋ ಗಳಗಳಾಂತ ಅತ್ತು ಬಿಟ್ತು. ಅದಕ್ಕನೂ ಏನೇನೋ ಚಿಂತಿಗೋಳೋ ಏನೋ.... ಒಂದು ಗಂಡಸ ಮಗಾ ಹುಟ್ಟಲಿಲ್ಲಂತ ಹಗಲಾ ರಾತರಿ ವಟವಟಾಂತ ಅನಕೋತ ತನಗ ತಾನೇ ಬಯ್ಕೋತಿತ್ತು. ಅದೇ ಮುದುಕಿ ಹರ್ಯಾದಾಗ ಏಟ್ಸರೇ ಸುಖಾ ಕೊಟ್ಟಿತ್ತು. ಹರ್ಯಾದಾಗ ಬರೇ ಮೈ ಸುಕಾ ಸಿಗ್ತದೇನೋ. ಪಿರೀತಿ ಗಿರೀತಿ ಅಂತ ಏನೇನೋ ಅನಕೊಂಡು ಮನಕೋತೀವಿ. ಆದರ ಅದೆಲ್ಲಾ ಮಾಯಾ ಮೋಯ್ನಿ. ಯ್ಯಾರಿಗಿ ಯಾರೂ ಪಿರೀತಿ ಮಾಡ್ತಾರೋ ಇಲ್ಲೋ... ಆದರ ಗಂಡಿಗಿ ಹೆಣ್ಣಿನ ಮೈ; ಹೆಣ್ಣಿಗಿ ಗಂಡಿನ ಮೈ ಮಾತರ ಬಕ್ಕಳ ಬಕ್ಕಳ ಬೇಕಾಗಿರ್ತಾದ. ಒಬ್ಬರ ಬಲ್ಲಿ ಒಬ್ಬರು ಮನಕೋಬೇಕನಸ್ತದ. ಸುಕಾ ಅನಸ್ತದ. ಆದರ ಈಗ ಮುದಕರಾದ ಮ್ಯಾಲ ಮನಸಿಗಿ ಸುಕಾ ಸಿಗ್ತದ. ಮುದಕಿ ಬಲ್ಲೀಗ ಏನೂ ಉಳದಿಲ್ಲ. ಮಲಿ, ಕುಂಡಿ ಎಲ್ಲ ಕರಗ್ಹೋಗಿ ಮುಟರಗೊಂಡಾವ. ಗಲ್ಲಾ ತುಟಿಯೆಲ್ಲಾ ಬತ್ತಿಹೋಗಿ ಕಣ್ಣ ಗುಳಿಬಿದ್ದಾವ. ನನ್ ಬಲ್ಲೀನೂ ಈಗ ಏನೂ ಉಳದಿಲ್ಲ, ಎಲ್ಲಾ ಖಾಲಿ ಖಾಲಿ ಅಳ್ಳಿಪಿಳ್ಳಿ. ಮೈಯಂಬಾದು ಕಳ್ಳರು ಹೊಡ್ದ ಹಾದಿ ಯಾಗ್ಯಾದ. ಆದರೂ ಮುದಕಿ ಬಲ್ಲಿ ಹ್ವಾದರ ಏನೋ ಆಸರಾ ಸಿಕ್ಕ್ಯಾಂಗ ಆಗ್ತದ. ಸುಕಾ ಅನಸ್ತದ. ಇದೇ ಖರೇ ಸುಕಾನೋ ಏನ್ ಮಣ್ಣೋ ಯಾರಿಗ್ಗೊತ್ತು. ಆದರ ಮುದಕಿ ಈಗ ನೆಲಾನೇ ಹಿಡದಾದ. ಏನು ಮಾಡ್ಬೇಕಂತೀನಿ. ಚಿಂದಪ್ಪ, ಹಕೀಮ, ಗೊಲ್ಲರ ರಾಮ್ಯಾ, ಮಠದ ಮರಿಸಾಮಿ ಮಸೂತಿ ಮುಲ್ಲಾ ಎಲ್ಲೋರೂ ಏನೇನೋ ಆಗಸುದ್ದ್ಯಾ

ಕೊಟ್ಟರೂನೂ ಎಳ್ಳೋಟೂ ಪಾಯಿದಾ ಕಾಣ್ಲಂಗಿಲ್ಲಾಗ್ಯಾದ... ಹಿನಾ ಒಂದೆಡ್ಡ ದಿನಾ ನೋಡಿ ಆರಾಮ ಆಗಲಿಲ್ಲಂದ್ರ ಕಲಬುರ್ಗಿಗೇ ತಂದು ಸರಕಾರ ದವಾಖಾನ್ಯಾಗೇ ಸೇರ್ಸಿ ಮಾಡ್ಬೇಕು....

"ಮುತ್ತ್ಯಾ... ಏಯ್ ಮುತ್ತ್ಯಾ.... ಏನು ಯೋಚ್ನಿ ಮಾಡ್ಲಕ್ಹತ್ತಿದೋ... ಹಳ್ಳಿ ಕಡ್ಲಿಂದ ಏನೋ ಆವಾಜ ಕೇಳಸಲಕ್ಹತ್ತ್ಯಾದ ನೋಡು."

ಮೈಲಾರಿಯ ದನಿಗೆ ಫಕೀರಪ್ಪ ಬೆಚ್ಚಿಬಿದ್ದು ಯೋಚನೆಗಳ ಬಲೆಯಿಂದ ಪಾರಾದ. ಅಷ್ಟರಲ್ಲಿ ಅವರು ಹಳ್ಳಿ ಸಮೀಪಿಸಿದ್ದರು. ಮುಂದಿನ ನೆಂಡಕಿ ನಾಲಾ ದಾಟಿದ್ರೇ ಹೊಲಗೇರಿ. ಅಲ್ಲಿಂದ್ಲೇ ಹೆಂಗಸರ ಅಳುವಿನ ದನಿ ಹರ್ದುಬರುತ್ತಿದ್ದುವು.

"ಯವ್ವಾ... ಅಪ್ಪ ಬರಾತನಕಾ ನೀ ಜಿಂವಾ ಹಿಡಿಲಿಲ್ಲಲ್ಲೇ ತಾಯೀ.... ಯಪ್ಪ ಬಂದು ಕೇಳ್ದರ ನಾಯೇನು ಹೇಳಲೇ ನನ್ ಕಾಶೀ... ನನ್ ಹಡದವ್ವಾ..."

"ಅತ್ತಿ..... ಹರ್ಯಾದ ಮಗಳಿಗಿ ಮದಿ ಮಾಡ್ಲಾರ್ದೆ ಹೊಂಟು ಹ್ವಾದನೇ ಅತ್ತೀ.... ಅತ್ತೀ.... ಇನ್ ಲಚ್ಚಿಗಿ ಯಾರು ಗತಿಯೇ ಯವ್ವಾ... ಲಚ್ಚಿಗಿ ಪರದೇಸಿ ಮಾಡಿ ಹೊಂಟಿಯೇನೇ ಯವ್ವಾ...." ಎನ್ನುತ್ತ ರಾಗಬದ್ಧವಾಗಿ ಅಳುವ ಮಿಶ್ರದನಿಗಳ ರೋದನ ಉದ್ದಕ್ಕೂ ಓಡಿಬಂದು ಫಕೀರಪ್ಪನ ಕಿವಿಗೆ ಬರಸಿಡಿಲಿನಂತೆ ಅಪ್ಪಳಿಸಿದುವು. ಮುದುಕ ತಲೆಯ ಮೇಲಿನ ಗಂಟು ಅಲ್ಲೇ ಬಿಸಾಡಿ ಮನೆಯೆಡೆಗೆ "ಮುದ್ಕೀ...." ಎನ್ನುತ್ತ ಚೀರುತ್ತ ಓಡತೊಡಗಿದ.

"ನಿಂದ್ರೋ ಮುತ್ತ್ಯಾ.... ಹಾಂಗ ಗಾಬರಿ ಬೀಳಬ್ಯಾಡೋ ಮುತ್ತ್ಯಾ" ಎನ್ನುತ್ತ ಮೈಲಾರಿ ಮುದುಕನ ಗಂಟತ್ತಿಕೊಳ್ಳುತ್ತ ತಾನೂ ಅವನ ಬೆನ್ನು ಹತ್ತಿ ಓಡತೊಡಗಿದ.

"ಮುದ್ಕೀ.... ಮುದ್ಕೀ...." ಎಂದು ಒದರುತ್ತ ಓಡಿಬಂದ ಮುದುಕ ಫಕೀರಪ್ಪ ಮುದುಕಿಯ ಹೆಣದ ಮೇಲೆ ಬಿದ್ದು ದನಿ ತೆಗೆದು ಅಳಲಾರಂಭಿಸಿದ.

"ಯಪ್ಪೋ.... ಯಪ್ಪೋ......" ಎಂದು ಗೋಳಾಡುತ್ತ ಚಡಪಡಿಸುತ್ತ ಲಚ್ಚಿ ಅಪ್ಪ ಅವ್ವ ಇಬ್ಬರ ಮೇಲೂ ಬಿದ್ದು ಅಳಲಾರಂಭಿಸಿದಳು. ಚಿಮಣಿ ಎಣ್ಣೆಯ ತಗಡಿನ ದೀಪ ಕ್ಷೀಣ ಹೊಗೆ ಕಾರುತ್ತಿತ್ತು. ಗುಡಿಸಲು ತುಂಬ ಮಸಕು ಬೆಳಕು. ವಿಕಾರವಾಗಿ ಕಾಣುವ ಜನರ ನೆರಳುಗಳು. ಗಂಡು-ಹೆಣ್ಣುಗಳ ಮಿಶ್ರದನಿಗಳು. ಮಾತು-ಅಳು, ಸಂತಾಪ ಸೂಚಕ ಶಬ್ದಗಳಿಂದ ಸಣ್ಣ ಝೋಪಡಿ ಗಾಬರಿಯಾಗಿ ದಂಗು ಬಡಿದು ನಿಂತಿತ್ತು.

ಏ...... ಫಕೀರಪ್ಪಾ... ರಾತರಿ ಅಳಬಾರ್ದೋ ಹೆಣಕ್ಕಾ ತಮ್ಮಾ..... ಅದರ ಜೆಂವಾ ಶಿವನ ಬಲ್ಲಿ ನಡದಿರ್ತಾದಂತ. ನೀವೆಲ್ಲಾ ರಾತರಿ ಅತ್ತರ ನಿಮ್ ಕಣ್ಣಾಗಿನ ಒಂದೊಂದು ಹನಿ ನೀರ ಸಮುದರ ಆಗಿ ಅವರ ಹಾದಿ ಅಡ್ಡಗಟ್ತಾವಂತೋ ತಮ್ಮಾ ಅಳಬ್ಯಾಡ್ರೀ... ಮುದುಕಿ ಮಾರಿ ಮ್ಯಾಲ ಏನರೆ ಹೊಚ್ಚಿ ಹೊರಗೆ ಬರ್ರೆ...."

ಗುಂಪಿನಲ್ಲಿಯ ಹಣ್ಣು ಹಣ್ಣು ಮುದುಕ ಶೀನಿಂಗಪ್ಪ ಹಾಗೆ ನುಡಿಯುತ್ತ ಹೊರಬಂದ.

"ಹೆಣದ ಹೊಟ್ಟೆ ಮ್ಯಾಲ ಕುಡಗಿಲರೆ, ಹಾರಿಯರೆ, ಇಡ್ರೋ ಗುರ್ಲಿಂಗಪ್ಪಾ... ನಡರಾತರ್ಯಾಗ ದೆವ್ವಗೋಳು ಬಂದು ಹೆಣಕ್ಕ ಎಬ್ಬಿಸಗೊಂಡು ಹೋಗ್ತಾವ"

ಚೆಂಬಸ್ಸವ್ವನ ಗೊಗ್ಗರು ದನಿಗೆ ಗುರ್ಲಿಂಗಪ್ಪ ಸಿಡುಕಿದ.

"ಯೆಲ್ಲಾ ಇಟ್ಟೇನಿ, ಸುಮ್ಕಿರೆ ನಿನ್ನವ್ವನಾ... ನಿಂದೊಂದು ಕಿರಿಕಿರಿ"

ಹೆಣದ ಮೇಲಿನಿಂದ ಫಕೀರಪ್ಪನನ್ನೂ ಲಚ್ಚಿಯನ್ನೂ ಇಬ್ಬರು ಎಳೆದು ಹೊರಗೆ ಕರೆತಂದರು. ಗುಡಿಸಲ ಮುಂದಿನ ಅಂಗಳ ಎಂದು ಕರೆಸಿಕೊಳ್ಳುವ ಬಯಲಿನಲ್ಲಿ ಎಲ್ಲರೂ ಕುಳಿತುಕೊಂಡರು. ಎಲೆ ತಂಬಾಕಿನ ಚೀಲಗಳು ಹೊರ ಬಂದವು. ಮಾತುಗಳು ಹಾರುವ ಕಪ್ಪಗಳಾದವು. ಲಚ್ಚಿಯ ಕುಸು ಕುಸು ಅಳು ಕ್ಷೀಣದನಿಯಲ್ಲಿ ರಾತ್ರಿಯ ಹೊಳೆನೀರಿನ ಸದ್ದಿನಂತೆ ಹರಿದಿತ್ತು. ಲಗಸಿಮಿ ಗುಡಿಯ ಹಂತ್ಯಾಕಿನ ಹೋಟೇಲ್ ಸಿವರುದ್ರ ತನ್ನ ಚಾದಂಗಡಿಯಲ್ಲಿ ಕುಳಿತೇ ಒದರಿದ.

"ಛಾ ಕಾಸಿ ತರ್ಲೇನ್ರಪ್ಪೋ... ಬೆಳಗಾನಾ ಹೆಣಾ ಕಾಯ್ಲಕ ಕುಂತೀರಿ, ನಿದ್ದಿ ಬರ್ತದಲಾ....."

"ಕೇಳ್ತಿಯೋನ್ಲೇ ನನ್ಮಗನೇ.... ತತ್ತಾ ಇಕಾಡಿ" ಶೀನಿಂಗಪ್ಪ ಮುತ್ತ್ಯಾನೂ ಕುಳಿತಲ್ಲಿಂದಲೇ ಉತ್ತರದ ಒದರು ದನಿ ರವಾನಿಸಿದ.

ಹೊಲಗೇರಿಗೂ ಲಗಸಿಮಿ ಗುಡೀಗೂ ಎರಡು ಮಾರಿನ ಅಂತರ. ಲಗಸಿಮಿ ಗುಡಿ ಅಂದ್ರ ಆಜೂ ಬಾಜೂ ಟೊಂಕಮಟ್ಟ ಗೋಡೆ ಏರಿಸಿ ಮೇಲೆ ಕಲ್ಲು ಹೊದೆಸಿ ಕಟ್ಟಿದ ಸಣ್ಣ ಗುಡಿ. ಹೊಲಗೇರ್ಯಾಗೇ ಒಂದುನೂ ಮಣ್ಣಿನ ಮನಿ ಇರಲಾರ್ದಾಗ ಇನ್ನ ಆ ಕೇರಿ ಹಂತ್ಯಾಕಿರೋ ಲಗಸಿಮಿ ದೇವ್ತಿಗೆಲ್ಲಿ ದೊಡ್ಡ ಗುಡಿ ಇರೋದು? ಹೇಳಿ ಕೇಳಿ ಅಕಿ ಹೊಲೇರ ಲಗಸಿಮಿ. ಮಾರವಾಡಿಯವರ್ದು,

ಕ್ವಾಮಟಗೇರ್ದು ಲಕ್ಷ್ಮಿ ಆಗಿದ್ದಳಂದರ ಆ ಮಾತೇ ಬೇರೆಯಾಗಿರುತ್ತಿತ್ತು. ಗುಡಿಯ ಸುತ್ತಮುತ್ತಾ ಬಹಳಷ್ಟು ಜಗೆ ಒಳಗ ಮಾಡ್ಕೊಂಡು ಬರೇ ಗೋರಕಲ್ಲಿನ ಆವಾರದ ಗ್ವಾಡಿ ಏರಿಸಿದ್ದರು. ಸೂಪ್ರರ ಹರ್‍ಯಾದ ಪಾರಗೋಳು ಕಲ್ಲಿನ ಗೋಡೆಗೆ ಎರಡೊರಸಿಗೊಮ್ಮೆ ಸುಣ್ಣ ಹಚ್ಚಿ ಮ್ಯಾಲ ಚಾಜದಲ್ಲಿಂದ ಉದ್ದುದ್ದ ಪಟ್ಟಿ ಎಳೆದಿದ್ರು. ಗುಡಿಯ ಮಗ್ಗುಲು ಪರಸಿಯ ಗೋಡೆಯ ಮೇಲೆ ಒಂದು ಕಡೆ ಬಾಯ್ತೆರೆದು ನಿಂತ ಹುಲಿಯ ಚಿತ್ತಾರ. ಮತ್ತೊಂದು ಮಗ್ಗುಲಲ್ಲಿ ಗಂಡು ಹೆಣ್ಣು ಸಿಂಹಗಳೆರಡು ಕುಂಡೆಗೆ ಕುಂಡೆ ಸೇರಿಸಿ ನಿಂತು ಮಗಿಲಿಗೆ ಮಾಡಿದ್ದುವು. ಅಲ್ಲಲ್ಲಿ ಪೌಳಿಯ ಗೋಡೆಯ ಮೇಲೆ ಹೊಲೆಯರ ಹೆಂಗಸರು ಹಚ್ಚಿದ ಸೆಗಣಿ ಕುಳ್ಳುಗಳ ಅಂದದ ಚಿತ್ರಗಳು.

ಚಾದಂಗಡಿ ಸಿವರುದ್ರ ಚಾ ಕಾಸಿ, ಮೂತಿ-ಕುಂಡಿ ಎಡ್ಡೂ ಕರ್‍ರಗ ಮಾಡ್ಕೊಂಡಿದ್ದ ಸಿಲಾವರದ ಕಟಲಿನಲ್ಲಿ ಚಾ ತುಂಬಿಸಿಕೊಂಡು ಬಂದ. ಕುಂತವರಿಗೆಲ್ಲಾ ಒಡಕ ಗಿಲಾಸಗಳಲ್ಲಿ ಚಾ ಹಾಕಿಕೊಟ್ಟು ತಾನು ಚುಟ್ಟದ ಮಾರಿಗೆ ಬೆಂಕಿ ಹೊತ್ತಿಸಿದ.

ಮುಗಿಲಿಗೆ ಮೆತ್ತಿದ ಕತ್ತಲೆಯನ್ನೊರಸುತ್ತ ಬೆಳದಿಂಗಳು ಆಟವಾಡ ತೊಡಗಿತು. ಹೊಲಗೇರಿಯಲ್ಲಿಯ ಗುಡಿಸಲುಗಳು ನಿಚ್ಚಳವಾಗಿ, ಅಲ್ಲಿ ಫಕೀರಪ್ಪನ ಅಂಗಳದಲ್ಲಿ ಕುಳಿತ ಮಂದಿ ಎಲ್ಲ ಮಸುಕು ಮಸಕಾಗಿ ಕಾಣಿಸುತ್ತಿದ್ದರು. ಯಾರಿಗೂ ಗುಡಿಸಲಿನೊಳಗಿನ ಸತ್ತ ಹೆಣದ ಖಬರ ಇರಲಿಲ್ಲ. ಅತ್ತೂ ಅತ್ತೂ ಸುಸ್ತಾಗಿದ್ದ ಲಚ್ಚಿ ಸುಮ್ಮನೆ ಕುಳಿತು ತೂಕಡಿಸುತ್ತಿದ್ದಳು. ಎಚ್ಚರ ಬಂದಾಗೊಮ್ಮೆ ಯವ್ವೋ.... ಎಂದು ಅಳುದನಿ ಹೊರಡಿಸಿ ಮತ್ತೆ ತೂಕಡಿಕೆಯಲ್ಲಿ ತುಟಿ ಮುಚ್ಚುತ್ತಿದ್ದಳು. ಫಕೀರಪ್ಪ ತನ್ನ ಬಾಳಿನ ಸತ್ತ ನೆನಪುಗಳಲ್ಲಿ ಜೀವಂತವಾಗುವುದಕ್ಕೆ ಒದ್ದಾಡುತ್ತಿದ್ದ.

"ಹಿಂಗೇ ಆಗಿತ್ತೋ ಮಾಂವಾ... ನಮ್ಮಕ್ಕನ ಭಾವನ ಮಗನ ಹೆಂಣ್ತಿ ತಂಗಿ ಗಂಡನ ಅಕ್ಕ ಹಸೀ ಬಾಣ್ತಿ ಹಡ್ದು ಸತ್ತಿದ್ಳು. ರಾತರಿ ಜೀವಾ ಹೋಗಿತ್ತಂತ, ಮಣ್ಣ ಮಾಡಲಾರ್ದೆ ಹಂಗೇ ಇಟ್ಟಿದ್ರು. ಹೆಣದ ಹೊಟ್ಟೆ ಮ್ಯಾಲ ಕಬ್ಬಿಣದ ಸಾಮಾನ ಏನರೆ ಇಡಾದು ಯಾರಿಗಿನೂ ನೆನಪೇ ಇರಲಿಲ್ಲಂತ. ನಡುರಾತರ್‍ಯಾಗ ಹೆಣಾ ಎದ್ದು ಕುಂತು ಆಕಡಸಗೋತ ತೆಲಿಕೆರಕೋತ 'ಕುಡ್ಲಿಕ್ ನೀರ ಕುಡ್ರೋ ಭೋಸಡೀ ಮಕ್ಕಳ್ರ್ಯಾ....' ಅಂತ ಒದರ್‍ತಂತ. ಅದು ನೆನಪ ಬಂದ್ರ ಈಗ ಸುದ್ದಾ ಮೈಮ್ಯಾಲ ಮುಳ್ಳ ಬರ್‍ತಾವೋ ಮಾಂವಾ.....,"

ಗಂಡ ಸತ್ತ ನಾಕೊರೆಸಿನ ಮ್ಯಾಲ ಗೌಡಗ ಕಳ್ಳ ಬಸಿರಾಗಿ ಹೊಟ್ಟೆ ಕೆಡವಿಕೊಂಡು, ಹರ‍್ಯಾದ ಹೆಂಗಸರಿಗಿ ಆಚಾರ ಹೇಳುತ್ತಿದ್ದ ಕಾಳವ್ವನ ಅನುಭವದ ಮಾತಿಗೆ ಪರಸುರಾಮ ಹೂಂಗುಟ್ಟಿದ.

"ಚಾ ಹಿಂಗ್ಯಾಕ ಕಾಸಗೊಂಡು ಬಂದಿದೆಲೆ ದರವೇಸಿ ನನ್ಮಗನೇ.... ಗುಡಸಲ್ದಾಗ ಹೆಣಾ ಬಿದ್ದರ ನಮ್ಮ ಬಾಯಿಗಿ ರುಚಿನೇ ತಿಳೆಂಗಿಲ್ಲಾಂತ ಮಾಡ್ದೇನು? ಐದುಡ್ಡ ಕಮ್ಮ ಕೊಟ್ರ ತಗೋತೇನ್ಲೇ ಸಿರುದ್ರ್ಯಾ?" ಮಾದರ ಕರೆಪ್ಪ ಒಂದು ಗುಟುಕು ಚಾ ಕುಡ್ದು ಒದರ‍್ಯಾಡ್ಲಕ ಸುರು ಮಾಡ್ದ. ಸುಟ್ಟು ಆರಿಹೋದ ತನ್ನ ಚುಟ್ಟ ನೆಲಕ್ಕೊರಸುತ್ತ ಉತ್ತರಿಸಿದ ಸಿವರುದ್ರ.

"ಹಿಂತಾ ನಡುರಾತರ‍್ಯಾಗ ಎಮ್ಮಿಗ್ಗೋಳು ಹಾಲೆಲಿಂದ ಕುಡ್ತಾವ್ಗೋ ಕರೆಪ್ಪ. ಗಡಗಿ ತಳದಾಗೀಸು ಹಾಲಿದ್ದುವು. ಅವೇ ಹಾಕಿ ಮಾಡ್ಕೊಂಡು ಬಂದೀನಿ. ಚಾ ಥಂದಾಗಿಲ್ಲಂತ ಜಗೆಳಾ ಆಡ್ಲಕ ಇದೇನು 'ಲಗ್ಗಣ'ದಾಗಿನ ಥಾ ಯೇನು? ಮದಲ ನಿಮ್ ಹೆಣಕ್ಕ ಅಳ್ರಿ. ಹಿಂದಾಗಡಿ ನನ್ ಚಾಕ ಅಳಾಕೆಂತ" ಎಂದು ಧಡಕ್ಕನೆ ಎದ್ದು ನಿಂತ. ಮೈಲಾರಿನೇ ಅಡ್ಡ ಬಂದು ರಾಜಿ ಮಾಡಿಸಿದ ಮೇಲೆ ತನ್ ರೊಕ್ಕಾ ಬರಾಬ್ಬರಿ ಎಣಸಿಗೊಂಡು ಸಿವರುದ್ರ ತನ್ ಹೊಟೇಲ್ ಕಡೆಗೆ ತಿರುಗಿ ಹೊರಟು ಹೋದ.

"ಪಾಪ..... ಮುದ್ಕಿ.... ಏನೂ ಕಾಣ್ಲಿಲ್ಲ. ಗಂಡಸ ಮಗನಿಗಿ ಹಡ್ದು ಸೊಸಿಗಿ ಕರಸ್ಗೊಲಿಲ್ಲ. ಮಗಳಿಗಿ ಮದಿ ಮಾಡಿಕೊಟ್ಟು ಅಳ್ಯಾನ ಮಾರಿ ನೋಡ್ಲಿಲ್ಲ. ಇದೇ ಚಿಂತ್ಯಾಗೇ ಸುಟ್ಟು ಸುಟ್ಟು ಸುಣ್ಣಾ ಆಗಿತ್ತು. ಹೆಣ್ಣ ಜಿಂವಾ ಹೇಳಿ ಕೇಳಿ ಏಟಂತ ತಾಳಿತು. ಇವತ್ ಗುಟಕ್ ಅಂತು. ಲಚ್ಚಿ ಪರದೇಶಿ ಆಯ್ತು ಈಗ...."

ನೆರೆ ಗುಡಿಸಲ ಒಡತಿ ಶೇಕವ್ವನ ಸಂತಾಪದ ದನಿ. ಶೀನಿಂಗಪ್ಪ ಮುತ್ತ್ಯಾ ನೆಲದ ಮೇಲೆ ಕಡ್ಡಿಯಿಂದ ಗೀರುತ್ತ ಅವಳ ಮಾತಿನಲ್ಲಿ ಮಾತು ಕಲೆಸಿದ.

"ಲಚ್ಚಿಯೇನೆ, ತೊಳ್ದ ಮುತ್ತಾಗ್ಯಾದ ಪೋರಿ ಯಾವರೆ ಮೈಯಾಗ ಕಸು ಇದ್ದ ಹರ‍್ಯಾದ ಹಸಿಮಗ ಬಂದು ಅಕಿನ ಹಣಿಗಿ ಭಾಸಿಂಗ ಕಟ್ಟಿ ಕೊಳ್ಳಾಗ ತಾಳಿ ಬಿಗಿತಾನ. ಫಕೀರಪ್ಪಂದೇ ಪಂಚೇತಿ ನೋಡು. ಮುದುಕ ಅಕಾಡಿ ಇಕಾಡಿ ಅಟ್ಟಲ ಬಡೀತಾದ. ಊರಾಗ ಮನಿ, ಅಡವ್ಯಾಗ ಹೊಲಾ ಇಲ್ದ ಹೊಲೇರು ನಾವು. ಮುಪ್ಪಿನ ಕಾಲಕ ಹಗಲತ್ತಿನ ತೊಗಲಬಾವಲಿ ಹಂಗ ಆ ಗ್ವಾಡಿಗಿ. ಈ ಗ್ವಾಡಿಗಿ

ಬಡಕೋತ ಒದ್ದಾಡಾದೇ... ಈ ಸಂಸಾರ, ಹೆಂಡ್ರು ಮಕ್ಕು ಅಂತ ಯಾಂವ ಮಾಡ್ಯಾನೋ ರಂಡಿ ಮಗಾ.... ಅಂವನಿಗಿ ಮೆಟ್ಟ ತಗೊಂಡು ಹೊಡಿಬೇಕು."

ಶೀನಿಂಗಪ್ಪನಿಗೆ ತನ್ನ ಮುಪ್ಪು, ಅದರ ಅಸಹಾಯಕತೆ, ಸೊಸೆಯ ಸಿಡಿಮಿಡಿ, ಮಗನ ಅಲಕ್ಷ್ಯಗಳೆಲ್ಲ ಧುತ್ತೆಂದು ಮುಂದೆ ಬಂದು ನಿಂತು ಅವನಿಂದ ಈ ಮಾತು ಆಡಿಸಿದ್ದುವು.

ಆ ಮಾತು ಈ ಮಾತು ಅಡುವುದರಲ್ಲಿಯೇ ಮೂಡಲ ಮನೆಗೆ ಬೆಂಕಿ ಹತ್ತಿದಂತೆ ಕೆಂಪು ಮೇಲೆದ್ದು ನಿಂತು ಬೆಳಗಾಗುವುದನ್ನು ಬೊಬ್ಬೆ ಹಾಕಿತು.

"ಕೆಂಪ ಹರಿಲಕ್ಹತ್ತಾದ. ನಡೀರನ್ನ ಮುಂದಿನ ಕೆಲ್ಸ ನೋಡ್ಕೋ ಮಾರಿ. ಯಾ ಊರಿಗೆರೆ ಸುದ್ದಿ ಕಳ್ಸಬೇಕೇನೋ ಫಕೀರಪ್ಪಗ ಕೇಳ್ರಿ...." ಎನ್ನುತ್ತ ಶೀನಿಂಗಪ್ಪ ಮತ್ತೊಂದು ಚುಟ್ಟಾ ತೆಗೆದು ಕಡ್ಡಿಗೀರಿ ಹೊತ್ತಿಸಿ ಬಾಯಿಗಿಟ್ಟುಕೊಂಡ.

ಆಚೆ ಗುಡಿಸಲಿನ ಗಂಗ್ವಾಯಿಯ ಹುಂಜ ಕೂಗಿತು. ಕಬ್ಬಲಿಗೇರ್ಯಾನ ನಾಯಿಗಳು ಬೊಗಳಿದವು. ಲಚ್ಚಿ ನಿದ್ದೆಯಿಂದೆಚ್ಚೆತ್ತು ಯವ್ವೋ.... ಎಂದು ದನಿ ತೆಗೆದು ಅಳು ಹೊರಹಾಕಿದಳು.

ಗೌಡ, ಕುಲಕರ್ಣಿ ಇಬ್ಬರ ಮನೆ ಬಿಟ್ಟರೆ ಉಳದೆಲ್ಲವೂ ಗುಡಿಸಲುಗಳೇ ಇರುವ ಹಿಂದುಳಿದ ಹಳ್ಳಿ ಭೀಮಳ್ಳಿ. ಅಂತೆಯೇ ಅಲ್ಲಿ ಹಿಂದುಳಿದ ಹತ್ತು ಹದಿನೆಂಟು ಕುಲಗಳ ಬಡವರದೇ ಸಂಖ್ಯೆ ಮುಂದು. ಕುರುಬ, ಬೇಡ, ಕಂಬಾರ, ಕಬ್ಬಲಿಗ, ಹೊಲೆಯ, ಮಾದಿಗ, ಉಪ್ಪಾರ, ಮೇದ ಮೊದಲಾದ ಕೆಳವರ್ಗದ ಜನರ ಗುಡಿಸಲುಗಳು. ಹಳ್ಳಿಯ ನಡುವೆ ಸೊಕ್ಕಿನಿಂದ ಉಕ್ಕಿ ಹರಿವ ಹಳ್ಳ. ತೊರೆಯ ಎರಡೂ ಬದಿಗಳಲ್ಲಿ ಹರಿದು ಹಂಚಿ ಹೋಗಿವೆ. ತೊರೆಯ ಉತ್ತರಕ್ಕೆ ಅದರ ದಂಡೆಯನ್ನು ತೆಕ್ಕೆಯಲ್ಲಿಟ್ಟುಕೊಂಡು ಮಲಗಿರುವ ಚೆಂಬಸ್ಸಪ್ಪ ಗೌಡನ ಬಾಳೆ, ಕಬ್ಬಿನ ತೋಟ. ಅದರ ಮುಂದೆ ಎಡಕ್ಕೆ ಉದ್ದಕ್ಕೂ ಕರ್‍ರಗೆ ಹರಡಿಬಿದ್ದ ಎರೆಮಣ್ಣಿನ ಹೊಲವೆಲ್ಲ ಬಾಬುರಾವ ಕುಲಕರ್ಣಿಗೆ ಸೇರಿದ್ದು. ಸೇರಿದ್ದು ಅಂದರೆ ಅವರ ಅಜ್ಜ ಮುತ್ತಜ್ಜನ ಕಾಲದಿಂದ ಬಡವರ ಹೊಲಗಳೆಲ್ಲ ಅವರ ಕಾಲ ಕೆಳಗೆ ಗಿರವಿ ಬಿದ್ದೂ ಬಿದ್ದೂ ಒದ್ದಾಡಿ, ಬಡ್ಡಿ, ಚಕ್ರಬಡ್ಡಿ ಅಂತ ಸೇರಿಸಿ ಒಂದು ದಿನ ಅವೆಲ್ಲ ಹೊಲಗಳನ್ನು ಹಳ್ಳಿಯ ಹೆಡ್ಡರ ಹೆಬ್ಬೆಟ್ಟೊತ್ತಿಸಿಕೊಂಡು ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದು. ಈಗನ ರಾಮರಾವ ಕುಲಕರ್ಣಿಯು ಸಾಮಾನ್ಯನಲ್ಲ. ಬಾಯಿ ಹರಕು, ಕಚ್ಚೆ ಹರಕು: ಆದರ ಕಿಸೆ ಮಾತ್ರ ಗಟ್ಟಿ. ಹಾರುವ ಕುಲಕರ್ಣಿ, ಬಣಜಿಗ

ಗೌಡರು ದೊಡ್ಡ ಕುಲದ ಮಡಿವಂತರು. ಅವರಿಗೆ ಭಾಸಗಿ ಬನದಿಂದ ಬರುವ ತಾಜಾ ಸೇಂದಿಯೇ ಆಗಬೇಕು. ಈಚಲು ಮರದಿಂದ ನೇರವಾಗಿ ಕೆಳಗಿಳಿದ ಸೇಂದಿಗೆ ಮೈಲಿಗೆ ಎಲ್ಲಿಯದು? ದಲಿತರು ಮುಟ್ಟಿದರೆ ಮಾತ್ರ ಮೈಲಿಗೆ. ಅವರು ಸೇಂದಿ ಬನ ಹೊಕ್ಕಾಗ ಹಳ್ಳಿಗರೆಲ್ಲ ಬನದ ಸೀಮೆ ಬಿಟ್ಟು ಮಾರು ದೂರ ನಿಲ್ಲಬೇಕು. ಅವರು ಕುಡಿದು ತೂರಾಡುತ್ತ ಬಂದಾಗ ಇವರು ಅವರನ್ನು ಅವರವರ ಮನೆಗಳಿಗೆ ಹೊತ್ತು ಹಾಕಬೇಕು. ಕೆಳಜಾತಿಯವರಿರುವುದೇ ಇಂಥ ಮಡಿ ಜಾತಿಯವರ ಸೇವೆಗೆ ಅಲ್ಲವೆ?

ಫಕೀರಪ್ಪ ಲಗಸಿಮಿ ಗುಡಿಯ ಪೌಳಿಯ ಹೊರಗಿನ ರಾಶಿಕಲ್ಲುಗಳ ಮೇಲೆ ಕುಂಡೆಹಚ್ಚಿ ಎಳೆಬಿಸಿಲಿಗೆ ಮೈಯೊಡ್ಡಿ ಬೀಡಿ ಸೇದುತ್ತಿದ್ದ. ಬದಿಯಲ್ಲಿಯ ಲಚ್ಚಿಯ ಕುರಿಮರಿ ಕಲ್ಲುಗಳ ಸಂದಿಗೊಂದಿಲುಗಳಲ್ಲಿಯ ಹಸುರಿಗೆ ನಾಲಿಗೆಯಾಡಿಸುತ್ತಿತ್ತು.

"ಏ ಮುತ್ತ್ಯಾ... ಮುತ್ತ್ಯೋ....."

ಕಾಶಪ್ಪ ಊರುಕಡೆಯಿಂದ ದಾಪುಗಾಲು ಹಾಕುತ್ತಲೇ ಬಂದು ಫಕೀರಪ್ಪನ ಮುಂದೆ ನಿಂತು ಮತ್ತೆ ಕರೆದ.

"ಮುತ್ತ್ಯಾ.... ಮುತ್ತ್ಯಾ....."

ಆಗಸಕ್ಕೆ ಕಣ್ಣು ಕಲೆಸಿ ಕುಳಿತು ಅಲ್ಲೆಲ್ಲಿಯೋ ತನ್ನ ಮುದುಕಿಯನ್ನು ಹುಡುಕುತ್ತಿದ್ದ ಫಕೀರಪ್ಪ ಫಕ್ಕನೆ ಎಗರಿಬಿದ್ದು ಎಚ್ಚೆತ್ತ.

"ಯಾಕ್ಲಾ ಕಾಶ್ಯಾ?"

ತನ್ನ ಹಗಲುಗನಸಿಗೆ ಬೆಂಕಿಯಿಟ್ಟ ಕಾಶ್ಯಾನ ಮೇಲೆ ಅವನಿಗೆ ಎಲ್ಲಿಲ್ಲದ ಸಿಟ್ಟು.

"ಕುಲಕರ್ಣೇರ ಕ್ವಾಣಾ ಸತ್ತಾದೋ ಮುತ್ತ್ಯಾ.... ತಗೊಂಡು ಹೋಗ್ರಿ ಅಂದ್ರು. ನಿನಗ ಹೇಳ್ಲಿಕ ಬಂದೇನಿ. ಕೇರ್ಯಾಗ ಎಲ್ಲೋರಿಗಿನೂ ಕರ್ಕೊಂಡು ಹೋಗ್ತೀನಿ."

ಕಾಶಪ್ಪ ಉಸಿರು ಬಿಡದೆ ಉಸುರಿದ.

"ಕ್ವಾಣಾ ಸತ್ತದಾ? ಅದುನೂ ಕುಲಕರ್ಣೇದು. ಹುಂ.... ಅವನ ಕ್ವಾಣಾಗೋಳೇನೋ ಸಾಯ್ತಾವೋ ಪಾರ. ಆದರ ಆವುದರ ಬೆದಿ ಸಾಯಂಗಿಲ್ಲ ನೋಡು. ಅದು ಹೋಗಿ ಕುಲಕರ್ಣಿ ಕುಂಡ್ಯಾಗೇ ಸೇರ್ಕೋತಾದ."

"ಈಗೇನು ಅದಕ ಕೇರಿಗಿ ತರ್ಬೇಕೋ ಬ್ಯಾಡೋ ಮುತ್ತ್ಯಾ? ಮುದುಕನ ಅಸಂಬದ್ಧ ಮಾತಿಗೆ ಬೇಸತ್ತು ಕಾಶಪ್ಪ ಕೇಳಿದ.

"ತಗಂಬರ್ರಿ..... ತಗಂಬರ್ರಿ... ತಿನ್ರಿ.... ತಿನ್ರ್ರೋ.... ಅವರ ಸತ್ತ ದನ ಗೋಳ ಖಂಡಾ ತಿಲ್ಲಿಕ್ಕೇ ಹುಟ್ಟದವ್ರು ನಾವು..... ಅಲ್ಲೋ ತಾಯಗ್ಗಂಡ್ರೇ. ಆ ಕುಲಕಣ್ಣಿ ಗೋಡಿಗೋಳ ಖಂಡಾನೇ ತಿನ್ರ್ರೋ.... ಅದು ಹರಕೊಂಡು ತಿಲ್ಲಕ ನಿಮ್ಮ ಹಲ್ಲಗೋಳದಾಗ ಸಗತಿ ಇಲ್ಲ್ರೋ.... ಅವ್ರು ರಂಡಿ ಮಕ್ಳು ತಮ್ಮ ಖಂಡಾತಿನ ಗುಡಸಲಾರ್ದ್ಹಾಂಗ ನಿಮ್ ಹಲ್ಲಿನ ಬೇರೆ ಕಿತ್ತ್ಯಾರ.... ಬೇರೇ ಕಿತ್ತ್ಯಾರ."

ಫಕೀರಪ್ಪ ಬಡಬಡಿಸತೊಡಗಿದ. ಕಾಶಪ್ಪ ಅಲ್ಲಿ ನಿಲ್ಲದೆ ಮಾದಿಗರ ಗುಡಿಸಲುಗಳ ಕಡೆಗೆ ಓಡಲಾರಂಭಿಸಿದ.

ಆಕಾಶದಲ್ಲಿಯ ಸೂರಜಾ ನೆತ್ತಿಮ್ಯಾಲ ಬಂದಾಗ ಮಾದರಗೇರ್ಯಾನ ಗಂಡಸರೆಲ್ಲ ನೆಂಡಕಿ ನಾಲಾದ ಬಳಿಯ ಹೆಣ ಹೂಳುವ ಮಸುಟಗಿಯ ಸೀಮೆಯಲ್ಲಿ ಕುಲಕರ್ಣಿಯ ಕ್ವಾಣದ ಚರ್ಮ ಸುಲಿದು, ಖಂಡ ಕಡಿದು ರಾಶಿ ಹಾಕುತ್ತಿದ್ದರು. ಕೆಳಗೆ, ದನಿ ಹರಿದು ಹೋಗುವ ಖಬರಿಲ್ಲದೆ ದೂರ ನಿಂತು ಜೊಲ್ಲು ಸುರಿಸುತ್ತ ಬೊಗಳುವ ನಾಯಿಗಳ ಹಿಂಡು. ಮೇಲೆ ಆಕಾಶಕ್ಕೆ ಅಡ್ಡವಾಗಿ ಭರ್‍ರನೆ ಕೆಳಗಿಳಿದು ಬಂದು ಜನರ ಕೂಗು ಚೀರಾಟಗಳಿಗೆ ಅಳುಕಿ ಹಾದುಹೋಗಿ ಸುಡುಗಾಡಿನ ಕುಣಿಗಳ ಮೇಲೆ ಕುಳಿತು ಕೋಣದ ಹಸಿಮಾಂಸವನ್ನೇ ದೈನಾಸಪಟ್ಟುಕೊಂಡು ನೋಡುವ ರಣ ಹದ್ದುಗಳ ಹಿಂಡು.

ಅಂದು ರಾತ್ರಿ ಹೊಲೆ, ಮಾದಿಗರ ಕೇರಿಯಲ್ಲಿ ಎಲ್ಲರ ಗುಡಿಸಲು ಗಳಲ್ಲಿಯೂ ಉರಿಯುವ ಒಲೆಗಳ ಮೇಲೆ ಗಡಿಗೆಯಲ್ಲಿ ತಕಪಕನೆ ಕುಣಿಯುವ ಕೋಣದ ಖಂಡದ ಸಾರು.

ಕುಡಿದ ಅಮಲಿನಲ್ಲಿ ಮನೆಗೆ ತೂರಾಡುತ್ತಲೇ ಬಂದ ಫಕೀರಪ್ಪ, ಅಂಗಳದಲ್ಲಿಯೇ ಔಡಲಗಿಡಗಳ ಬಳಿ ಕುಳಿತು ಕೋಳಿಗೂಡಿನ ಸುತ್ತ ಕಣ್ಣು ಹಾಯಿಸಿದ. ಒಂದೊಂದಾಗಿ ಕೋಳಿಗಳು ಕೊಕ್ ಮಾಡುತ್ತ ಪುತಕ್ಕನೆ ಹೇತು ಕಣ್ಣು ಮುಚ್ಚಿ ತೆರೆದು, ಒಂಟಿಕಾಲಿನ ಮೇಲೆ ನಿಂತು ಅತ್ತಿತ್ತ ನೋಡಿ ಬಡಕ್ಕನೆ ಒಳ ನುಸುಳುತ್ತಿದ್ದವು.

"ಲಚ್ಚವ್ವಾ... ಚೂರಗೋಳು ಕುದ್ದಾವೇನೆ? ಕುದ್ದಿವಂದ್ರ ಒಂದ್ನಾಕು ಬಟಲಾಗ ಹಾಕಿ ತಾ ಈಕಾಡಿ. ಬಾಯಾಡಸ್ತೀನಿ." ಎಂದು ಕರೆದ.

ಲಚ್ಚಿ ಹೊರ ಬಂದಳು. ಕೋಳಿ ಗೂಡಿನ ಬಾಗಿಲು ಮುಚ್ಚಿ ಸುತಳಿ ಬಿಗಿಯುತ್ತಾ ಅಪ್ಪನ ಮಾತಿಗೆ ಉತ್ತರಿಸಿದಳು.

"ಹಿನಾ ಇಲ್ಲೋಯಪ್ಪಾ... ಕ್ವಾಣದ ಖಂಡಾ ಅದಾ ಅದೂ. ಈಟ ಜಲ್ದಿ ಹ್ಯಾಂಗ ಕುದಿತಾದ. ಎಲುಗೋಳರಿ ಬಿಡು ಮೆತ್ತನೆ ಖಂಡಾನೂ ಕುದ್ದಿಲ್ಲ. ಹಿನಾ ಒಂತಾಸ ಬೇಕು ಕುದಿಲಕ."

"ಇದರವ್ವನ ತಾಯಗ್ಗಂಡನ ಕ್ವಾಣಾ ಒಯ್ದು. ಪಪ್ಪಿ ಹುವ್ವಾ ಹಾಕಿಡಾದಿತ್ತೇ. ಜಲ್ದಿ ಕುದ್ದು ಪಿಸರೊಡಿತಿತ್ತು."

ಲಚ್ಚಿ ಮಾತಾಡದೆ ನೆರ ಗುಡಿಸಲಿಗೆ ಬಂದಳು.

"ಪಪ್ಪಿ ಹುವ್ವಾ ಇದ್ದರ ಕುಡೇ ಗಂಗವತ್ತಿ.... ನನ್ ಹಾಟ್ಯಾನ ಖಂಡಾ ಕುದ್ದೇ ಇಲ್ಲ. ಅಪ್ಪ ಬಯ್ಲಕ್ಹತ್ತಾದ."

ಒಲೆಯ ಮುಂದೆ ಕುಳಿತು ಗಡಿಗೆಯಲ್ಲಿ ಸವುಟು ಹಾಕಿ ತಿರುವುತ್ತಿದ್ದ ಗಂಗವ್ವ ಇನ್ನೊಂದು ಕೈಯಿಂದ ತನ್ನ ಹೆಂಡೆ ಬುಟ್ಟಿಯಂತಹ ತಲೆ ತುರಿಸಿಕೊಳ್ಳುತ್ತ ಹೇಳಿದಳು.

"ಹುವ್ವಾ ನನಗೂ ಸಿಕ್ಕಿಲ್ಲೇ ಲಚ್ಚಿ. ಮಿಡಿಗಾಯಿ ಅದಾ ನೋಡು. ನಾ ಒಂದು ಜಜ್ಜಿ ಹಾಕೀನಿ. ಹಿನಾ ಒಂದು ಬಿದ್ದಾದ, ತಗೊಂಡು ಹೋಗು. ಮಾಂವಗ ಮದಲೇ ಹಲ್ಲಿಲ್ಲ. ಜರಾ ಮೆತ್ತಗೆ ಕುದುಸು...."

"ಅವನ ಸಲ್ಯಾಕೆನೇ ಅತ್ತಿ. ನಾ ಬರ್ತೀನಿ" ಎನ್ನುತ್ತ ಅವಳು ಕೊಟ್ಟ ಕಾಯಿ ತೆಗೆದುಕೊಂಡು ತಿರುಗಿದಳು.

ಲಚ್ಚಿ ಗುಡಿಸಲಲ್ಲಿ ರೊಟ್ಟಿ ಮಾಡುತ್ತಿದ್ದಳು. ಹೊರಗೆ ಅಂಗಳದಲ್ಲಿಯ ಹೊರಸಿನ ಮೇಲೊಂದು ಕರಿ ಘೊಂಗಡಿ ಹಾಸಿಕೊಂಡು ಫಕೀರಪ್ಪ ಮಲಗಿದ್ದ. ಸಂಜೆಗತ್ತಲು ಆಗಲೇ ಕಪ್ಪಿನ ತೆಕ್ಕೆಯಲ್ಲಿ ಒದ್ದಾಡಿ ಬಿಕ್ಕಳಿಸುತ್ತಿತ್ತು. ಬಾನಿನಲ್ಲಿಯ ನೀಲಿಮೆಗೆ ಕನ್ನ ಕೊರೆದು ಚಿಕ್ಕಿಗಳು ಹೊರಗಿಣಿಕಿ ಕಣ್ಣು ಮಿಟುಕಿಸಿ ಕಿಸಿ ಕಿಸಿ ನಗುತ್ತಿದ್ದವು. ಚಂದಿರ ಉದಯಿಸಿರಲಿಲ್ಲ. ಆಕಾಶದ ತುಂಬ ಬರೀ ಚುಕ್ಕಿಗಳದೇ ಚೆಲ್ಲಾಟ.

ಫಕೀರಪ್ಪ ಅಂಗಾತ ಮಲಗಿಕೊಂಡು ಆ ಚುಕ್ಕಿಗಳ ಹಿಂಡಿನಲ್ಲಿ ತನ್ನ ಮುದುಕಿಯನ್ನು ಹುಡುಕುತ್ತಿದ್ದ. ಹುಡುಕುತ್ತ ಹುಡುಕುತ್ತ ಮುದುಕ ಮುದುಕಿಯೊಂದಿಗಿನ ತನ್ನ ನೆನಪುಗಳ ಕುಣಿಯನ್ನು ಅಗೆಯತೊಡಗಿದ.

ಮುದುಕಿಯ ಹೆಸರು ಗುರ್ಲಿಂಗವ್ವ, ಆದರೂ ಎಲ್ಲರೂ ಅವಳನ್ನು ಕರೆಯುವುದು ಗುಲ್ಲಿಂಗಿ ಎಂದೇ. ಫಕೀರಪ್ಪ ಗುಲ್ಲಿಂಗಿಯನ್ನು ಮದುವೆಯಾಗಿ ಹಣೆಗೆ ಬಾಸಿಂಗ ಕಟ್ಟಿಕೊಂಡೇ ತನ್ನೂರಿಗೆ ಕರೆದು ತಂದಿದ್ದ. ಆಗೆಲ್ಲ ಕಲ್ಲು ಕುಟ್ಟಿ ನೀರು ತೆಗೆಯುವ ಹರೆಯ ಫಕೀರಪ್ಪನದು.

ಮನೆದೇವರಾದ ರಾಣಜಪೀರನ ಗುಡ್ಡಾ ಹತ್ತಿ ಭಾಸಿಂಗ ನಿಳಿಸಿಬಂದ ದಿನವೇ ಫಕೀರಪ್ಪನಿಗೆ ಕುಲಕರ್ಣಿಯಿಂದ ಕರೆ ಬಂದಿತು.

"ಫಕೀರಪ್ಪಣ್ಣಾ.... ಕುಲಕಣ್ಣಿ ಕರದಾರೋ ನಿನಗ." ಕುಲಕರ್ಣಿಯ ಆಳುಮಗ ಸಿದ್ದೀರ ಹೇಳಿದ.

"ಯಾಕಂತೋ ಸಿದ್ವೀರ?"

"ನನಗೇನು ಗೊತ್ತೋ ಮಾರಾಯಾ. ಕರ್‍ಕೊಂಡು ಬಾ ಅಂದ್ರು. ಬಂದೀನಿ.

"ನೀ ನಡೀ.... ನಾ ನಿನ್ನಿಂದೆ ಬರ್‍ತಿನಂತ."

"ಗಡಾನೆ ಬಾರೋ ಯಣ್ಣಾ....." ಎನ್ನುತ್ತ ಸಿದ್ದೀರ ತಿರುಗಿದ. ಫಕೀರಪ್ಪ ಗುಲ್ಲಿಂಗಿಗೆ ಸಂಜೆಗಾಗಿ ಕೋಳಿಸಾರು ಮಾಡಲು ಹೇಳಿ ಕುಲಕರ್ಣಿಯ ಮನೆಯ ದಾರಿ ತುಳಿದ.

ಕುಲಕರ್ಣಿಯ ಮನೆಯೆಂದರೆ ಕರಿಕಲ್ಲಿನ ಗೋಡೆಗಳ ಮಜಬೂತಾದ ಮನೆ. ಗಡದ್ದಾಗಿ ಹಸಿರು ಬಣ್ಣ ಮೆತ್ತಿದ ತಲೆಬಾಗಿಲು. ಎರಡೂ ಕಡೆಗೆ ಉದ್ದನೆಯ ಕಟ್ಟೆ. ಬಾಗಿಲು ದಾಟಿ ಒಳನಡೆದರೆ ಎರಡೂ ಬದಿ ಉದ್ದುದ್ದ ಝೋಳಜಿ. ಅದೂ ದಾಟಿದರೆ ಹಾಸುಗಲ್ಲಿನ ವಿಶಾಲವಾದ ಆಯತಾಕಾರದ ಅಂಗಳ. ಅದಕ್ಕೆ ಹತ್ತಿ ತುಸು ಎತ್ತರದಲ್ಲಿ ದೊಡ್ಡ ಪಡಸಲಿಗಿ. ಕುಲಕರ್ಣಿ ಗಾದಿಗೆ ಕುಂಡಿ ಅಂಟಿಸಿ ಲೋಡಿಗೆ ಅರೆ ಒರಗಿ ತಲೆಯಿಟ್ಟಿದ್ದ.

ಸೂದ್ರರು ಝೋಳಜಿ ದಾಟಿ ತುದಿಗಟ್ಟಿಯ ಬಳಿಯೇ ನಿಲ್ಲುವುದು ವಾಡಿಕೆ. ಫಕೀರಪ್ಪ ತಲೆಯ ಮೇಲಿನ ರುಮಾಲು ತೆಗೆದು ಕೈಕಟ್ಟಿಕೊಂಡು ತಲೆತಗ್ಗಿಸಿ ನಿಂತ. ಐದು ನಿಮಿಷವಾದರೂ ಕುಲಕರ್ಣಿ ಮಾತಾಡಲಿಲ್ಲ.

"ಯಪ್ಪಾ.... ನಾ ಬಂದೀನ್ರೀ.... ಮಾದರ ಫಕೀರಪ್ಪ."

ಫಕೀರಪ್ಪ ನಡುಗುದನಿ ಹೊರಡಿಸಿದ. ಕುಲಕರ್ಣಿ ಸರ್ಪದಂತೆ ಭುಸುಗುಟ್ಟಿ ಎದ್ದು ನಿಂತು ಕುಂಡೆ ಹಿಂದೆ ಕೈಕಟ್ಟಿಕೊಂಡು ಶತಪಥ ಸುತ್ತುತ್ತ ಒಮ್ಮಿಂದೊಮ್ಮೆಲೇ ನಿಂತು ಆರ್ಭಟಿಸಿದ.

"ಏನ್ಲಾ ಫಕೀರ್ಯಾ ಸೂಳ್ಯಾಮಗನೇ.. ಮದಿ ಮಾಡ್ಕೊಂಡು ಬಂದು ಮನ್ಯಾಗ ಕೂಡೋಟು ಸೊಕ್ಕ ಬಂತ್ಲೇನ್ಲೇ ನಿನಗ? ನನ್ ಛಾಜಾ ನನಗ ಮುಟ್ಟಸಬಾರ್ದೇನೋ ಮಾದಗಾ?"

ಫಕೀರಪ್ಪ ತಗ್ಗಿಸಿದ ತಲೆ ಮೇಲೆತ್ತಲಿಲ್ಲ. ಮೈಯಲ್ಲಿ ಕುದಿಯಲಾರಂಭಿಸಿದ ರಕ್ತವನ್ನು ತುಟಿ ಕಚ್ಚಿ ತಣ್ಣಗಾಗಿಸಲೆತ್ನಿಸಿದ.

"ಏ ಹಾದರಕ ಹುಟ್ಟಿದವ್ನೇ.... ನಿನ್ ಹೆಣ್ತಿಗಿ ಕರ್‍ಕೊಂಡು ಬಾರ್ಲೆ.... ಗೌಡ ಕುಲಕರ್ಣಿರು ಋಚಿ ನೋಡ್ದ ಮ್ಯಾಲೇ ನೀ ಸೋಬಾನ ಮಾಡ್ಕೋಮಾದು. ಇದು ಈ ಹಳ್ಳಿ ರೀತಿ ರಿವಾಜ ಅಂತ ಗೊತ್ತಿಲ್ಲೇನೋ ಸೂಳ್ಯಾ ಮಗನೆ?"

"ಅದು ಹಿನಾ ಸಣ್ಣದದಾರಿಯಪ್ಪಾ... ಮೈನರಿದಿಲ್ಲ. ಮೈನರದ ಮ್ಯಾಲಿನ ಮಾತ ಹಿಂದಾಗಡಿ. ಕುಲಕರ್ಣೇರೇ.... ಈಗ್ಯಾಕ ಗಡಬಡಾ ಮಾಡಾದು?"

ಹೆಂಡತಿಗೆ ತನ್ನ ಮಗ್ಗುಲಲ್ಲಿ ಕಳಿಸು ಎನ್ನುವ ಹಾರುವವನ ಹೆಡಕಿಗೆ ಕೊಡಲಿ ಹಾಕುವಷ್ಟು ಬಂದ ಸಿಟ್ಟನ್ನು ನುಂಗುತ್ತ ಫಕೀರಪ್ಪ ಉತ್ತರಿಸಿದ.

ಕುಲಕರ್ಣಿಯ ಅಮಲು ಅರ್ಧ ಇಳಿಯಿತು.

"ಮಿಡಿಗಾಯಿನೇ ರುಚಿ ಇರ್ತದೋ ಫಕೀರ್ಯಾ. ಆದರ ನಾವು ಮಿಡಿಗಾಯಿಗಿ ಆಶಾ ಬೀಳಂಗಿಲ್ಲ. ಸುಡ ಸುಡಾದು ತಿಂದು ಬಾಯಿ ಸುಟಗೋ ಮಂಗಿಲ್ಲೋ ಮಾದಗ ನನ್ಮಗನೇ. ಆರಿಸಿ ತಿನಾದು ನಮಗ ಗೊತ್ತದಾ..."

"ನಾ ಹೋಗ್ತೀನ್ರಿ ಕುಲಕರ್ಣೇರೇ."

"ಹೋಗ್ ಹೋಗು. ನಿನ್ ಗುಲ್ಲಿಂಗಿ ಮೈನರ್ದ ಸುದ್ದಿ ಮದ್ಲ ನಮಗೇ ತಿಳಿಬೇಕು. ಹುಷಾರ್. ಏನರೆ ಬದಮಾಸಗಿರಿ ಮಾಡ್ದೆಂದ್ರೆ ನಿನ್ ಕುಂಡಿ ಎಲು ಬುಕಣಿ ಮಾಡಿಬಿಡ್ತೀನಿ. ತಿಳೀತಿಲ್ಲ, ಹುಷಾರ."

ಫಕೀರಪ್ಪ ತಲೆದೂಗಿ ತಿರುಗಿದ. ಮನೆಯ ಹಾದಿ ಬಿಟ್ಟು ಬನದ ಹಾದಿ ಹಿಡಿದ ಫಕೀರನ ತಲೆಯಲ್ಲಿ ಬೆಂಕಿ ಧಗಧಗಿಸುತ್ತಿತ್ತು. ಎವೆಯಲ್ಲಿ ಸಿಟ್ಟಿನ ಗೆಜ್ಜೆ ಕುಣಿತ. ಕೈಗೆ ಸಿಕ್ಕ ಲಕ್ಕಿ ಮೆಳೆಯನ್ನು ಕಿತ್ತಿಕೊಂಡು ದಾರಿಯಲ್ಲಿ ಬಿದ್ದ ಕಲ್ಲುಗಳಿಗೆ ಹುಚ್ಚನಂತೆ ಒಂದೇ ಸಮನೆ ಹೊಡೆದ. ಬಯ್ದ. ಅದರ ಮೇಲೆ ಉಗುಳಿದ. ಕುಸಿದು ಬಿದ್ದು ಹೆಂಗಸರಂತೆ ದನಿ ತೆಗೆದು ಅತ್ತುಬಿಟ್ಟ.

ಸುತ್ತಲೂ ಕೆರ್ರೆನ್ನುವ ಸೇಂದಿ ಗಿಡಗಳ ದಟ್ಟ ಬನದಲ್ಲಿ ಅವನ ಅಳುವೂ ಅನಾಥವಾಯಿತು. ತಾಸು ಹೊತ್ತಿನ ನಂತರ ಎದ್ದು ಹೊರಟ. ಕುಲಕರ್ಣಿಯ ಬಾಳೆಯ ತೋಟ ಹೊಕ್ಕವನು ನಾಲ್ಕೆಂಟು ಬಾಳೆಗಿಡಗಳನ್ನು ಕಿತ್ತಿ ಕಿತ್ತೀ ಎಸೆದು ಬಿಟ್ಟ. ಇನ್ನೇನು ಮುಂದಿನ ಗಿಡಕ್ಕೆ ಕೈಯಿಡಬೇಕು, ಅಷ್ಟರಲ್ಲಿ ಹತ್ತಿರದಲ್ಲಿಯೇ ಹೆಣ್ಣು ಗಂಡುಗಳ ಮಿಶ್ರದನಿಯ ಗುಸು ಗುಸು ಮಾತು ಪಿಸಿಪಿಸಿ ನಗುಗಳು ತೂರಿಬಂದವು. ಫಕೀರಪ್ಪ ಸ್ತಬ್ಧನಾಗಿ ನಿಂತುಬಿಟ್ಟ.

ನಿಚ್ಚಳವಾಗಿ ಬೆಳದಿಂಗಳು ಮೂಡುತ್ತಿತ್ತು. ಬಾಳೆಯ ಎಲೆಗಳನ್ನು ವತ್ತರಿಸಿ ದೃಷ್ಟಿ ಮಸೆದ. ಮಾರು ದೂರದಲ್ಲಿ ಒಂದು ಗಂಡು ಒಂದು ಹೆಣ್ಣು ತಳಕು ಹಾಕಿಕೊಂಡು ತೇಕುತ್ತಿದ್ದುವು.

"ಆಟು ಹಿಂಡಬ್ಯಾಡೋ ಕಾಳ್ಯಾ... ನನ್ನೆದಿ ನುಯ್ತಾದೋ..."

ಹೆಣ್ಣು ಸಿಹಿ ನರಳುವಿಕೆ ನಟಿಸಿತು. ಗಂಡು ನಗುತ್ತ.

"ಹಿಂಗ್ಯಾಕ್ರೀ ಹೀರಾಬಾಯಿ... ಹೊಸಾ ಪೋರಿ ಹಂಗ ಮಾಡ್ತಿರಲ್ರಿ..... ನೀವು ನೋಡ್ಲಿಕ್ಕೇ ಬಿಳಿ ತೊಗಲಿನ ಥಂದನ ಗೊಂಬಿ. ಒಳಗ ಪುಸ್ಸ....."

ಕಾಳ್ಯಾ ನುಡಿದು ನಕ್ಕುಬಿಟ್ಟ.

ಗಂಡು ಕುಲಕರ್ಣಿಯ ಆಳುಮಗ ಹೊಲೆಯರ ಕಾಳ್ಯಾ ಎಂದೂ, ಹೆಣ್ಣು ಸ್ವಂತ ಕುಲಕರ್ಣಿಯ ಕೈಹಿಡಿದ ಖಾಸಾ ಹೆಂಡತಿಯೆಂದೂ ತಿಳಿಯಲು ಫಕೀರಪ್ಪನಿಗೆ ತಡವಾಗಲಿಲ್ಲ. ಮರುಕ್ಷಣ ಅವನ ಕೋಪವೆಲ್ಲ ತಣ್ಣೀರು ಬಿದ್ದ ಬೆಂಕಿಯಂತೆ ಆರಿ ತಣ್ಣಗಾಯಿತು. ತುಟಿಗಳಲ್ಲಿ ವಿಚಿತ್ರ ನಗು ತೇಲಿ ಎದೆಯಲ್ಲಿ ಅವರ್ಣನೀಯ ಸಂತಸದ ಅಲೆಗಳೆದ್ದು ಹೊಯ್ದಾಡತೊಡಗಿದುವು. ಅವನು ಬಂದ ದಾರಿಗೆ ಕಳ್ಳ ಬೆಕ್ಕಿನಂತೆ ಹೆಜ್ಜೆ ಎತ್ತಿಡುತ್ತ ತಿರುಗಿ ಸೇಂದಿ ಬನದ ನಡುವಿನ ಈಳಿಗೇರ ಝೋಪಡಿ ಸಮೀಪಿಸಿದ.

"ಭೀಮಯ್ಯ ಕಾಕೋ.... ಒಂದು ಮಗಿ ಸಿಂದಿ ಕುಡು." ಗುಡಿಸಲ ಮುಂದೆ ನಿಂತು ಕರೆದ.

"ಯಾಕ್ಲಾ ಫಕೀರ.... ಇವತ್ತ ಈಟು ತಡಾ ಮಾಡಿ ಬಂದಿ?"

ಬಾಯಿಯಲ್ಲಿಯ ಬೀಡಿಯ ಹೊಗೆಯನ್ನು ಮೂಗಿನಿಂದ ಹೊರತಳ್ಳುತ್ತ, ಸೇಂದಿ ಮರಗಳಿಗೆ ಗೊಬ್ಬಿ ಕಟ್ಟುವ ಈಳಿಗೇರ ಭೀಮಯ್ಯ ಪ್ರಶ್ನೆ ಎಸೆದ..

"ಕುಲಕರ್ಣಿ ತಾಯಿಗ್ಗಂಡ ಕರಸಿದ್ನೋ ಕಾಕೊ......" ಎನ್ನುತ್ತ ಫಕೀರ ಕುಳಿತ.

"ಯಾಕಪಾ.... ನಿನಗೇನು ಕೆಡಗಾಲ ಬಂತೋ?"

"ಮನ್ನ ಮದಿಮಾಡ್ಕೊಂಡು ಬಂದೀನಿ. ಇವತ್ತರ ಭಾಸಿಂಗ ಇಳ್ಸಿ ಸೋಬನ ಮಾಡ್ಕೊಂಡು ಹೆಣ್ತಿ ಹಾಸಗಿಗಿ ಹೋಗುವಾ ಇದ್ದೀನಿ. ಹಿಂತದರಾಗ ಆ ಹಾರುವ ಹಲ್ಕಾ ನನ್ಮಗನಿಗಿ ನನ್ ಗುಲ್ಲಿಂಗಿ ಬೇಕೆಂತ. ಅದು ಹಳ್ಳಿ ರೀತಿ ರಿವಾಜಂತ."

"ಓ! ನೀ ಯೇನು ಹೇಳ್ತೋ ತಮ್ಮಾ...."

"ನನ್ಹೆಣ್ತಿ ಸಣ್ಣದದಾ.... ಮೈನರ್ದೇ ಇಲ್ಲ ಹಿನಾ ಅಂತ ಹೇಳಿ ಪಾರಾಗಿ ಬಿಟ್ಟೇನಿ. ಗುಲ್ಲಿಂಗಿ ಅಪ್ಪ ಕೇಳದೋಟು ತೆರು ಕೊಟ್ಟು ಆಕಿಗಿ ನಾ ತಾಳಿ ಕಟ್ಟಿ ತಂದೀನಿ. ಈಗ ಈ ಹಾರುವ ಸೂಳ್ಯಾಮಗನ ಮಗ್ಗಲದಾಗ ಮಲಗಸ್ಲೇನೋ ಕಾಕೋ?"

"ನೀ ಅನ್ನಾದೂ ಖರೇ ಅದಾನೋ ತಮ್ಮಾ ಅದರ ನಿಮ್ ಹಿಂದಿನ ಹಿರ್‍ಯಾರೆಲ್ಲ ಇದೆಲ್ಲದಕ ಒಪಗೊಂಡು ಮಾಡ್ಕೋತೇ ಬಂದಾರಲ್ಲಪಾ....." ಎಂದವನು.

"ಏ ನಾಗ್ಯಾ, ಗೊಬ್ಬ್ಯಾಗಿನ ಸಿಂದಿ ತಂದು ಫಕೀರಗ ಕುಡೋ...." ಎಂದು ತನ್ನ ಮಗನಿಗೆ ಹೇಳಿದ.

"ಅದಕೇ ಮತ್ತ ಈ ಮಕ್ಳು ಸೊಕ್ಕಿಗೇರ್‍ಯಾರೋ ಕಾಕೋ.... ನಮ್ಮೆಂಡ್ರಿಗಿ ಅವರ ಟೊಂಕದ ತೆಳಕ ಹಾಯ್ಕೋತ ನಾವು ಅವರ ಹೆಂಡ್ರ ಕಾಲ ಪಾದಾ, ತೊಳಕೋತ ಆಳ ಮಕ್ಳಾಗಿ ದುಡ್ಡಿಕ್ಹತ್ತಿವೆಲಾ.... ಅದೆಲ್ಲಾ ಇನ್ ಮುಂದ ನಡೆಂಗಿಲ್ಲ. ಭೋಸಡಿ ಮಕ್ಳು ಅವು ನಮ್ಮೆಂಡ್ರಿಗಿ ಬೇಡದ್ರ ನಾವೂನೂ ಅವರ ಹೆಂಡ್ರಿಗಿ ಬೇಡಬೇಕೋ. ಇದರಾಗೇನು ತಪ್ಪಯ್ತಿ. ನನ್ ಹೆಂಡ್ತಿ ಅವನ ಮಗ್ಗಲ ಬಿಸಿ ಮಾಡ್ಬೇಕಂದ್ರ ಅವನ ಹೆಣ್ತಿನೂ ನನ್ ಮಗ್ಗಲದಾಗ ನೆಳ್ಳಲಿ. ಹೊಯಿಂದೋ ಇಲ್ಲೋ ಖರೇ ಹೇಳು."

"ಅದೆಲ್ಲಾ ಖರೇ ಅದಾನಪ್ಪಾ... ಆದರ ನಿಮ್ಮದಾನ ಹರ್‍ಯಾದ ಪಾರಗೋಳೆಲ್ಲ ನಿನ್ ಬೆನ್ನಿಗೆ ನಿಂದರಬೇಕು ನೋಡು. ನೀನ್ ಒಬ್ಬವನಿಂದ ಏನೂ ಸಾಧ್ಯಾ ಆಗಾಣಿಲ್ಲ."

"ನಿಂದರಲಾರ್ದೆ ಏನ್ಮಾಡ್ತಾರ. ಇವತ್ತ ನನ್ ಹೆಣ್ತಿಗಿ ಬೇಡ್ದ ಕುಲಕರ್ಣಿ ನಾಳಿಗಿ ಅವರ ಹಿಂಡ್ರಿಗಿನೂ ಬೇಡ್ತಾನ. ಇದರ ಬೇರೇ ಈಗ ಅಗಳಿ ತಗ್ದು ಸುಟ್ಟು

ಹಾಕ್ಬೇಕು. ಅದಕ ನಾಯೆಲ್ಲಾ ಬಂದೋಬಸ್ತಿ ಮಾಡ್ತೀನಿ. ನೀ ಸುಮ್ನ ನೋಡ್ಕೋತ ನಡಿ." ಎನ್ನುತ್ತ ಅರ್ಧಗೊಬ್ಬಿ ಹೆಂಡ ಕುಡಿದು ಧೋತರದಿಂದ ಬಾಯೊರೆಸಿಕೊಳ್ಳುತ್ತ ಭೀಮಯ್ಯನಿಗೆ ರೊಕ್ಕ ಕೊಟ್ಟು ಎದ್ದು ನಿಂತ. ತಲೆಗೆ ಅಮಲೇರುತ್ತಿತ್ತು. ಎದೆಗೆ ಗುಲ್ಲಿಂಗಿಯ ನಿಶೆಯೂ ಏರುತ್ತಿತ್ತು. ಎಲ್ಲವನ ಆಟದ ಶೃಂಗಾರ ಹಾಡೊಂದನ್ನು ಗುನುಗುನಿಸುತ್ತ ತನ್ನ ಕೇರಿಯ ಕಡೆಗೊಯ್ಯುವ ಕಾಲು ದಾರಿಯನ್ನು ತುಳಿಯತೊಡಗಿದ.

ಮಾರನೆಯ ದಿನವೇ ಫಕೀರ ಗುಲ್ಲಿಂಗಿಯೊಂದಿಗೆ ಊರು ಬಿಟ್ಟ. ಕುಲಕರ್ಣಿ ಸತ್ತ ನಂತರವೇ ಅವನು ಮತ್ತೆ ಹಳ್ಳಿಗೆ ತಿರುಗಿ ಬಂದದ್ದು. ಬಂದವನು ಮುಂದಿನ ಕುಲಕರ್ಣಿ, ಗೌಡರಿಗೆ ಹೆದರದೆ ಗಟ್ಟಿಯಾಗಿ ಹಳ್ಳಿಯಲ್ಲಿ ಉಳಿದುಬಿಟ್ಟ. ಗೌಡ, ಕುಲಕರ್ಣಿಯರ ಕ್ರೌರ್ಯವೂ ಆಗ ಮೊದಲಿನಷ್ಟು ಗಟ್ಟಿಯಾಗಿ ಉಳಿದಿರಲಿಲ್ಲ....

"ಯಪ್ಪೋ... ರೊಟ್ಟಿ ಆಗ್ಯಾವ. ಉಳ್ಳಕ ಬಾ."

ಲಚ್ಚಿ ಹೊರಬಂದು ನಿಂತು ಕರೆದಾಗಲೇ ಅವನ ನೆನಪುಗಳು ಸತ್ತು ಫಕೀರಪ್ಪ ಈ ಲೋಕದಲ್ಲಿ ಅರಿವಿಗೆ ಬಂದದ್ದು.

"ರೊಟ್ಟಿ ಮಾಡಾದಾಯ್ತಾ ಲಚ್ಚವ್ವಾ...." ಎನ್ನುತ್ತ ಫಕೀರಪ್ಪ ಎದ್ದು ಕುಳಿತ. ಆಕಳಿಸಿ ಮೈಮುರ್ದು ಎದ್ದು ಒಳನಡೆದ.

* * * *

ಅಲ್ಲಲ್ಲಿ ಹುಟ್ಟಿ, ಆಕಾರವಲ್ಲದ ಆಕಾರಗಳ ನಸುಗಪ್ಪು ಮೋಡಗಳು ಆಗಸದ ಮುಖಕ್ಕೆ ತದ್ದು ಹತ್ತಿಸಿದವು. ಅಲ್ಲಲ್ಲಿ ತದ್ದಿನ ಕಲೆಗಳಿಂದ ಕುರುಪಗೊಂಡ ಆಕಾಶ ತಲ್ಲಣಿಸಿತು. ಬಿಸಿಲು ತಗ್ಗಿ ತಂಪು ಗಾಳಿ ಬೀಸಿ ಬಂದಿತು.

ಕೆರೆಯಲ್ಲಿ ಮೈ ತೊಳೆದುಕೊಂಡ ಲಚ್ಚಿ ಹೊರಬಂದಳು. ತನ್ನ ಸೀರೆಯನ್ನು ಸೊಂಟಕ್ಕೆ ಸುತ್ತಿಕೊಂಡು ದಂಡೆಯಿಂದ ದೂರ ಸರಿದಳು. ಜಿಂಕೆಯಂತೆ ಹಾರುತ್ತ ಕುಣಿಯುತ್ತ ಹಾಡೊಂದನ್ನು ಗುನಿಗುನಿಸುತ್ತ ಮೇಲಿನ ಹೊಲದಲ್ಲಿ ಕಾಲಿಟ್ಟಳು.

ಕೆರೆಯ ಉತ್ತರಕ್ಕೆ ಉದ್ದಕ್ಕೂ ಸೊಕ್ಕಿನಿಂದ ಬೆಳೆದು ನಿಂತ ಬಿಳಿ ಜೋಳದ ಬೆಳೆ ಸುಪುಷ್ಟವಾಗಿದ್ದ ಹಸಿರು ದಂಟಿನ ತಲೆಯಲ್ಲಿ ಗರಿಗಳ ನಡುವೆ ಎದ್ದು ನಿಂತು ಹಾಲು ತುಂಬುತ್ತಿರುವ ಬೊಗಸೆ ಗಾತ್ರದ ಜೋಳದ ತೆನೆಗಳು.

ಹೊಲದ ನಡುವೆ ಹುಡುಗರು ನಿಂತು ಹಾಲು ಕುಡಿಯಲು ಬರುವ ಹಕ್ಕಿಗಳಿಗೆ ಕವಣೆಗಲ್ಲು ಬೀಸಿ ಹೊಡೆಯುತ್ತಿದ್ದರು. ಲಚ್ಚಿ ನಲಿವಿನ ನಡಿಗೆಯಲ್ಲಿ

ಅಲ್ಲಿಗೆ ಬಂದಾಗ ಹರಕು ಅಂಗಿಯ ಹಣಮ್ಯಾ ತನ್ನ ಕೈಯಲ್ಲಿಯ ಕವಣೆಯನ್ನು ಅವಳೆಡೆಗೆ ನೀಡುತ್ತ ದೈನಾಸು ಬಿಟ್ಟು ಕೇಳಿದ.

"ಲಚ್ಚಕ್ಕಾ... ಕವಣೆ ಬೀಸಿ ಬೀಸಿ ನನ್ನ ಕೈನುಯಸಲಕ್ಹತ್ತಾವೇ.... ಒಂಜರಾ ನೀ ಕವಣಿ ಬೀಸಿ ಹಕ್ಕಿಗೋಳಿಗಿ ಓಡಸೇ ಯಕ್ಕಾ."

ಅವಳು ನಕ್ಕು ಅವನಿಂದ ಕವಣೆ ತೆಗೆದುಕೊಂಡು ಆ ಕಡೆ ಈ ಕಡೆ ಕವಣೆಗಲ್ಲು ಬೀಸುತ್ತ ಹಕ್ಕಿಗಳನ್ನು ಓಡಿಸತೊಡಗಿದಳು. ಹಕ್ಕಿಗಳನ್ನು ಹೊಡೆದು ಬೀಳಿಸುವ ಭಾವನೆ ಅವಳಿಗಿರಲಿಲ್ಲ. ಆ ಹಕ್ಕಿಗಳಿಂದ ಹೊಲದ ಬೆಳೆಗೆ ಆಗುವ ಹಾನಿಯ ಬಗ್ಗೆಯೂ ಅವಳಿಗೆ ಯಾವ ವಿಚಾರವೂ ಇರಲಿಲ್ಲ. ಆದರೆ ಹಕ್ಕಿ ಸಮೂಹ ಕವಣೆಗಲ್ಲುಗಳಿಗೆ ಹೆದರಿ ಚಿಲಿಪಿಲಿಗುಟ್ಟುತ್ತ ತೆನೆಗಳನ್ನು ಬಿಟ್ಟು ರೆಕ್ಕೆ ಬಡಿಯುತ್ತ ಹಾರಿಹೋಗುವುದು ಮಾತ್ರ ಅವಳ ಬೊಗಸೆಗಣ್ಣುಗಳಿಗೆ ಚೆಲುವಿನ ನೋಟ.

ಒಮ್ಮಿಂದೊಮ್ಮೆಲೇ ಆಕಸ್ಮಿಕ ಗಂಡು ದನಿಯ ನರಳುವಿಕೆ ಕೇಳಿ ಲಚ್ಚಿ ಅವಕ್ಕಾದಳು. ಕವಣೆ ಅವಳ ಕೈಗಳಿಂದ ಅಪ್ರಯತ್ನವಾಗಿ ಕೆಳಗುರುಳಿತು. ಅವಳು ಬೀಸಿದ ಕವಣೆಗಲ್ಲು ಮುಂದೆ ಬರುತ್ತಿದ್ದ ಯುವಕನ ಹಣೆಗೆ ರಿಮ್ಮನೆ ಬಡಿದು ರಂಧ್ರ ಕೊರೆದು ರಕ್ತ ಸುರಿಸಿತ್ತು. ಹಣೆಯ ಮೇಲಿನ ಗಾಯವನ್ನು ಒತ್ತಿ ಹಿಡಿದುಕೊಂಡೇ ಆ ಯುವಕ ಅವಳ ಮುಂದೆ ಬಂದು ನಿಂತ.

ಲಚ್ಚಿ ನಿಂತಲ್ಲಿಯೇ ಮಂಜುಗಡ್ಡೆಯಾದಳು. ಸುತ್ತ ನಿಂತ ಹುಡುಗರು ಪಿಳಿಪಿಳಿ ಕಣ್ಣು ಬಿಟ್ಟುವು. ಒಂದೆರಡು ಅಲ್ಲಿಂದ ಜಾರಿಕೊಂಡುವು.

ಕವಣೆಗಲ್ಲು ಬೀಸುತ್ತಿರುವಾಗ ಅದು ಬೇರೆ ಯಾರಿಗಾದರೂ ಹತ್ತಬಹುದು ಎಂಬ ಯೋಚನೆಯನ್ನೇ ಮಾಡಿರಲಿಲ್ಲ ಲಚ್ಚಿ. ಕ್ಷಣಾರ್ಧದಲ್ಲಿ ಏನಾಯ್ತಿದು?

ಹಣೆ ಒತ್ತಿ ಹಿಡಿದುಕೊಂಡ ತರುಣ ಮುಂದೆ ನಿಂತಿದ್ದ. ಗಾಯಕ್ಕೆ ಒತ್ತಿ ಹಿಡಿದ ಅವನ ಬೆರಳುಗಳ ಸಂದಿನಿಂದ ರಕ್ತ ತೊಟ್ಟಿಕ್ಕಿ ಕೆಳ ಜಾರುತ್ತಿತ್ತು. ಅದನ್ನು ಕಂಡ ಉಳಿದ ಹುಡುಗರೂ ಅಯ್ಯಯ್ಯಪ್ಪೋ.... ಎಂದು ಕಿರುಚಿ ಕುಂಡೆಗೆ ಕಾಲು ಹಚ್ಚಿ ಓಟಕಿತ್ತುವು.

"ಯಾಕೇ ಲಚ್ಚಿ, ನನ್ ಖೂನಾ ಸಿಗಲಿಲ್ಲೇನು?"

ಯುವಕ ಅರೆ ಸಿಟ್ಟು ಅರೆ ಖುಷಿಯ ದನಿಯಲ್ಲಿ ಕೇಳಿದ.

"ಕಾಶಣ್ಣಾ....."

ಅವಳ ಧರಗಳು ಪಟಪಟಿಸಿದುವು. ಅವನು ನಕ್ಕ, ಭಯಗ್ರಸ್ತೆ, ಎರಡಡಿ ಹಿಂದೆ ಸರಿದಳು.

"ಕಾಶಣ್ಣ ಅಲ್ಲ... ಕಾಸಿನಾತ, ನಿನಗ ನಾ...."

ಲಚ್ಚಿ ಒಮ್ಮಿಂದೊಮ್ಮೆಲೇ ಹಿಂದೆ ತಿರುಗಿದವಳೇ ಜಿಂಕೆಯಂತೆ ಓಡತೊಡಗಿದಳು.

"ಲಚ್ಚಿ.... ನಿಂದ್ರೇ.... ಲಚ್ಚೀ...."

ಕಾಸಿನಾತನ ದನಿ ಅವಳ ಬೆನ್ನು ಹತ್ತಿ ಧಾವಿಸಿತು. ಆದರೆ ಲಚ್ಚಿ ನಿಲ್ಲಲಿಲ್ಲ. ಓಟದ ವೇಗ ವೃದ್ಧಿಸಿದಳು.

ಓಡಿ ಬಂದವಳೇ ಮೇಲುಸಿರು ಬಿಡುತ್ತ ತನ್ನ ಗುಡಿಸಲ ಮುಂದಿನ ಅಂಗಳದಲ್ಲಿ ಕುಸಿದು ಕುಳಿತಳು. ಅಲ್ಲಿಯೇ ಕೋಳಿಗೂಡಿನ ಹತ್ತಿರ ತುಂಬಿಟ್ಟಿದ್ದ ಗಡಿಗೆಯಿಂದ ಗಿಲಾಟಿನ ತಂಬಿಗೆ ಅದ್ದಿ ನೀರು ತೆಗೆದುಕೊಂಡು ಗಟಗಟನೆ ಕುಡಿಯತೊಡಗಿದಳು.

ನೆರೆ ಗುಡಿಸಲಿನ ಗೆಳತಿ ಕೆಂಚಿ ಅಂಗಳ ಸಾರಿಸುತ್ತಿದ್ದವಳು ಇವಳು ನೀರು ಕುಡಿಯುವುದನ್ನೇ ದಿಟ್ಟಿಸಿದಳು.

"ಏನೇ ಹರಕೊಂಡು ತಿನ್ನವ್ರ್ಹ್ಂಗ ನೋಡ್ಲಕ್ಹತ್ತೀದೀ ಕೆಂಚಿ?"

ತಂಬಿಗೆ ಕೆಳಗಿಟ್ಟು ಬಾಯೊರೆಸಿಕೊಳ್ಳುತ್ತ ಲಚ್ಚಿ ಕೇಳಿದಳು.

"ನನ್ ಗೆಳತಿಗಿ ನೋಡ್ಲಕ್ಹತ್ತೀನಿ."

"ನಿನ್ ಗೆಳತಿಗಿ ಎಂದೂ ನೋಡಿಲ್ಲೇನು?" ಕೆಂಚಿ ಕೈ ತೊಳೆದುಕೊಂಡು ಬಂದು ಲಚ್ಚಿಯ ಮುಂದೆ ನಿಂತು ಕೇಳಿದಳು.

"ಗೆಳತಿಗೆರೆ ಅಲ್ಲ. ಆಕಿನ ನೀರಡಿಕಿಗಿ ನೋಡ್ಲಕ್ಹತ್ತೀನಿ. ಇಟ್ಯಾಕ ನೀರಡ್ಕಿ ಆಯ್ತು ನಿನಗ? ಬ್ಯಾಸಗೆಲ್ಲ ಬಿಸಲಿಲ್ಲ. ಎಡ್ಡು ತೆಂಬಗಿ ನೀರ ಗಟಗಟ ಒಂದೇ ಉಸರಿಗಿ ಕುಡ್ದು ಬಿಟ್ಟೆಲ್ಲೇ..."

ಕೆಂಚಿಯ ಮಾತಿಗೆ ಲಚ್ಚಿಯ ಎದೆ ಬಡಿತ ಹೆಚ್ಚಿತು. ಕೆಂಚಿ ಲಚ್ಚಿಯರು ಜೀವದ ಗೆಳತಿಯರು. ಇಬ್ಬರೂ ಒಮ್ಮೆಲೇ ಬಾಲ್ಯ ತೊರೆದು ಯೌವನದ ಬಾಗಿಲಲ್ಲಿ ಬಂದು ನಿಂತವರು.

ಲಚ್ಚಿ ಬಿಳಿಬಣ್ಣದ ಬೊಗಸೆಗಣ್ಣಿನ ದುಂಡು ಮುಖದ ಶ್ವೇತ ಸುಂದರಿ. ಕೆಂಚಿ ಕೋಲುಮುಖದ, ಕಪ್ಪು ಬಣ್ಣದ ಜಿಂಕೆಗಣ್ಣಿನ ಕೃಷ್ಣಸುಂದರಿ.

ಲಚ್ಚಿ ಕೆಂಚಿಯ ಕೈಹಿಡಿದೆಳೆದ ರಭಸಕ್ಕೆ ಅವಳು ಧೊಪ್ಪನೆ ಕುಸಿದು ಕುಳಿತಳು.

"ದೆವ್ವ ಗಿವ್ವ ಹಿಡಿದಾದೇನೇ.... ಹಿಂಗ್ಯಾಕ ಮಾಡ್ಲಕ್ಹತ್ತೀದಿ?"

"ಇಚಿತ್ರ ಮಾತ ಆಯ್ತೇ ನನ್ ಗೆಳತೀ...."

"ಏನು?"

"ಆಳ ಗಾಯಬಿದ್ದು ರಗತಾ ಬಂತೇ...."

"ಎಲ್ಲಿ?"

"ಹಣಿಮ್ಯಾಲ....."

"ಅರೆ, ನಿನ್ ಹಣಿಮ್ಯಾಲರೆ ಏನೂ ಗಾಯಾನೂ ಇಲ್ಲ, ರಗತಾನೂ ಇಲ್ಲಲ್ಲೇ ಲಚ್ಚಿ...."

ಕೆಂಚಿ ಅವಳನ್ನು ತಲೆಯಿಂದ ಕಾಲುಗಳವರೆಗೂ ಕಣ್ಣುಗಳಿಂದ ಅಳೆದಳು.

"ನನ್ನ ಹಣಿಮ್ಯಾಲ ಅಲ್ಲಗ ಕೆಂಚಿ. ಅವನ ಹಣಿಮ್ಯಾಲ..."

"ಯಾರಂವಾ? ಯಾರೆ?"

ಕೆಂಚಿ ಪಾಪ ವಿಸ್ಮಯದ ದನಿ ಹರಿಸಿದಳು.

"ಇದೆಲ್ಲಾ ಅಂವಾ ನಪ್ಪಗ ಹೇಳ್ದನಂದ್ರ ಯಪ್ಪ. ಮೆಟ್ಟಲಿಂದೇ ಹೊಡಿತಾನ ನನಗ." ಲಚ್ಚಿಯ ದನಿಯಲ್ಲಿ ಹೆದರಿಕೆ ಬೆರೆಯಿತು.

"ಮದಲ ಅಂವಾ ಯಾರು ಹೇಳು?"

ಕೆಂಚಿಯ ಆಸಕ್ತಿ ಏರಿತು.

"ಮಾದರ ಕೇರ್ಯಾಗಿನ ಕಾಸಿನಾತ."

"ಕಾಸಿನಾತ? ಕುಲಕರ್ಣೇರ ಹಂತ್ಯಾಕ ದುಡ್ಲಿಕ್ಕ ಹನಾ ಅಲ್ಲ, ಅವನೇ ಏನೇ?"

"ಹೂಂ.... ಹೂಂ... ಅವನೇ."

ಎಂದು ನಡೆದ ಘಟನೆಯನ್ನೆಲ್ಲ ವಿವರಿಸಿದಳು. ಕೆಂಚಿ ಕೇಳಿದಳು.

"ಅವನಿಗಿ ಪೆಟ್ಟಾಗಿ ಹಣಿ ಒಡ್ದು ರಗತಾ ಬಂದ್ರ ನಿನ್ ಜಂವಾ ಯಾಕ ಹೋಗಲಕ್ಹತ್ತಾದೇ ಪೋರಿ?"

"ಅಂವಾ ಎಲ್ಲರೆ ನಮ್ಮಪ್ಪಗ ಹೇಳ್ದನಂದ್ರ ಹ್ಯಾಂಗೇ."

"ಅಂವಾಯೇನು ಬಾಯಾಗ ಬಟ್ಟಿಟ್ಟರ ಕಚ್ಚಬಿಡಾ ಹಂತಾ ಸಣ್ಣ ಪಾರೇನು ಬಿಡು, ಅಂವಾಯಾಕ ಹೇಳ್ತಾನ. ಆಟು ಬೇಕಾರ ಹನಾಯೇನು ಅಂವಾ ಇರಲಿಕ್ಕಿಲ್ಲ. ಮಾದರ ಕೇರ್ಯಾಗೇ ಛಂದದ ಪಾರ ಅಂವಾ. ನೋಡ್ಲಕ್ಕನೂ ಮತ್ತ ಗುಣದಲಿಂದನೂ..."

ಅಷ್ಟರಲ್ಲಿ ಫಕೀರಪ್ಪ ಮತ್ತು ಕಾಸಿನಾತ ಮಾತಾಡುತ್ತ ಅಂಗಳದಲ್ಲಿ ಕಾಲಿಟ್ಟರು.

"ಯೋ ಲಚ್ಚವಾ.... ಹೊರಸ್ಹಾಕಿ ಒಂದು ಕೋದಿ ಹಾಸು ಮ್ಯಾಲ. ಕಾಸಿನಾತನ ಹಣೀಗಿ ಯಾವುದೋ ಪೋರಿ ಕಲ್ಲಿಂದ ಹೊಡೀತಂತ. ಈಟುದ್ದ ಗಾಯ್ಯಾಗ್ಯಾದ. ಭಡಾನೇ ಒಂದೀಸು ನೀರ ಕಾಸಿ ತಾ.... ಜಲ್ದೀ."

ಲಚ್ಚಿ ಹೊರಸು ಹಾಕಿದಳು. ಓಡಿಹೋಗಿ ಕೌದಿ ತಂದು ಹಾಸಿದಳು.

"ಕೂಡೋ ತಮ್ಮಾ. ನಾ ಅಗಸುದ್ವಾ ಹಾಕ್ತೀನಿ. ಇವನವ್ವನಾ ತಾಯಿಗ್ಗಂಡಂದು ಹಂತಾ ಗಾಯ ಇದ್ದುರನಾ ಮೂರದಿಂದಾಗ ಒಣಗಿ ಹೋಗ್ತಾದ. ಫಕ್ಕೀರಪ್ಪ ನುಡಿದ.

"ಮಾಂವಾ.... ಈ ಗಾಯಾ ಮಾಯ್ದು ಹೋಗಾದಲ್ಲೋ. ಏನೋ.... ಭಾಳ ನುಯ್ಯಲಕ್ಹತ್ತಾದೋ...." ಎನ್ನುತ್ತ ಕಾಸಿನಾತ ಓರೆಗಣ್ಣಿನಿಂದ ಲಚ್ಚಿಯನ್ನು ನೋಡುತ್ತ ಹೊರಸಿನ ಮೇಲೊರಗಿದ.

ಲಚ್ಚಿ ನೀರು ಕಾಸಿ ತರಲು ಚಂಗನೆ ಒಳಸರಿದಳು. ಕಾಸಿನಾತ ಮಲಗಿದ್ದಲ್ಲಿಯೇ ಸದ್ದಿಲ್ಲದೆ ನಕ್ಕ.

ಕೆಂಚಿ ಹತ್ತಿರ ಬಂದು ಕೇಳಿದಳು.

"ಕಾಸಿನಾತಣ್ಣಾ.... ಯಾರು ಹೊಡ್ದರೋ?"

"ಯಾರೋ ಹರ್‍ಯಾದ ಪೋರಿ ಕೆಂಚವ್ವಾ... ಹೊಡೆಣಾ ಮಾರಿ ತೋರ್ಸಲಾರ್ದೆ ಓಡಿ ಹೋಯ್ತು."

ಕೆಂಚಿ ನಗು ತಡೆದು ಕೇಳಿದಳು.

"ಹೆಂತಾ ಸೀರಿ ಉಟ್ಟಿದ್ಳೋ. .."

"ನಂದು ನನಗೇ ಆಗಿತ್ತು. ಹಣಿಲಿಂದ ಹರ್‍ಯಾ ರಗತಾ ಒರಸಗೊಳ್ಳಲೋ ಏನ್ ಆಕಿನ ಸೀರಿ ನೋಡ್ಲ್ಯಾ ಹೇಳು. ಆಕಿನ ಮಾರಿನೇ ನೋಡಿಲ್ಲ. ಇನ್ನ ಸೀರಿ ಹ್ಯಾಂಗ ನೋಡ್ಲಿ...."

"ನೀ ಏನೆರೆ ಆಕಿಗಿ ಕೆಣಕಿರಬೇಕು. ಸುಮ್ಮನೇ ಹ್ಯಾಂಗ ಹೊಡೀತಾಳ ಹೇಳು."

ಕೆಂಚಿ ಹಿಡಿದ ಪಟ್ಟು ಬಿಡಲಿಲ್ಲ.

ಫಕೀರಪ್ಪ ಯಾವುದೋ ತೊಪ್ಪಲ ರಸವನ್ನು ತರುತ್ತ ನುಡಿದ.

"ಇವನ ಚಲುವಿಕಿ ನೋಡಲಾರ್ದ ಪೋರಿ ಕಣ್ಣ ಕುಡ್ಡಾಗಿದ್ದುವೋ ಏನೋ ಯಾರಿಗ್ಗೊತ್ತು. ಹಣೀಗಿ ಬಡ್ಯ್ಯಾದೇ ಕಣ್ಣಿಗಿ ಬಡ್ತಿತ್ತಂದ್ರ ಇಟೊತ್ತಿಗೆ ಕಾಸಿನಾತನೇ ಕುಡ್ಡಾಗ್ತಿದ್ದ. ಈ ಪೋರಿಗೋಳ್ನೂ ಬೆಡಿಗಿ ಬಂದಾವೋ ತಮ್ಮಾ..... ಯಕಾಡಿ ಧ್ಯಾನಿರ್ತದೋ ಏನೊ......"

"ತೆಪ್ಪ ನಂದೇ ಇತ್ತು ಮಾಂವಾ... ನಾ ಅಚಾನಕ ಆಕಿನ ಕವಣಿಗಲ್ಲಿಗಿ ಅಡ್ಡಾಗಿ ಬಂದ ಬಿಟ್ಟಿದ್ದ ನೋಡು. ಆ ಬಿಚಾರಿದು ಏನೂ ತೆಪ್ಪಿಲ್ಲ ಪಾಪ".

ಕಾಸಿನಾತ ಮುಗುಳ್ನಗುತ್ತ ಹೇಳಿದ. ಲಚ್ಚಿ ಬೋಗುಣಿಯಲ್ಲಿ ಬಿಸಿ ನೀರು ತಂದಳು. ಫಕೀರಪ್ಪ ಅವನ ಗಾಯ ತೊಳೆದು ಔಷಧಿ ತುಂಬಿ ಪಟ್ಟಿ ಬಿಗಿದ.

"ಲಚ್ಚವ್ವಾ... ಹಂಚ ಕಾಸಿತಂದು ಈ ಪಟ್ಟಿ ಮ್ಯಾಲ ಕಾವ ಕುಡು." ಎನ್ನುತ್ತ ಫಕೀರಪ್ಪ ಕೈ ತೊಳೆದುಕೊಂಡು,

"ಕಾಸೀ, ನಾ ಜರಾ ಬನದ ಕಡಿ ಹೋಗಿ ಬರ್ತೀನಿ. ನೀ ಇಲ್ಲೇ ಮನಕೊ. ನಿನಗೊಂದು ತತ್ರಾಣ್ಯಾಗ ಸಿಂದಿ ತುಂಬ್ಕೊಂಡು ಜಲ್ದಿ ಬರ್ತಿನೆಂತ. ಇವತ್ತ ಇಲ್ಲೇ ಉಂಡು ಹೋಗಾಕೆಂತ" ಎಂದು ಗುಡಿಸಲ ಬಳಿ ಸರಿದು ಮಗಳಿಗೆ ಆದೇಶವಿತ್ತ.

"ಲಚ್ಚವ್ವಾ... ಮನ್ನ ಭಾಸಕೆರ್‍ಯಾಗ ಬಲಿಹಾಕಿ ತಂದ ಜಂಗಿ ಮೀನಾ ಅವಾ ಅಲ್ಲ. ಒಣಮೀನಾ... ಅದರ ಪಲ್ಯಾ ಮಾಡಿ ಬಿಸಿರೊಟ್ಟಿ ಮಾಡು. ನಾ ಬರ್ತೆನಿ ಈಗ. ಕಾಸಿಗಿ ಕಾವ ಕುಡು ಜರಾ ಏನು?"

"ಹಂಚ ಕಾಯ್ದದೆಪೋ... ಈಗ ಕುಡ್ತಿನೆಂತ."

"ಆಟು ಮಾಡು. ಪಾಪ ಅಂವಗ್ಯಾರೂ ಇಲ್ಲ" ಎನ್ನುತ್ತ ಪಟಗಾ ತಲೆಗೆ ಸುತ್ತಿಕೊಳ್ಳುತ್ತಲೇ ಸೇಂದಿ ಬನದ ದಾರಿ ಹಿಡಿದ. ಹಳ್ಳಿ ಸೀಮೆಯಲ್ಲಿಯೇ ಸೇಂದಿ ಬನವಿರುವುದರಿಂದ ಹಳ್ಳಿಯಲ್ಲಿ ಸೇಂದಿ ಅಂಗಡಿಯಿರಲಿಲ್ಲ. ಆದ್ದರಿಂದ ಕುಡಿಯುವವರೆಲ್ಲರೂ ಬನಕ್ಕೆಯೇ ಹೋಗುತ್ತಿದ್ದರು.

"ನನಗ ರೊಟ್ಟಿ ಮಾಡದದಾನೇ ಲಚ್ಚಿ ನಾ ಹೋಗ್ತೀನಿ" ಎನ್ನುತ್ತ ಕೆಂಚಿ ಹೊರಟು ಹೋದಳು. ಲಚ್ಚಿ ಕಾದ ಹೆಂಚು ತೆಗೆದುಕೊಂಡು ಬಂದು ಹೊರಸಿನ ಬಳಿಯಿಟ್ಟು ಬಟ್ಟೆ ತುಂಡು ಮುದ್ದೆ ಮಾಡಿ ಅದ್ಧಕೊತ್ತಿ ಅದನ್ನು ತನ್ನ ಹಸ್ತದಿಂದ ಮುಟ್ಟಿ ಬಿಸಿ ಪರೀಕ್ಷಿಸಿ ಮೆಲ್ಲಗೆ ಅದನ್ನು ಅವನ ಹಣೆಯ ಗಾಯಕ್ಕೆ ಇಟ್ಟಳು.

"ಅಯ್ ಅಬ ಬ ಬ ಬಾ...."

ಕಾಸಿನಾತ ನರಳಿ ಅವಳ ಕೈ ಹಿಡಿದ. ಲಚ್ಚಿ ಕಂಗಾಲಾದಳು.

"ಬಕ್ಕಳ ಬ್ಯಾನಿ ಆಗ್ಯಾದೇನು?" ಕೇಳಿದಳು.

"ಹೂಂ.... ಪೆಟ್ಟೂನೂ ಜೋರಕಾಸಿ ಬಿದ್ದಿತ್ತು ನೋಡು."

"ನಂದು ತೆಪ್ಪಾಯ್ತು ಕಾಸಿನಾತಾ. ನಾ ನಿನಗ ನೋಡಲಾರ್ದೆ ಕಲ್ಲ ಬೀಸಿದ್ದ...."

ಪಶ್ಚಾತ್ತಾಪದ ದನಿ ಹೊರಡಿಸಿದವಳ ಹಸ್ತವನ್ನು ಮೃದುವಾಗಿ ಅದುಮಿದವನು ಮುಗುಳ್ನಗೆ ತೇಲಿಸಿದ.

"ಬಕ್ಕಳ ಗುಮ್ಮ ಗಾಯಾಗ್ಯಾದ ಲಚ್ಚೀ...." ಅವಳು ತತ್‌ಕ್ಷಣ ಅವನ ಹಣೆಯ ಗಾಯ ಸವರಿದಳು.

"ಅಲ್ಲಿ ಅಲ್ಲೇ...."

"ಮತ್ತೆಲ್ಲಿ ಕಾಸಿನಾತ?" ಅವಳು ಪಿಳಿ ಪಿಳಿ ಕಣ್ಣು ಬಿಟ್ಟಳು.

ಚಿಕ್ಕಿಗಳ ಮುಸುಕು ಬೆಳಕು ಸುತ್ತಲೂ ಆಡುತ್ತಿತ್ತು. ಕಪ್ಪನೆಯ ಕಂಬಳಿಯ ಮೇಲೆ ಮುತ್ತಿನ ರಾಶಿಯಂತೆ ಚೆಲ್ಲುವರೆದ ನಕ್ಷತ್ರ ಸಮೂಹ. ಆಗತಾನೆ ಮೈನೆರೆದು ಹರೆಯಕ್ಕೆ ಕಾಲಿಟ್ಟು ಮುಸು ಮುಸು ನಗುತ್ತ ಸುಳಿದಾಡುವ ಪಡ್ಡೆ ಹೆಣ್ಣುಗಳಂತಹ ಚುಕ್ಕೆಗಳು. ಆಗತಾನೆ ಮೂಡಿ ಮೇಲೇರುತ್ತಿರುವ ಬಿಳಿಗೂಳಿಯಂಥ ಚಂದಿರ.

ಕಾಸಿನಾತ ಅವಳ ಹಸ್ತವನ್ನು ಮೆತ್ತಗೆ ಹಿಡಿದು ತನ್ನದೆಗೊತ್ತಿಕೊಂಡು ನುಡಿದ.

"ಇಲ್ಲಿ ಇಲ್ಲೇ ಗಾಯಾಗಿದ್ದು. ಭಾಳ ಆಳ ಗಾಯ ಲಚ್ಚೀ..."

ಲಚ್ಚಿ ಅಂತಹ ತಣ್ಣನೆಯ ಆವರಣದಲ್ಲಿಯೂ ಥರಗುಟ್ಟಿದಳು. ಕಂಪಿಸುತ್ತಿರುವ ಕಣ್ಣೆವೆಗಳನ್ನೆತ್ತಿ ಅವನನ್ನು ನಿರುಕಿಸಿದಳು. ಲಜ್ಜೆ ಅವಳ ಕೆನ್ನೆ, ತುಟಿಗಳಿಂದ ಕೆಳಜಾರಿತು.

ಕಾಸಿನಾತ ಮೃದುವಾಗಿ ಅವಳ ಹಸ್ತವನ್ನೆತ್ತಿ ತುಟಿಗಿಟ್ಟುಕೊಂಡ.

"ಕಾಸಿನಾತಾ... ಕಾಸಿನಾತಾ...." ಅವಳು ತೊದಲಿದಳು.

"ಕಾಸಿನಾತ ಅಲ್ಲೇ ಹುಚ್ಚಿ.... ಬರೇ ಕಾಸಿ ಅನ್ನು" ಸಾಕು.

ಅಷ್ಟರಲ್ಲಿ ಫಕೀರಪ್ಪ ಹಾಡೊಂದನ್ನು ಗುನಗುನಿಸುತ್ತ ಅಂಗಳ ಹೊಕ್ಕ.

"ಲಚ್ಚವ್ವಾ... ಈಕಾ ಒಂದು ಗಿಲಾಸ ತಗೊಂಡು ಬಾ ಈಕಾಡಿ."

ಅವನ ದನಿಗೆ ಅವಳು ತಟ್ಟನೆ ಎದ್ದು ಒಳಗೋಡಿ ಅಲ್ಯುಮಿನಿಯಂನ ಲೋಟ ತಂದಿಟ್ಟು ಗುಡಿಸಲು ಸೇರಿದಳು. ಬೆಂಕಿಯಿದ್ದ ಒಲೆಗೆ ಕುಳ್ಳು ಕಟ್ಟಿಗೆ ತುರುಕಿ ಅಡಿಗೆಗೆ ಅಣಿಯಾದಳು.

ಫಕೀರಪ್ಪ ಹೊರಸಿನ ಬಳಿ ಕುಳಿತು ತತ್ರಾಣಿಯಿಂದ ಲೋಟಕ್ಕೆ ನೊರೆ ಹೆಂಡ ಸುರಿದ.

"ಯೇಳೋ ತಮ್ಮಾ.... ಕಾಸಿ. ಇದು ಕುಡಿ. ರಾತರಿ ಆರಾಮ ನಿದ್ದಿ ಬರ್ತದ."

ಕಾಸಿನಾತ ಎದ್ದು ಕುಳಿತು ಗಿಲಾಸ ಎತ್ತಿಕೊಂಡ. ಹೆಂಡ ನೊರೆ ನೊರೆಯಾಗಿ ಚುಂಯ್ ಎಂಬ ಸದ್ದು ಹೊರಡಿಸಿತು. ಹೇಳಿಕೇಳಿ ಬನದ ಹೆಂಡ ಅದು, ಈಗಿನ ಕಾಲದಂತೆ ಯಾವ ಅಮಲು ಔಷಧಿಯನ್ನೂ ಬೆರಸದ ತಾಜಾ ತಾಜಾ ಅಸಲೀ ಗಿಡದ ರಸ ಅದು.

"ಇವತ್ತ ಮಾಲ ಮಸ್ತ ಅದಾನೋ ಕಾಸಿ. ಅಧಸುದ್ದ್ಯಾಕಬೇಕಂತ ಈಳಗೇರ ಭೀಮಯ್ಯಗ ಹೇಳಿ ಸ್ವತಾ ನಾನೇ ಗಿಡ ಹುಡಕ್ಯಾಡಿ ಗೊಬ್ಬಿ ಇಳ್ಸಗೊಂಡು ಬಂದಿನೋ ಪಾರ."

ಗಿಲಾಸ ಖಾಲಿ ಮಾಡಿದ ಕಾಸಿನಾತ ಮಾತಾಡಿದ.

"ಹೊಯಿಂದೋ ಮಾಂವಾ.... ಸಿಂದಿ ಮಾತರ ಭಾಳ ಘರಮಾಸ ಅದಾ ನೋಡು."

"ತತ್ತಾ ಈಕಾಡಿ ಗಿಲಾಸ. ಹಿನಾ ಒಂದೀಟು ಹಾಕಿ ಕುಡ್ತೀನಿ." ಎನ್ನುತ್ತ ಲೋಟ ಇಸಿದುಕೊಂಡು ಹೆಂಡ ಬಗ್ಗಿಸಿದ. ಒಳಗೆ ಲಚ್ಚಿ ಹೆಂಚಿನ ಮೇಲೆ ಮೀನು ಹುರಿಯುವ ವಾಸನೆ ಘಮ್ಮೆಂದು ತೇಲಿಬಂತು.

"ಲಚ್ಚವ್ವಾ..... ಕೋಳಿ ತತ್ತಿ ಇದ್ದರ ಹಂಚನ್ಯಾಗ ಹಾಕ್ಕೊದೇ ತಂಗೀ. ಬಾಯಾಡಸಲಕ ಏನೂ ಇಲ್ಲಾ." ಫಕೀರಪ್ಪ ಕೂಗು ಹಾಕಿದ.

ಎಡ್ಡವಾ ಆಕ್ಕೊಡ್ತಿ ನಿನಿಂದ್ರೋ ಯಪ್ಪಾ... "ಲಚ್ಚಿ ಒಲೆಯ ಮುಂದೆ ಕುಳಿತೇ ಹೆಂಚಿನಲ್ಲಿ ಕಡಚಿ ಆಡಿಸುತ್ತ ಉತ್ತರಿಸಿದಳು.

ಭೀಮಳ್ಳಿ ಲಕ್ಕವ್ವನ ಜಾತ್ರೆ ವರ್ಷಕ್ಕೊಂದು ಸಲ ಸಂಭ್ರಮದಿಂದ ನಡೆಯುವುದು, ಲಗಸಿಮಿ ಅಂದ್ರೂ ಅವಳೇ ಲಕ್ಕವ್ವ ಅಂದ್ರೂ ಅವಳೇ. ಮಾದಿಗ ಹೊಲೆಯರ ಕೇರಿಗಳಿಗೇ ಹತ್ತಿರವಾಗಿದೆ ಅವಳ ಗುಡಿ. ಅವಳ ಭಕ್ತರೂ ಹೊಲೆ ಮಾದಿಗರೇ. ಎಡಗೈ ಬಲಗೈಯವರೇ. ಆದರೂ ಬ್ಯಾರೇಕುಲದೇವರೇನೂ ಲಕ್ಕವ್ವನನ್ನು ತಮ್ಮ ಜಾತಿಯಿಂದ ಹೊರಗಿಟ್ಟಿಲ್ಲ. ಕದ್ದು ಮುಚ್ಚಿ ಕೆಲವೊಮ್ಮೆ ಎಲ್ಲರ ಕಣ್ಣಿಗೆ ಕಾಣುವಂತೆಯೂ ಅವಳ ಸೇವೆ ಮಾಡ್ತಾರೆ.

ಭೀಮಳ್ಳಿ ಲಕ್ಕವ್ವನ ಮಹಿಮೆ ಇಷ್ಟೇ ಅಂತ ತರ್ಕಿಸಲು ಸಾಧ್ಯವಿಲ್ಲ. ಸಾಧಾರಣವಾಗಿ ಎಲ್ಲ ಹಳ್ಳಿಯ ದೇವತೆಗಳಂತೆ ಇವಳಿಗೂ ಕೆಲವು ವಿಶಿಷ್ಟ ಶಕ್ತಿಯಿವೆ. ಮಕ್ಕಳಿಲ್ಲದವರಿಗೆ ಮಕ್ಕಳು ಕೊಡುತ್ತಾಳೆ. ಇದ್ದ ಮಕ್ಕಳನ್ನು ಅಗಲಿಸುತ್ತಾಳೆ. ಕೆಲವೊಮ್ಮೆ ಕಸಿದುಕೊಳ್ಳುತ್ತಾಳೆ. ಗಂಡಹೆಂಡಿರನ್ನು ಬೇರ್ಪಡಿಸುತ್ತಾಳೆ. ರಂಡೆ ಮಿಂಡರನ್ನು ಕೂಡಿಸುತ್ತಾಳೆ. ಹರೇದ ಪಡ್ಡೆ ಯುವಕರ ಬೀಜ ಒಡೆದು ಸೀರೆ ಉಡಿಸುತ್ತಾಳೆ. ಮೀಸೆಯ ಬೇರು ಕಿತ್ತು ಅವರನ್ನು ಖೋಜಾ ಮಾಡುತ್ತಾಳೆ. ಹರಕೆ ಮರೆತವರ ಬಸುರಿಗೆ ಬೆಂಕಿಯಿಡುತ್ತಾಳೆ. ಗಂಡನಿಂದ ಬಂಜೆಯಾಗಿ ಉಳಿದವರಿಗೆ ಮಿಂಡರಿಂದ ಮಕ್ಕಳು ಕೊಡುತ್ತಾಳೆ.

ಒಂದೇ ಎರಡೇ ಅವಳ ಮಹಿಮೆ. ಬರೆಯುತ್ತ ಹೊರಟರೆ ಕಾದಂಬರಿಯ ತುಂಬ ಅದೇ ಆದೀತು, ಹೇಳುತ್ತ ಕುಳಿತರೆ ರಾತ್ರೆಂಬೋ ರಾತ್ರಿಯೆಲ್ಲಾ ಜಿಲ್ಲನೆ ಬೆವರು ಬಿಟ್ಟು ಹೊಟ್ಟೆ ಕೆಡವಿಕೊಂಡು ರಕ್ತಸಿಕ್ತ ಬೆಳಗನ್ನು ಹೊರ ತಳ್ಳೀತು.

ಭಾಸಗಿ ಸೀನಿಂಗಪ್ಪನ ಮಗಳು ಸಿದ್ದೀರಿ ಮದುವೆಯಾಗದ ಹುಡುಗಿ. ಸಂಬುಸ್ತಾನಿ ಹೊಲದ ಕಡೆಗೆ ಹೋಗುವಾಗ ಅವಳು ಕೈ ಜೋಡಿಸಿ ಸೆಣ ಮಾಡುವಳು.

"ಯವ್ವೋ... ಬೆಂಕಿ ಕಣ್ಣಕ್ಕೆ ತಾಯೀ. ನನಗ ಮುಟ್ಟನಿಂದರಲಾರ್ದ್ಹಾಂಗ ಮಾಡು"

ಅಂತ ಬೇಡಿಕೊಳ್ಳುವಳು. ದೇವಿಯ ಆಶೀರ್ವಾದದಿಂದ ಅವಳು ದಿನಾ ಲಕ್ಕಿ ಪೊದೆಯ ತಗ್ಗಿನಲ್ಲಿ ಮರೆಪ್ಪನ ಮಗ ನಾಗ್ಯಾನ ಮಗ್ಗುಲಲ್ಲಿ ಮಲಗಿಕೊಳ್ಳುತ್ತಾಳಾದರೂ ಒಮ್ಮೆಯೂ ಅಪ್ಪಿತಪ್ಪಿ ಕೂಡ ಬಸಿರು ಬೆಳೆದಿಲ್ಲ.

ಲಿಂಗಾಯಿತರ ರತನಾ ಗಂಡಸತ್ತ ರಂಡಿಮುಂಡಿ. ಇನ್ನೂ ಮುವ್ವತ್ತೈದು ದಾಟಿಲ್ಲ. ಮೈಯ ಕಾವು ಇಮ್ಮಡಿಯಾಗಿಯೇ ಇದೆ. ಗಂಡನಿದ್ದಾಗಲೇ ಆಳು ಮಗ ತಿಪ್ಪಣ್ಣನನ್ನಿಟ್ಟುಕೊಂಡಿದ್ದಳಂತೆ. ಈಗಲೂ ರತನಾನ ಮಂಚಕ್ಕೆ ರಾತ್ರಿ ಕಳ್ಳ ಬಾವುಗ ಬೆಕ್ಕಿನಂತೆ ಬಂದು ಮುಸಿ ಮುಸಿ ಮಾಡಿ ಗುದಮುರಿಗೆ ಆಡಿ ಹೋಗುತ್ತಾನೆ. ಗೋಡ್ತಿ ರತನಾ ದಿನಾಗಲೂ ತಾಯಿ ಗುಡಿಗೆ ಅಂಗಳದಾಗ ಬೆಳೆದ ಮಲ್ಲಿಗೆ ಹುವ್ವಾ ಕಳಿಸಿಕೊಡುತ್ತಾಳೆ. ಅವಳಿಗೂ ಮುಟ್ಟು ನಿಂತಿಲ್ಲ.

ಕುಲಕರ್ಣಿಯ ಹೆಂಡತಿ ರಮಾಬಾಯಿ ತನ್ನ ಹಾದರ ಗಂಡನಿಗೆ ಗೊತ್ತಾಗದಿರಲಿ ಎಂದು ಲಕ್ಕವ್ವನಿಗೆ ಹರಕೆ ಹೊರುವುದರ ಪರಿಣಾಮವಾಗಿ, ಊರ ಹೆಂಗಸರ ಮೀಸಲ ಮುರಿಯುತ್ತ ಓಡಾಡುವ ಕುಲಕರ್ಣಿಯ ಕಣ್ಣಿಗೆ ಹೆಂಡತಿಯ ಹಾದರ ಕಂಡುಬಂದಿಲ್ಲ. ಫ್ಯಾಮಿಲಿ ಪ್ಲಾನಿಂಗ್‌ನ ರೀತಿಗಳು ಗೊತ್ತಿಲ್ಲದ ಕಾಲ ಅದು ಪಾಪ, ಕ್ರೆಡಿಟ್ಟೆಲ್ಲ ದೇವಿಗೇ ಮೀಸಲಾಗಿತ್ತು.

ಚಿಗರಿ ಪೋಚರು, ಲಂಬಾಣಿಗರು, ಸುಗ್ಗಿಯ ಕಾಲದಲ್ಲಿ ಕಳ್ಳತನಕ್ಕೆ ಹೋಗುವಾಗ, ಪ್ರತಿ ಶನಿವಾರ ಕಲ್ಬುರ್ಗಿಯ ಸಂತೆಯಲ್ಲಿ ಕಿಸೆ ಕತ್ತರಿಸುವ ದಂದೆಗೆ ಹಳ್ಳಿಯ ಕೆಲ ಪೋರಗೊಳು ಹೋಗುವಾಗ ಲಕ್ಕವ್ವನ ಗುಡಿಗೆ ಹಣೆ ಹಚ್ಚಿ ಬೇಡಿಕೊಳ್ಳುತ್ತಾರೆ.

ಹೀಗೆ ಅಮ್ಮ ಹಳ್ಳಿಯ ಹತ್ತು ಹದಿನೆಂಟು ಕುಲದ ಗಂಡು ಹೆಣ್ಣುಗಳಲ್ಲಿ, ಕಳ್ಳಕಾಕರಲ್ಲಿ ಜಾಗ್ರತ ದೇವತೆಯಾಗಿದ್ದಾಳೆ.

ಭೀಮಹಳ್ಳಿಯ ಜನರ ರಟ್ಟೆಗಳಲ್ಲಿ, ಕ್ರೋಧದಿಂದ ಕುದಿದ ಹೊಟ್ಟೆಗಳಲ್ಲಿ, ನಾಲಿಗೆ ಕಿವಿಗಳಲ್ಲಿ, ಎದೆಯಲ್ಲಿ ಉಕ್ಕುವ ಸೇಡಿನ ಕಿಡಿಯಲ್ಲಿ, ಮೀಸೆ ಮೊಲೆಗಳಲ್ಲಿ ಲಕ್ಕವ್ವ ತಾನೇ ತಾನಾಗಿದ್ದಾಳೆ. ಹಳ್ಳಿ ಕಾಯುವ ದೇವಿ ಅವಳು.

ಅಂಥ ದೇವಿಯ ಪಾದಗಳನ್ನು ನಮ್ಮ ಹೊಲೇರ ಪೋರಿ ಲಚ್ಚಿ ನಂಬದಿರಲು ಸಾಧ್ಯವೇ. ದಿನಾ ಒಂದು ಸರ್ತಿಯರೆ ಕಾಸಿನಾತನ ಕೈ ತನ್ನ ಮೈಯ ಸಂದಿಗೊಂದಿಗಳಲ್ಲಿ ಆಡಲಿ ಅಂತ ಅವಳೂ ದಿನಾ ಬೆಳಿಗ್ಗೆ ಗುಡಿಯ ಬದಿಯಿಂದ ತಂಬಿಗೆ ತಗೊಂಡು ಹೊರಕಡಿಗೆ ಹೋಗುವಾಗ ಬೇಡಿಕೊಳ್ಳುತ್ತಾಳೆ. ಅದು ರೂಪಾಯಿಗೆ ಸೋಳಾ ಆಣೆ ಸತ್ಯ ಆಗುತ್ತ ಹೊರಟಿದೆ.

ಅಂದು ಸಂಜೆ ಕಪ್ಪಾದರೂ ಲಚ್ಚಿಯ ಸಜ್ಜೆ ಬಣ್ಣದ ತಲಗೋಳಿ ಮನೆಗೆ ಬಂದು ಗೂಡು ಸೇರಲಿಲ್ಲ. ಅದರ ಮಕ್ಕಳು ಬಂದುವು. ಬೇರೆಪಡ್ಡಿಗಳು, ಹುಂಜಗಳು ಬಂದು ಗೂಡು ಸೇರಿ ಕಿಚಿಪಿಚಿ ನಡೆಸಿದುವು. ಅವಳು ಅಂಗಳದಲ್ಲಿ ಬಂದು ನಿಂತು ಬಾಯಿಯಿಂದ ವಿಚಿತ್ರ ಸದ್ದು ತೂರಿಸಿ ತನ್ನ ನೆಚ್ಚಿನ ಕೋಳಿಯನ್ನು ಕರೆದೇ ಕರೆದಳು. ಉಹುಂ ಅವಳ ಕೋಡ್ ನೇಮ್‌ಗೂ ಕೋಳಿ ಓಗೊಡಲಿಲ್ಲ. ಎಲ್ಲಿಯೂ ಆಸುಪಾಸಿನಲ್ಲಿ ಕೋಳಿ ಕಾಣಿಸಲಿಲ್ಲ.

"ಕೆಂಚೀ.... ನನ್ ಕೋಳೀನೇ ಕಾಣ್ಣಂಗಿಲ್ಲಾಗ್ಯಾದ ನೋಡೆ... ಹೊತ್ತ ಮುಣಗಿ ಕತ್ತಲಾಯ್ತು. ಹಿನಾ ವಿನಾ ಮನೀಗಿ ಬಂದಿಲ್ಲ....."

"ಇಲ್ಲೇ ಎಲ್ಲೇರೆ ಇದ್ದತ್ತು ನೋಡು. ಯಾಂವರೆ ಗೆಣೆಕಾರ ಸಿಕ್ಯಾನೇನೋ.... ಹುಕ್ಕಾ ಹಾಯ್ಕೋತ ನಿಂತಿರಬೇಕು. ಬರ್ತಾದ ತಗೋ...."

"ಹಂಗೆಲ್ಲಾ ಬ್ಯಾರೆ ಹುಂಜಾಗೋಳ ಬಲ್ಲಿ ಹೋಗಂಗಿಲ್ಲೇ ನನ್ ಕೋಳಿ. ಬ್ಯಾರೆ ಹುಂಜಾಗೋಳಲಿಂದ ಮೆಟ್ಟಸಗೋಮಂಗಿಲ್ಲ ನಮ್ಮನೀ ಹುಂಜಾನೇ ಅಗ್ಬೇಕದಕ್ಕ....."

"ಏs.... ಭಾಳ ಗರತಿಗಂಗವ್ವಾಯ್ತು ಬಿಡು ನಿನ್ ಕೋಳಿನೂ..... ಮಾದರ ಹುಂಜಾ ಬಂದ್ರ ಒಲ್ಲಂತಾದೇನು?"

"ನಿನ್ ಬಾಯಾಗ ಮಣ್ಣ ಹಾಕಲಿ. ಹಿಂತಾ ಯಾಳ್ಯಾದಾಗನೂ ನಿನಗ ನಖರಿನೇ...."

ಎನ್ನುತ್ತ ಲಚ್ಚಿ ತನ್ನ ಕೋಳಿಯನ್ನು ಹುಡುಕುತ್ತ ಹೊರಟಳು.

"ರಾಚವತ್ತೀ.... ನನ್ ಕೋಳಿ ನೋಡಿದ್ದೇನೇ....."

"ಇಲ್ಲಗs ಪೋರಿ ಯಾವಾಗ ಕೆಳ್ದದೇಯಾ ಕೋಳಿ?"

ಸೆಜ್ಜಿ ಬಣ್ಣದ ಕೋಳಿನೇ ಅತ್ತಿ.... ತಿಂಗಳ ಮಂಚ ಕಲಬುರಗಿ ಸಂತಿಲಿಂದ ತಂದಿದ್ನೇ ಅತ್ತಿ... ಬಿಳಿ ಫಕ್ಕದ ಮ್ಯಾಲ ಕರಿ ಚಿಕ್ಕಿಯಿದ್ದ ಛೆಂದನ ಕೋಳಿನೇ ಅದು. ಅದರ ಒಣಕ್ಕೆ ಆರಾಣೆ ರೊಕ್ಕಾ ಹೆಚ್ಚ ಕೊಟ್ಟಿದ್ನೇ....."

"ನಾ ನೋಡಿಲ್ಲೇ ಯವ್ವಾ"

ಲಚ್ಚಿ ಕೇರಿಯ ಗುಡಿಸಲುಗಳನ್ನು ಹೊಕ್ಕು ಹೊರಬಂದಳು. ಒಲೆಯ ಮೇಲೆ ಕುದಿಯುತ್ತಿರುವ ಗಡಿಗೆಗಳ ಮುಚ್ಚಳಗಳನ್ನು ತೆರೆದು ನೋಡಿದಳು. ಉಹೂಂ... ಕೋಳಿ ಕಾಣಿಸಲಿಲ್ಲ. ಅವಳು ಬೈಯುತ್ತ ನೆಟಿಕೆ ಮುರಿಯುತ್ತ ಹೊರಟಳು.

"ಯಾ ನನ್ ಹಾಟ್ಯಾ ಒಯ್ದು ತನ್ ರಂಡೀಗಿ ಕೊಟ್ನೇ ಯವ್ವಾ. ಯಾರ ಗುಡಸ್ಯಾಗ ಯಾ ಒಲಿ ಮ್ಯಾಲ ನನ್ ಕೋಳಿ ಕುದ್ಲಿಕತ್ತಾದೇ ತಾಯಿ..... ಯಾ ಜೋಗಣಿ ಒಯ್ದು ತನ್ ಮಿಂಡಗಾರ ಕೊಟ್ಯೇ....." ಲಚ್ಚಿ ಅಬ್ಬರಿಸಿ ಬರುವ ಅಳುವನ್ನು ಅರ್ಧಮರ್ಧ ನುಂಗುತ್ತ, ಹೊರಚೆಲ್ಲುತ್ತ ಕಣ್ಣೀರು ಸುರಿಸುತ್ತ ಬಯ್ಯುತ್ತ ಬರುತ್ತಿದ್ದಳು. ದೂರದಲ್ಲಿ ಲಕ್ಕವ್ವನ ಗುಡಿಯ ಪೌಳಿಯ ಹಿಂದೆ ಕೋಳಿಯೊಂದು ಕೊಕ್‌ಕೊಕ್ ಮಾಡಿದಂತೆ ಕೇಳಿಸಿ ಆ ಕಡೆಗೆ ಓಟಕಿತ್ತಳು.

ಕತ್ತಲೆ ತೊಪ್ಪೆ ತೊಪ್ಪೆಯಾಗಿ ಗಿಡ, ಮರ, ಗುಡಿಸಲುಗಳ ಮೇಲೆಲ್ಲ ಬಿದ್ದು ಕಪ್ಪಾಗಿಸುತ್ತಿತ್ತು. ಬರೀ ಉಡುಪುಗಳ ಮೇಲೆ ಹೆಣ್ಣು ಗಂಡುಗಳನ್ನು ಊಹಿಸಬೇಕಾಗಿತ್ತೇ ವಿನಾ ಒಬ್ಬರ ಮುಖ ಇನ್ನೊಬ್ಬರಿಗೆ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಕತ್ತಲೆಯ ತೆಕ್ಕೆಯಲ್ಲಿ ಎಲ್ಲವೂ ಕರಗುತ್ತ ಕಪ್ಪಾಗತೊಡಗಿತ್ತು.

"ಪ್ಪ... ಪ್ಪ.... ಪ್ಪ....... ಬಾ...... ಬಾ..... ಬಾ...."

ಗುಡಿಯ ಬಳಿನಿಂತು ಲಚ್ಚಿ ಕೋಳಿಗೆ ಕರೆಕೊಟ್ಟಳು. ಕಾದಳು. ಉಹೂಂ.... ಕೋಳಿ ಮರುದನಿ ಹರಿಸಲಿಲ್ಲ. ಲಕ್ಕವ್ವನ ಗುಡಿಯ ಹಿಂದಿನ ಹಳೆಯ ಬೇವಿನ ಮರ ಧುತ್ತೆಂದು ಇವಳ ಕಣ್ಣಿಗೆ ಅಪ್ಪಳಿಸಿದಂತಾಗಿ ಲಚ್ಚಿ ಹೆದರಿ ಒಂದು ಹೆಜ್ಜೆ ಹಿಂದೆ ಸರಿದಳು.

"ಇದರ ಹೆಣಾ ಎತ್ಲಿ.... ಇದಕ ದುರ್ಗಿ ನುಂಗ್ಲೀ.....

"ಎಕಾಡಿ ಹೋಗಿ ಸತ್ತಾದೋ ಮಡಸ್ ಕೋಳಿ."

ಎಂದು ಬೈಯುತ್ತ ತಿರುಗಿದಳು. ದೂರದಲ್ಲಿಯ ಕಾಲುದಾರಿಯ ಮೇಲೆ ಆಕೃತಿಯೊಂದು ಗೋಚರಿಸಿ ಧ್ವನಿ ಹೊರಡಿಸಿತು.

"ಯಾರs ಲಚ್ಚಿ ಏನು? ಹಿಂತಾ ಕತಲಾಗ ಗುಡಿಕಾಡಿ ಯಾಕ ಹೋಗಿದ್ದೀ ಪೋರಿ?"

ಗುಡಿಯ ಪೂಜಾರಿ ಕೇಳುತ್ತ ಅವಳ ಹತ್ತಿರ ಬರತೊಡಗಿದ. ಪೂಜಾರಿ ಭರಮ್ಯಾ ಹೊಲೆಯರವನೇ ಆದರೂ ಹಳ್ಳಿಯ ಇನ್ನುಳಿದ ಕುಲದವರ ಕಣ್ಣುಗಳಲಿ ಅವನದು ಎತ್ತರದ ಸ್ಥಾನ. ಉದ್ದ ಕೂದಲನ್ನು ಎತ್ತಿ ತುರುಬು ಕಟ್ಟಿಕೊಂಡು ಹಣೆಯಲ್ಲಿ ಅರಿಶಿನ ಕುಂಕುಮಗಳ ಪಟ್ಟಿ ಎಳೆದಿರುತ್ತಾನೆ. ಹಗಲಿನ ಹನ್ನೆರಡೂ ತಾಸೂ ಎಲೆ ಮೆದ್ದೂ ಮೆದ್ದೂ ಹೊಲಸಾದ ಬಾಯಿ, ತುಟಿ, ಹಲ್ಲುಗಳು. ಅರೆ ಕೆಂಪು ಪರ್ಮನೆಂಟಾಗಿ ಉಳಿದ ಮೀಸೆಗೂದಲು. ಮೇಲೆ ಅಗಲ ಗವಿಯಂತಹ ಮೂಗು. ದೊಡ್ಡ ದೊಡ್ಡ ಹೊಳಪಿಲ್ಲದ ಹೆದರಿಕೆ ಹುಟ್ಟಿಸುವ ಕಣ್ಣುಗಳು. ಕೊರಳಲ್ಲಿ ಕವಡೆಯ ಸರ, ಧೋತಿ, ಅಂಗಿಗಳ ಒಡೆಯ ಭರಮ್ಯಾ ಪೂಜಾರಿ ಐವತ್ತು ದಾಟಿ ನಿಂತ ಅರೆ ಕಾಮುಕ.

"ನನ್ ಕೋಳಿ ಕಳದಾದೋ ಮುತ್ಯಾ.... ಇಲ್ಲೆಲ್ಲೋ ದನಿ ಕೇಳ್ದಂಗಾಯ್ತು ಹುಡಕಲಕ್ಹೋಗಿದ್ದೆ."

"ಥೂ ನಿನ್..... ಮುತ್ಯಾ ಅನಬ್ಯಾಡಂತ ಏಸ್ಸಾರಿ ಹೇಳ್ದರನೂ ನಿನಗ ತಿಳಿಂಗಿಲ್ಲಲ್ಲೇ....." ಎಂದು ಒಳಗೊಳಗೇ ಒಟಗುಟ್ಟುತ್ತ ಜೋರಾಗಿ ನುಡಿದ.

"ಹಿಂಗ್ ಹುಡುಕದ್ರೇನು ನಿನ್ ಕೋಳಿ ಸಿಗತಾದೇನೇ ಲಚ್ಚಿ.... ತಾಯಿ ಗುಡೀಗಿ ಬಾ.... ದೀಪಾ ಹಚ್ಚಿ ಕವಡಿ ಹಾಕಿ ನೋಡಿ ಹೇಳ್ತಿನೆಂತ."

"ಕೇಳಿಸಿ ನೋಡ್ಲಕ ನನ್ ಬಲ್ಲಿ ರೊಕ್ಕಾ ಇಲ್ಲೋ ಮುತ್ತ್ಯಾ."

"ಯೇಸು ಇದ್ದೋನು ಕುಡಾಕೆಂತ ಬಾ...... ತಾಯಿಗಿ ಎಡ್ಡು ಊದಿನ ಕಡ್ಡಿ ಗಾದ್ರ ಸಾಕು."

ಆದರೆ ಲಚ್ಚಿಗೆ ತಿಳಿದಿತ್ತು. ಊದಿನಕಡ್ಡಿ ಹಚ್ಚಂಗಿಲ್ಲ ಈ ಪೂಜಾರಿ, ಆ ರೊಕ್ಕದಲಿಂದ ಬೀಡಿ ಸೇದ್ತಾನಂತ. ಆದರೆ ಅವಳು ಬಾಯಿಂದೇನೂ ನುಡಿಯಲಿಲ್ಲ.

ಇಬ್ಬರೂ ಗುಡಿಯಲ್ಲಿ ಬಂದರು. ಅವನು ಒಡಕು ಹಣತೆಯಲ್ಲಿಯ ಬತ್ತಿಗೆ ಕಡ್ಡಿಗೀರಿ ತಾಕಿಸಿದ. ಗಾಳಿಯೊಂದಿಗೆ ಕಣಮುಚಗಿ ಆಟಾ ಆಡ್ಕೋತ ಕಡ್ಡಿ ಗೀರಿದ. ಉರಿ ಮೂರು ನಾಲ್ಕು ಸಲ ಬತ್ತಿಯನ್ನು ಬರೀ ಬಿಸಿ ಮಾಡಿತೇ ಹೊರ್‍ತು ದೀಪ ಹತ್ತಲಿಲ್ಲ.

"ಇದರವ್ವನಾ ಹದಿನೆಂಟಿಗ್ಹುಟ್ಟಿದ್ದು. ದೀಪಾನೇ ಹತ್ತಗಿಲ್ಲಾಗ್ಯಾದಲ್ಲಾ....."

ಎನ್ನುತ್ತ ಪೂಜಾರೆಪ್ಪ ಕೊನೆಯ ಸಲ ಕಡ್ಡಿ ಗೀರುತ್ತ

"ನೀ ಕೈ ಅಡ್ಡ ಹಿಡಿಯೇ ಲಚ್ಚಿ...." ಎಂದ, ಅವಳು ಕೈ ಹಿಡಿದಳು. ದೀಪ ಹೊತ್ತಿತಾದರೂ ತತ್ತರಿಸುವುದನ್ನು ಮಾತ್ರ ಬಿಡಲಿಲ್ಲ.

ಪೂಜಾರಿ ಅಮ್ಮನ ಕಟ್ಟಿಗೆಯ ಮೂರ್ತಿಯ ಮುಂದೆ ಕೈ ಜೋಡಿಸಿ ಏನೋ ಮಣಾ ಮಣಾ ಗುಟ್ಟಿದ. ತಾಯಿಗೆ ಕುಂಕುಮ ಭಂಡಾರ ಹಚ್ಚಿದ. ಕೈಯಲ್ಲಿಯ ಕವಡೆ ಎಸೆದು ನೋಡಿದ. ನಂತರ ಕಣ್ಣು ಮುಚ್ಚಿ ತೆರೆದು ನಿಧಾನವಾಗಿ ನುಡಿದ.

"ಲಚ್ಚೀ....."

"ಯೇನು ಮುತ್ಯಾ"

"ತಾಯಿಗಿ ದಾರಿ ತೋರಸಲ್ಕ ತರಾಸ ಆಗಲಕತ್ತಾದಲ್ಲೇ..... ದಗಸಿಣ ಇಡು. ದೇವಿ ನನಗ ಭಾಳ ತರಾಸ ಮಾಡ್ಲಕ್ಹತ್ತಾಳ. ಆಕಿನ ಭಾಜಾ ಆಕಿಗಿ ಕುಡಲಾರ್ದೆ ಆಕಿ ದಾರಿ ತೋರ್ಸಂಗಿಲ್ಲಿ. ಜಲ್ದಿ ಇಡು ಲಚ್ಚೀ...."

ಪೂಜಾರೆಪ್ಪನ ಕಣ್ಣಗಳಲ್ಲಿ ಕರಿಗುಡ್ಡಿ ಮೇಲೇರಿ ಬರೀ ಬಿಳಿ ಗುಡ್ಡಿ ತೇಲಿತು.

ಲಚ್ಚಿ ಸಟಕ್ಕಂತ ತನ್ನ ಸೀರೆಯ ಬಾಳಿಗಂಟನಿಂದ ಐದು ಪೈಸೆಯ ಎರಡು ಬಂದಿ ತೆಗೆದು ಅವನ ಮುಂದಿಟ್ಟು ಸೆಣ ಮಾಡಿದಳು.

"ತಾಯಿ ನಮ್ಮವ್ವಾ.... ಮುತ್ಯಾನ ಜೀವಕ ತರಾಸ ಮಾಡ್ಬ್ಯಾಡ.... ನನ್ ಕೋಳಿ ಯಾರು ತಗೊಂಡಾರ ಹೇಳ್ಬಿಡು ನಮ್ಮವ್ವಾ...."

ಮನಸ್ಸಿನಲ್ಲಿಯೇ ಬೇಡಿಕೊಂಡಳು.

ಪೂಜಾರೆಪ್ಪನ ಬಿಳಿ ಗುಡ್ಡೆಗಳು ಹೋಗಿಕರಿಗುಡ್ಡೆಗಳು ಬಂದವು. ಅವನು ಪ್ರಯಾಸಪಟ್ಟು ಚೇತರಿಸಿ ಕೊಂಡವನಂತೆ ಕುಳಿತು ಮೆಲ್ಲಗೆ ಮಾತಾಡಿದ.

"ಲಚ್ಚೀ..... ನಿನ್ ಕೋಳಿ ಮಾದರ ಕೇರ್ಯಾಗೇ ಮಾಯಾಗ್ಯಾದ. ನೆಡಂಕಿ ನಾಲಾದ ಕಂಟಿ ಕಮರ್ಯಾಗ ತಿರಗತ್ತಿದ್ದ. ಕೋಳಿಗಿ ಕೆಂಪ ಸೀರಿ ಹೆಂಗಸ ಗಬಕ್ಕಂತ ಹಿಡ್ಕೊಂಡು ಉಡ್ಯಾಗಿಟಗೊಂಡು ಒಯ್ದಾಳ. ಈಗ ಅದು ಶಿವನ ಪಾದಾ ಸೇರ್ಯಾದ...."

ಮಾದರ ಕೇರಿಯ ಹೆಂಗಸರು ಇವತ್ಯಾರು ಕೆಂಪ ಸೀರಿ ಉಟಗೊಂಡವ್ರು? ಹಾಂಗ ನೋಡ್ದರ ಹೊಲಗೇರಿ ಮಾದರ ಕೇರ್‍ಯಾಗಿತ ಭಾಳ ಹೆಂಗಸರೆಲ್ಲಾ ಕೆಂಪ ಸೀರಿಗೋಳೇ ಜಾಸ್ತಿ ಉಟಗೋತಾರ. ಅವು ಸಸ್ತಾ ಸಿಗ್ತಾವಂತ. ಮಾದರ ಕೇರ್‍ಯಾಗಿನ ಕೆಂಪಸೀರಿ ಹೆಂಗಸರಿಗಿ ಹ್ಯಾಂಗ ಕೇಳಾದು?

ಲಚ್ಚಿಯ ತಲೆಯಲ್ಲಿ ಮತ್ತೆ ವಿಚಾರ ಚಕ್ರ ಸುತ್ತತೊಡಗಿತು.

ಈ ಕತ್ತಲ ರಾತರ್‍ಯಾಗ ಮಾದರಗೇರಿಗೆ ಹೋಗಿ ಕೆಂಪಸೀರಿ ಉಟ್ಟವ್ರೀಗಿ ಹುಡುಕದಾದರನೂ ಹ್ಯಾಂಗ? ಕೋಳಿ ಕಳು ಮಾಡಾ ಮುಂದ ಕೆಂಪ ಸೀರಿ ಉಟ್ಟವ್ರು ಮನೀಗಿ ಬಂದು ಬ್ಯಾರೆ ಬಣ್ಣದ ಸೀರೆ ಉಟ್ಟಿದರಂದ್ರ ಏನ್ಮಾಡಾದು?

ಇವೆಲ್ಲ ವಿಚಾರ ಮಾಡುತ್ತ ಲಚ್ಚಿ ನಿಟ್ಟುಸಿರೆಳೆದು ಎದ್ದು ನಿಂತಳು. ಕೋಳಿಯಂತೂ ಮೊದಲೇ ಕಳೆದಿತ್ತು. ಜೊತೆಗೆ ಹತ್ತು ಪೈಸೆಯೂ ಹೋಯಿತಲ್ಲ ಅಂತ ಅವಳ ಮನಸ್ಸಿಗೆ ಕಿರಿಕಿರಿಯಾಯ್ತು.

ಗುಡಿಯಿಂದ ಹೊರಬರುವಾಗ ಪೂಜಾರೆಪ್ಪನ ಕೈ ಅವಳ ಮೈ ಸವರಿತು. ಕೋಳಿಯೇ ಅವಳ ಮನಸ್ಸು ಮೆದುಳುಗಳಲ್ಲಿ ಆಕ್ರಮಿಸಿತ್ತಾದ್ದರಿಂದ ಅವನ ಹೊಲಸು ವರ್ತನೆ ಅವಳ ಗಮನಕ್ಕೆ ಬರಲಿಲ್ಲ. ಅವನು ಅವಳ ಸೆರಗು ಹಿಡಿದು ಎಳೆದಾಗ ಅವಳು ತಟ್ಟನೆ ನಿಂತು ಬಿಟ್ಟಳು. ಅವಳ ಹರೆಯದ ಮೈಯಲ್ಲಿಯ ಬಿಸಿ ರಕ್ತ ಕುದಿಯಿತು.

"ಯಾಕ್ಲೇ ಪೂಜಾರಿ ಹಿಂಗ ಮೈ ಕೈ ಮುಟ್ಟಲಕ್ಹತ್ತೀದಿ? ನಿನಗ ಮಕ್ಕಳಾಗಿದ್ರಂದ್ರನನ್ನೋಟು ಮಮ್ಮಕ್ಕಳಿರ್‍ತಿದ್ರಲ್ಲೋ ಭಾಡಕವು. ಆಸ್ ಫಾಸ್ ಯಾರೂ ಇಲ್ಲ, ಕತ್ತಲಾಗ್ಯದಂತ ನನ್ ಕೈ ಹಿಡ್ಲಿಕ ಬಂದ್ಯಾ ಖಬರಗೇಡಿ. ಏನ್ಲಾ.... ಏಸು ಹೆಣ್ಮಕ್ಕಳ ಮಾನಾ ಕಳ್ದಿಯೋ ಇಲ್ಲಿ ತನಕಾ? ಏಸ ದಿನಗೋಳಲಿಂದ ಈ ದಂಧಾ ಮಾಡ್ಲಿಕ್ಹತ್ತೀದಿ?"

"ಆ.... ಊಂ.... ನಾ ಯೇನ ಮಾಡಿದ್ನೇ? ಲಚ್ಚಿ, ಹಿಂಗ್ಯಾಕ ಜಗಳಕ್ಕ ಬರ್‍ಲಕ್ಹತ್ತೀದಿ?"

"ನಾ ಜಗಳಕ ಬರ್‍ಲಕ್ಹತ್ತಿನ್ಯಾ? ಖರೆ ಹೇಳು. ಸಿಂದಿ ಕುಡ್ದು ನಿಶಾದಾಗ, ಹೇತಕುಂಡಿ ತೊಳ್ಕೋಮಾ ಖಬರಿಲ್ದ ಖಬರಗೇಡಿ ನೀ. ನಾ ಪೂಜಾರಿ ಹೀನಿ. ನನ್ ಮೈ ಮ್ಯಾಲ ದೇವಿ ಬರ್‍ತದ, ನನ್ ನಾಲಿಗಿ ಮ್ಯಾಲ ನಿಂತು ದೇವಿ ನುಡಿತಾಳ.

ಅಂತೆಲ್ಲ ದೊಡ್ಡ ದೊಡ್ಡ ಬಯಲಾಟದಾನ ಮಾತಾಡ್ತಿ. ಮತ್ತ ನೋಡ್ದರ ಹರ್‍ಯಾದ ಹೆಂಗಸರ ಮೈಯಾಗ ಕೈ ಆಡಸ್ತಾ ನನ್ ಹಾಟ್ಯಾ? ಈಗ ನಾ ಹೊಯ್ಕೆಂಡನಂದ್ರ ಹೊಲಗೇರಿ ಮಾದರ ಗೇರ್‍ಯಾನ ಮಂದೆಲ್ಲಾ ಓಡಿ ಬಂದು ನಿನಗೆ ಮುರ್ದು ಮುಟಗಿ ಕಟ್ಟತಾರ, ಮುದುಕಾಗಿ ಮರ್ವಾದಿ ಮಾಡ್ಕೋ ಬ್ಯಾಡ್ಲೋ ಮಾನಗೇಡಿ... ಥೂ...." ಎಂದವಳೇ ಅವಳು ಅವನನ್ನು ನೂಕಿ ಹೊರಬಂದಳು. ಹರೇದ ಹೆಣ್ಣು ನೂಕಿದ ರಭಸಕ್ಕೆ ಕುಡಿದ ಅಮಲಿನಲ್ಲಿದ್ದ ಮುದಿಯ ಪೂಜಾರಿ ಧಡಕ್ಕನೆ ಮುಖ ಮೇಲಾಗಿ ಕೆಳಗುರುಳಿದ. ಅವಳು ಧಡಧಡನೆ ಓಡು ನಡಿಗೆ ಹಾಕುತ್ತ ಹೊರ ನಡೆದಳು.

"ಹೆಂತಾ ಸೆಟಬ್ಯಾನಿ ಬಂದಾದೋ ಈ ಮುದಿ ಮಾರಿ ಪೂಜಾರಿಗಿ. ಹೆಂಗಸರಿಗಿ ಕಂಡತಂದ್ರ ಹಸಿ ಖಂಡಾ ಕಂಡ ನಾಯಿ ಹಂಗ ನಾಲಗಿ ಚಾಚಿ ಜೊಲ್ಲ ಸುರಸ್ತಾದ. ಲಕ್ಕವ್ವ ತಾಯಿ ಇದಕ್ ನಾಲಗಿ ಚ್ಯಾಚಿ ನುಂಗಲ್ಲಾಗ್ಯಾಳ. ಇದರ ಸತ್ಯಾನ್ಯಾಸ ಆಗ್ಲೀ....." ಎಂದು ಬೈಯುತ್ತ ಬಿರಬಿರನೆ ಹೊರಬಿದ್ದು ಲಚ್ಚಿ ದಾರಿಯಲ್ಲಿ ದೊಡ್ಡದೊಂದು ಹುಲ್ಲಿನ ಹೊರೆ ಹೊತ್ತುಕೊಂಡು ಹೊರಬಿದ್ದ ವ್ಯಕ್ತಿಗೆ ಧಡಕ್ಕನೆ ಟಕ್ಕರ್ ಕೊಟ್ಟಳು. ಆ ವ್ಯಕ್ತಿಯ ತಲೆಯ ಮೇಲಿನ ಹುಲ್ಲಿನ ಹೊರೆ ಬಿಚ್ಚಿಕೊಂಡು ನೆಲಕ್ಕೆ ಧೊಪ್ಪನೆ ಬಿದ್ದಿತು. ಆ ವ್ಯಕ್ತಿ ಸಿಡಿದು ನುಡಿಯಿತು.

"ಯಾವಕ್ಕೆತಿ ನಿನ್ನವ್ವನ ಒಯ್ದು. ಕಣ್ಣ ಕಾಣ್ಣಂಗಿಲ್ಲಾಗ್ಯಾದೇನು?" ಆ ಮನುಷ್ಯನ ದನಿ ಕೇಳಿದವಳೇ ಲಚ್ಚಿ ಬಾಯಿಗೆ ಬಂದ ಬೈಗಳನ್ನು ಹಿಂದೆ ತಳ್ಳಿ ತಟ್ಟನೆ ನಿಂತು ಬಿಟ್ಟಳು.

* * * *

"ನಾ ಬಯ್ಲಕತ್ತರ ದೆವ್ವ ನಿಂತ್ಹಂಗ ನಿಂತಿದೆಲ ಯಾರೆ ನೀ?" ಕಾಸಿನಾತ ಅಚ್ಚರಿಯ ದನಿ ಹಾಕಿ ಬಾಗಿ ಹುಲ್ಲಿನ ಹೊರಿ ಎತ್ತ ತೊಡಗಿದ.

"ನಾ ಕವಣಿಗಲ್ಲನಿಂದ ಹೊಡ್ದರನೂ ನೀ ಸುಮ್ಮನ ನಿಂತಿದ್ದಿ. ಈಗ ನೀ ಬಯ್ದರ ನಾ ಸುಮ್ಮಕ ನಿಂದರ ಬಾರ್ದನೋ ಕಾಸಿ?" ಲಚ್ಚಿಯ ದನಿ ಕೇಳಿದ ಕಾಸಿನಾತ ಮೇಲೆತ್ತಿದ ಹೊರೆಯನ್ನು ನೆಲಕ್ಕೆ ಕುಕ್ಕಿದ. ಅವಳ ಹತ್ತಿರ ಸರಿದು ಖುಷಿಯಿಂದ ಕೇಳಿದ.

"ಲಚ್ಚೀ.... ನೀ ಯೇನೇ ಪೋರಿ ಮದಲೇ ಹೇಳ್ಬಾರ್ದಿತ್ತೇನೆ ನನಗ? ನಾ ಎಲ್ಲಿ ಬಯ್ತಿದ್ದ ನಿನಗ?"

"ನೀ ನನ್ ಕಣ್ಣೀಗಿ ಕಂಡ್ರೇ ಅಲ್ಲ. ಆ ಪೂಜಾರಿ ಹಲ್ಕಾ ನನ್ಮಗನಿಗಿ ಬೈಯ್ಕೋತ ಹೊಂಟಿಕ್ಕಿ ಕತ್ತಲಾಂಗ ಕಾಣಲಾರ್ದೆ ನಿನಗ ಟಕ್ಕರ್ ಕೊಟ್ಟೇನಿ. ನೀ ನನ್ ಕಾಸಿ ಅಂತ ನನಗೇನು ಕನಸ ಬೀಳ್ಬೇಕೇನು?"

"ಏನಂದ ಆ ಪೂಜಾರಿ? ಅಂವಗ್ಯಾಕ ಬಯ್ಲಕತ್ತೀದಿ. ಹಿಂಗ ಕತ್ಲಾಗ ಎಲ್ಲಾ ಗಂಡಸ್ರೀಗಿ ಬೈಯ್ಕೋತ, ಡಿಕ್ಕಿ ಹೊಡಕೋತ, ಗಂಡರಾಮಿ ಹಂಗ ಹೊಂಟ್ರ ಮಂದಿ ನಿನಗೇ ಬೈತಾರೇ ನನ್ನರಗಿಣಿ...." ಅವನು ಅವಳನ್ನು ಬಳಸುತ್ತ ನಕ್ಕ.

"ಬೈಲಾರ್ದೆ ಮತ್ತೇನು ಅವನಿಗಿ ಪೂಜಾ ಮಾಡ್ಬೇಕೇನು ಕುಂಡರಸಿ? ಹಲ್ಕಾ ನನ್ ಮಗನಿಗಿ ತಂದು...."

ಅಲ್ಲೇ ಅವನಿಗಿ ಅಂಜಿ ಬಂದು ನನಗ ಡಿಕ್ಕಿ ಹೊಡ್ದೆಲಾ ಏನೇ ಇದು ಲಚ್ಚಿ? ಕತ್ತಲಿ ಅಂಜಿಕಾಳಗಿ ಅಂಜಿ ಮನಿ ಗಂಡಗ ಯಪ್ಪಾ ಅಂದಿದ್ದಳಂತ ಯಾವಕ್ಕೆನೋ.... ನಿನ್ನಂತಕ್ಕಿನೇ ಇರ್ಬೇಕು ನೋಡು."

"ಅಂವಾ ನನ್ ಮೈಕೈ ಮುಟ್ಲಕ ಬಂದ್ರ ಬೈಯಾದರೆ ಬಿಡು. ಮೆಟ್ಟಿನ ಪೂಜೆ ಮಾಡಿ ಬರ್ತಿದ್ದನಾ... ಹಾಂ. ನನ್ ಕೋಳಿ ಕಳ್ದಾದಂತ ತಲಿಕಟ್ಟಿತ್ತು ಸುಮ್ನಿದ್ದೀನಿ...."

"ಏನು! ಆ ನನ್ ಹಲ್ಕಾ ಸೂಳ್ಯಾಮಗಾ ನಿನಗ ಮೈ ಕೈ ಮುಟ್ಟಲಿಕ್ ಬಂದಿದ್ನಾ. ಅವನವ್ವನ ತಾಯಿಗ್ಗಂಡ. ಜರಾ ನಿಂದ್ರು ನೀ.... ನಾ ಈಗೇ ಹೋಗಿ ಅವನ ಹೆಣಾ ಮನಗಿಸಿ ಬರ್ತೀನಿ." ಎಂದವನೇ ಅವಳನ್ನು ಬಿಟ್ಟು ಸಿಟ್ಟಿನಿಂದ ನಡೆದ, ಅವಳು ಅವನ ಕೈ ಹಿಡಿದು ತಡೆದಳು.

"ಬ್ಯಾಡೋ ಕಾಸೀ.... ನೀ ಹೆಜ್ಜೆ ಎತ್ತಿಟ್ರ ನನ್ನಾಣಿ, ಆಗ್ಯಾದ ನೋಡು. ಅದಕ್ಕೊಂದು ಮುದಿ ಅವಚೆರಿ ಹಿಡ್ದಾದಂದ್ರ ನಿನಗನೂ ತಿಳಿಬ್ಯಾಡ್ದೇನು? ನಾ ಈಗ ನೂಕಿದ್ದಕ್ಕೇ ಮಾರುದೂರ ಬಿದ್ದು ನೆಲ ಕಚ್ಯಾದ ಮುದ್ಕ, ಇದೊಂದು ಸಾರಿ ಮಾಫ ಮಾಡಿಬಿಡು. ಬದಕ್ಲೀ...."

"ಲಚ್ಚೀ.... ಲಚ್ಚೀ.... ಅವನವ್ವನ ರಂಡಿ ಮಗನಿಗಿ ಜಿಂವಾ ಇಟ್ಟೇ ಹೂಳಿಬಿಡ್ತೀನಿ. ನನ್ ಹುಡುಗೀ ತಂಟ್ಯಾಕ ಬರ್ತದ ಆ ಮುದಿ ನಾಯಿ. ಅವನ ಗಂಡಸ್ತನಾ ಏಟದಾ ಅಂತ ಒಂದ ಕೈ ನೋಡಿಬಿಡ್ತೀನಿ, ನೀ ಬಿಡು ಜರಾ...."

ಕಾಸಿನಾತ ಹಲ್ಲು ಕಡಿಯುತ್ತ ನುಡಿದ. ಅವಳು ಅವನೆದೆಗೊತ್ತಿ ನಿಂತು ಅವನ ಸಿಟ್ಟಿಳಿಸಿದಳು.

"ಬ್ಯಾಡ್ ಕಾಸಿ ಬ್ಯಾಡ್.... ನೀ ಹಿಂಗ್ ಭಂಡ ಮಾಡದರ ನನ್ ನಿನ್ ಪಿರೀತಿಯೆಲ್ಲಾ ಈಸದಿನಾ ಮಚ್ಚಿಟ್ಟಿದ್ದು ಬಯಲಿಗಿ ಬರ್ತಾದೋ ಕಾಸಿ. ಬ್ಯಾಡ ಬಿಡು ಮಾರಾಯಾ.... ಅವಾ ಮೊದಲೇ ಥಣ್ಣಗಾಗ್ಯಾನ, ಕೆಳಗೆ ಬಿದ್ದವನ ಮ್ಯಾಲ ಕುಸ್ತೀಗಿ ಹೋಗಾದು ಗಂಡಸ್ತನ ಅಲ್ಲ ಬಿಡು."

"ನೀ.... ನೀ..... ಹೇಳ್ತಂತ ಬಿಡ್ಲಕ್ಹತ್ತಿನಿ, ಇಲ್ದರ ಆ ಮಗನಿಗಿ ತಾಯಿ ಗುಡೀ ಮುಂದೇ ನೆತ್ತರ ಕಾರಲಕ್ ಹಚ್ತ್ತೀನಿ"

"ನಾ ಬ್ಯಾಡಂದಿನಲ್ಲ.... ಮುಗಿತು ಬಿಡು" ಅವಳು ಅವನೆದೆಗೆ ಬಿಗಿದುಕೊಂಡಳು. ಅವನ ಸಿಟ್ಟೆಲ್ಲ ಜರ್‍ರನೆ ಇಳಿಯಿತು, ಪ್ರೇಮದ ಅಮಲು ಅಷ್ಟೇ ವೇಗವಾಗಿ ಅವನ ಹರೆಯದ ಮೈಯನ್ನು ಏರಿ ನಿಂತಿತು.

"ಲಚ್ಚೀ.... ಅಕಾಡಿ ಜಮಾದಾರ ಹೊಲದ ಕಡಿ ಹೋಗಾಮಿ ಬಾರೇ...."

"ನಮ್ಮಪ್ಪ ಕುಡ್ಲಿಕ್ ಹೋಗ್ಯಾನೋ ಅಂವಾ ಬರಟೆಗೆ ರೊಟ್ಟಿ ಮಾಡಿ ತತ್ತಿ ಹುರ್ದಿಡ್ಬೇಕು. ಇಲ್ದರ ಬೈಯ್ಲಕ ಸುರುಮಾಡ್ತಾನ."

"ಮಾಂವ ಬರ್ಲಿಕ ಹಿನಾ ತಾಸೊತ್ತು ಟೇಮ ಅದಾ.... ಬಾ.... ಬಂಜರಾ ಅಲ್ಲಿ ಕುತು ಬರಾಮಿ."

"ನಡಿ, ಹೋಗಾಮಿ....." ಎಂದು ಅವಳು ಅವನೊಂದಿಗೆ ಹೊರಟಳು.

"ಜರಾ ನಿಂದ್ರು. ಈ ಹುಲ್ಲಿನ ಹೊರಿ ಬಾಜು ಇಡ್ತೀನಿ. ರಸ್ತಾದಾಗೇ ಬಿತ್ತು ಖೋಡಿ. ಯಾರೆರೆ ಕಾಣಸಲಾರ್ದ ಎಡವಿ ಬಿದ್ದಾರು."

ಎನ್ನುತ್ತ ಅವನು ಹುಲ್ಲಿನ ಹೊರೆಯನ್ನು ದಾರಿಯ ಬದಿಗೆ ಸರಿಸಿಟ್ಟು ಅವಳ ಕೈ ಹಿಡಿದುಕೊಂಡು ಹೊರಟ.

ಇಬ್ಬರೂ ಕೈ ಕೈ ಹಿಡಿದು ಕೊಂಡು ಹೊಲಗಳ ನಡುವೆ ಹೆಜ್ಜೆ ಹಾಕತೊಡಗಿದರು. ಸುತ್ತ ಮುತ್ತ ಮುತ್ತಿನಿಂತ ಸಂಜೆಗತ್ತಲು. ಕೆಳಗೆ ಹೊಲದಲ್ಲಿ ಆಗತಾನೇ ಕುಡಿಯೊಡೆದು ಕಣ್ತೆರೆಯುತ್ತಿರುವ ಹಸುಳೆ ಹುಲ್ಲು. ಮೇಲೆ ಮುಗಿಲಿನ ಮೇಲೆ ಚಾಡಿ ಹೇಳಿಕೊಳ್ಳುತ್ತಿರುವ ಮಿಣುಕು ಚುಕ್ಕೆಗಳು.

ಚುಕ್ಕೆಗಳ ಅಸ್ಪಷ್ಟ ಬೆಳಕಿನಲ್ಲಿ ಪ್ರಣಯಿಗಳದು ತೊದಲು ನಡಿಗೆ. ಬಂದಾರಿಯ ಬದಿಯ ಮರದಡಿಗೆ ಕುಳಿತರು. ಅವಳ ಸೊಂಟ ಬಳಸಿ ಹತ್ತಿರಕ್ಕೆಳೆದು ಕೊಂಡ ಕಾಸಿನಾತ ಅವಳ ಕೆನ್ನೆಗೆ ಕೆನ್ನೆ ತಂದು ಪಿಸುಗುಟ್ಟಿದ.

"ಲಚ್ಚೀ.... ಹಿನಾ ಏಸು ದಿನಾ ಹಿಂಗೇ ದೂರದೂರೇ ಇರಾಮೆ ಭಂಗಾರಾ? ಜಲ್ದಿ ಲಗ್ನ ಆಗಿ ಬಿಡಾಮಿ...."

"ಅದೇನು ನನ್ ಕೈಯಾಗಿನ ಮಾತಾ ಕಾಸಿ. ಅಪ್ಪ ನಮ್ ಮದೀಗೆ ಒಪಗೋಮಂಗಿಲ್ಲ. ನೀ ಯಾಕೆ ಮಾದರ ಕುಲದಾಗ ಹುಟ್ದಿ?"

ಅವಳು ಕಕ್ಕುಲತೆಯಿಂದ ಕೇಳಿದಳು.

"ಹೂಂ.... ಹಾಂಗೆತ ನಮ್ ಹಿಂದೂ ಮಂದ್ಯಾಗ ಸೇರಸೊತಾರೋ ಇಲ್ಲೋ ಗೊತ್ತಿಲ್ಲಲ್ಲ, ಕಿರಿಸ್ತಾಯ್ರ, ತುರುಕರು, ಸೇರಿಸಗೋತಾರಂತ... ಅದೆಲ್ಲ ಬ್ಯಾಡ ಕಾಸಿ.... ನಾವು ಹಿಂಗೇ ಹಿನಾ ತ್ವಾಡೇ ದಿನಾ ಸಮಕ್ಕಿದ್ರಾಯ್ತು ಅನಸ್ತಾದ ನನಗೆರೆ."

"ಸುಮ್ಮಿದ್ರ ಏನಾಗ್ತದೆ ಲಚ್ಚಿ?"

"ಎಲ್ಲಾ ಆಗ್ತದ. ತನ್ನೋಟಕ ತಾನೇ ಆಗ್ತದ."

"ಅದ್ಹ್ಯಾಂಗೇ...."

"ನಮ್ಮಪ್ಪಗನೂ ವಯಾ ಹೊಂಟ್ಹೋಗ್ಯಾದ. ಒಂದಿನಾ ಛಂದಿದ್ದರ ನಾಕ ದಿನಾ ಹಾಸಗಿ ಹಿಡ್ದು ನೆಳ್ಳತಾನ. ನಮ್ಮವ್ವ ಹ್ವಾದಾಗ್ನಿಂದ ಅವನಿಗೆ ಆರಾಮೇ ಇಲ್ಲ."

"ಅಂದ್ರ ನೀ ಅನಾದರೆ ಏನು? ಫಕೀರಪ್ಪ ಮಾಂವ ಸಾಯಾತನಕಾ ನಾವು ಹಿಂಗೇ ಕದ್ದು ಮುಚ್ಚಿ ಭೆಟ್ಟಿಯಾಕ್ಕೋತ ಕಾಯ್ಬೇಕಂತಿಯೇನು?" ಅವಳು ಮೌನವಾದಳು. ಅವನು ಅವಳ ಭುಜ ಹಿಡಿದು ಅಲುಗಿಸಿದ.

"ಹೊಯಿಂದೇನೇ ಲಚ್ಚಿ?"

"ಹೂಂ ಕಾಸಿ, ಅಪ್ಪನ ಮನಸಿಗಿ ತರಾಸ ಮಾಡಿ ನಾ ನಿನ್ ಸಂಗಾಟ ಮದಿ ಮಾಡ್ಕೋಲಕ ತಯಾರಿಲ್ಲ, ನಿನಗ ನಾನೇ ಬೇಕಾದ್ರ ಸುಮ್ಮಿರು. ಇಲ್ದಿದ್ದರ ಬ್ಯಾರೆ ಹೆಣ್ಣಿ ಸಂಗಾಟ ಮದಿಯಾಗು"

ಅವಳು ನೋವಿನ ದನಿ ಎಳೆದಳು. ಅವನು ಮೌನ ಅಪ್ಪಿದ ಸ್ವಲ್ಪ ಹೊತ್ತು ನಾಲ್ಕೂ ತುಟಿಗಳು ಬಿಗಿಗೊಂಡವು. ಗಾಳಿಗೆ ಮರದೆಲೆಗಳ ಸರಪರ ಸದ್ದು ಬಿಟ್ಟರೆ ಮತ್ತೆಲ್ಲ ಸ್ತಬ್ಧತೆ

"ಯೇನು ಯೋಚ್ನೆ ಮಾಡಲಕ್ಹತ್ತಿ ಕಾಸಿ?" ಅವಳು ಕೇಳಿದಳು.

"ನಿನಗ ನೀನೇ ಬೇಕು ಲಚ್ಚಿ. ನಿನ್ ಸಲ್ಯಾಕ ನಾಏಸೋರ್ಸ ಬೇಕಾದರನೂ ಹೀಗೇ ಕಾಯ್ಕೋತಿರ್‍ತಿನೆಂತ. ಏಸ ಜನಮ ಆದರನೂ ಕಾಯ್ಕೋತ ಇರ್‍ತೀನೆಂತ ಭಂಗಾರಾ....."

"ನನ್ ಕಾಸೀ..... ನನಗ್ಗೊತ್ತಿತ್ತು, ನೀ ಹಿಂಗೇ ಅಂತಿ ಅಂತ ನನಗ್ಗೊತ್ತಿತ್ತು, ಕಾಸೀ...." ಅವನು ಬಾಗಿ ಅವಳನ್ನವುಚಿ ಹಿಡಿದು ತುಟಿಗೆ ತುಟಿ ಬೆಸೆದ. ಅವಳು ಬೇಡವೆನ್ನಲಿಲ್ಲ. ಅವನೆದೆಯ ದಟ್ಟಗೂದಲಿಗೆ ತುಟಿಯಿಟ್ಟು, ನಿಶ್ಚಿಂತೆಯ ಉಸಿರೆಳೆದಳು. ಕಾಸಿನಾತನ ಹರವಾದ ಉಕ್ಕಿನಂತಹ ಎದೆಯಲ್ಲಿ ಹುದುಗಿ ಕಣ್ಣು ಮುಚ್ಚಿದಳು.

"ನಿದ್ದಿ ಮಾಡ್ಲಕ್ಹತ್ತಿಯೇನೇ ಪೋರಿ?" ಅವನು ಅವಳ ಕಿವಿಯ ಬಳಿ ತುಟಿ ತಂದು ಮೆತ್ತಗೆ ಕೇಳಿದ. ಅವನ ಬಿಸಿಯುಸಿರಿಗೆ ಅವಳ ದುಂಡುಗೆನ್ನೆಯಲ್ಲಿ ಹಿತವಾದ ಉರಿತ ಕಾಣಿಸಿಕೊಂಡು ಕೆಂಪಾಯಿತು. ಅವನು ಮತ್ತೆ ಆ ಕೆಂಪಿನೆಡೆಗೆ ಬಾಗಿದ. ಅವಳು ಸಿಹಿಯಾಗಿ ನರಳಿ ಸರಿಯಾಗಿ ಕುಳಿತಳು. ಅವನು ನಸುನಕ್ಕ.

"ನಡಿ ಕಾಸಿ, ಮನೀಗಿ ಹೋಗಾಮಿ. ಅಪ್ಪ ಬರತೆಗೆ ನಾ ಗುಡಿಸಲು ಸೇರ್ಬೇಕೂ.... ನನ್ ಕೋಳಿ ಬ್ಯಾರೆ ಕಳದಾದೋ.... ಅದಕ್ಕೇ ಹುಡಕ್ಕೋತ ಹೊಂಟಿದ್ದ ನಾ."

"ಛೆಂದಾಯ್ತು ನಡಿ. ನಿನ್ ಕೋಳಿ ಎಲ್ಲಿ ಕಳೀತೋ ಏನೋ.... ನಾ ಮಾತರ ನಿನ್ನೆದ್ಯಾಗ ಕಳದು ಹೋಗೀನಿ."

"ಬಲೆ ಇಚಿತ್ತರ ಮಾತಾಡ್ತಿ ನೀ ಕಾಸಿ.... ಹಾರ್ರ ಕುಲಕರ್ಣ್ಣೇರ ಮನಿ ಆಳಮಗಾ ನೋಡು ಏಟಾದರನೂ."

"ಯಾಕೆ ಪೋರಿ? ನನ್ ಮಾತನಾಗೇನು ಇಚಿತ್ತರ ಅದಾನೇ?"

"ದೆವ್ವಿನ್ಹಾಂಗ ಎದರ ನಿಂತಿದ್ದಿ ಈಟು ಉದ್ದಕ, ಮತ್ತ ಮ್ಯಾಲ ನನ್ನೆದ್ಯಾಗ ಕಳದೀನಿ ಅಂತಿ..."

ಅವಳು ಆಕ್ಷೇಪಣೆ ಹೊರ ಹಾಕಿದಳು. ಅವನು ಗಹಗಹಿಸಿದ.

"ನಾ ಅಂದ್ರ ನಾ ಅಲ್ಲೇ.... ನನ್ ಮನಸ. ನನ್ ಮನಸ ನಿನ್ನೆದ್ಯಾಗ ಕಳಿತು ಅಂತಂದೀನಿ".

"ಫಿಸ್ಸ.... ನಿನ್ನ ಮಾತ ನಿನಗೇ ತಿಳಿಬೇಕು ನಡಿ. ಈಗ ಜಲ್ದಿ ಮನೀಗಿ ಹೋಗಲಿಲ್ಲಂದ್ರ ನಮ್ಮಪ್ಪ ನನಗೆ ಬೈತಾನ. ಮ್ಯಾಲ ನನ್ ಭಂಗಾರದಂಥಾ ಕೋಳಿ ಕಳೀತು. ಇದೀಟೇ ಈಗ ನನಗ ತಿಳೀತಾವ."

"ಏನು ಕೋಳಿ ಕೋಳಿ ಅಂತ ಬಡಕೋಲಕ್ಕತ್ತೀದೇ... ನಾಳಿಗಿ ಕುಲಕಣ್ಣಿ ತ್ವಾಟದ ಬಲ್ಲಿ ಬಾ.... ನಾಕು ಕೋಳಿ ಕುಡ್ತಿನೆಂತ."

"ನಾಕು? ಎಲ್ಲಿವೋ ಅವು?"

"ನನ್ನುನೇ ಅವಾರೆ. ತ್ವಾಟದ ಚೆಂದವ್ವಾಯಿಗಿ ಸರಿಪಾಲ್ದಹಂಗ ಸಾಕಲಕ ಕೊಟ್ಟೇನಿ."

"ಬೇಸಾಯ್ತು ಬುಡು. ನಾ ಹೋಗ್ತೀನೋ ಕಾಸಿ...." ಅವನು ಮತ್ತೊಮ್ಮೆ ಅವಳನ್ನಪ್ಪಿ ಮುದ್ದಿಸಿ ಬಿಟ್ಟ. ಅವಳು ಹೊಲಗೇರಿಯೆಡೆಗೆ ತಿರುಗಿದಳು. ಅವನು ಹುಲ್ಲಿನ ಹೊರೆ ಎತ್ತಿಕೊಳ್ಳುತ್ತ ಮಾದರ ಕೇರಿಯ ಕಡೆಗೆ ತಿರುಗಿದ.

ಲಚ್ಚಿ ಗುಡಿಸಲ ಅಂಗಳದಲ್ಲಿ ಕಾಲಿಟ್ಟಾಗ ಇನ್ನೂ ಫಕೀರಪ್ಪ ಸೇಂದಿ ಬನದಿಂದ ಮರಳಿ ಬಂದಿರಲಿಲ್ಲ. ಕೋಳಿ ಗೂಡಿನ ಬದಿಯ ಪಪ್ಪಿ ಗಿಡದ ಬಳಿ ಕುಳಿತು ಪುಂಡಿಪಲ್ಲೆ ಸೋಸುತ್ತಿದ್ದ ಕೆಂಚಿ ಮಾತಾಡಿಸಿದಳು.

"ಕೋಳಿ ಸಿಕ್ಕತೇನೇ ಲಚ್ಚಿ?"

"ಇಲ್ಲೇಯವ್ವಾ.... ಯಾ ನನ್ ಭೋಸಡಿ ಒಯ್ದು ಒಲ್ಯಾಗಿಟ್ಟಾಳೋ.... ಅದೆಲ್ಲಿ ಸಿಗಬೇಕೀಗ? ಪೂಜಾರಪ್ಪನ ಬಲ್ಲಿ ಕೇಳ್ಸಿ ನೋಡಾದನೂ ಆಯ್ತು"

"ಏನು ಹೇಳಿದ್ನೇ ಅಂವಾ?"

"ಅವನ ಬಾಯಾಗ ಮಣ್ಣು ಹಾಕ್ಲಿ. ಅಂವಾ ಏನು ಹೇಳ್ತಾನೇ ಕೆಂಚಿ. ಮಾದರಗೇರ್ಯಾನ ಕೆಂಪಸೀರಿ ಉಟ್ಟ ಹೆಂಗ್ಸನ ಕೈ ಸೇರ್ಯಾದಂತ ಹೇಳ್ದ. ಈಗ ರಾತರ್ಯಾಗ ನಾ ನನ್ ಕೋಳೀಗಿ ಬಿಟ್ಟು ಕೆಂಪಸೀರಿ ಉಟ್ಟಕ್ಕಿಗೆಲ್ಲಿ ಹುಡಕಲಿ ಹೇಳು...."

"ಮತ್ತ ಈಟೊತ್ತನಕಾ ಯಕಾಡಿ ಹೋಗಿದ್ದೆ? ಒಂದು ಸೂರಜಾ ತಾಯಿ ಹೊಟ್ಯಾಗ್ ಹೋಗಾ ಮುಂದ ಹ್ವಾದಕ್ಕಿ ಕತ್ತಾಲಾಗಿ ತಾಸಿನಮ್ಯಾಲ ಹೊಂಟೀದಿ..."

"ಎಲ್ಲಾ ಕಡಿ ಅದಕ್ ಹುಡಕಾಡಿ ಬಂದ. ಕೋಳಿ ಮಾತರ ಸಿಗಲಿಲ್ಲ."

ಕೋಳಿಯರೆ ಸಿಗಲಿಲ್ಲಂತಿ. ಮತ್ತ್ಯಾರರೆ ಸಿಕ್ಕಿದ್ರೇ"

"ಯಾರು ಸಿಗ್ತಾರೆ ಕೆಂಚಿ ನನಗ? ಕೋಳಿ ಸಿಗತಾದೇನೋ ಅಂತ ಗುಡಿ ಪೋಳಿ ದಾಟಿ ಅಕಾಡಿ ಜಮಾದಾರ ಹೊಲದ ತನಕಾ ಹೋಗಿದ್ದ. ಕೋಳಿಯರೇ ಸಿಗರೇ ಇಲ್ಲ. ಖಾಲಿ ಕೈಲಿ ವಾಪಸ ಬಂದೀನಿ. ರೊಟ್ಟಿ ಮಾಡಾದದಾನೇ ಯವ್ವಾ ನಂದೂ ಹಿನಾ...." ಎನ್ನುತ್ತ ಲಚ್ಚಿ ಹೊರಟಳು.

"ಒಂಜರಾ ಕೂಡೇ ಲಚ್ಚಿ. ಹೂಂ.... ಈಗ ಹೇಳು. ಖರೆ ಖರೆ ನಿನಗ ಯಾರೂ ಸಿಕ್ಕಿಲ್ಲಾ?"

"ಅದ್ಯಾಕೋ ಹಿಂಗ ಕೇಳಲಕತ್ತಿದೆಲೆ ಕೆಂಚಿ. ಈ ಕತ್ತಲ ಕಾಳನ್ಯಾಗ ಯಾರು ಸಿಗ್ತಾರ?"

"ಕದ್ದು ಮುಚ್ಚಿ ಸಿಗವರೆಲ್ಲಾ ಕತ್ತಲಕಾಳನ್ಯಾಗೇ ಅಲ್ದೆ ಏನು, ಭಳ್ಳನ ಬೆಳಕಿನ್ಯಾಗ ಸಿಗ್ತಾರೇನೆ ಖೋಡಿ...."

"ಅಂದ್ರ.... ನೀ ಅನಾದರೆ ಏನು ಹೇಳು ನೋಡಾಮಿ"

"ಯೇನೂ ಇಲ್ಲೇ.... ಕಾಸಿನಾತಣ್ಣ ಸಿಕ್ಕಿದ್ನೇನು ಅಂತ. ಬಾಯಿ ಮುಚಗೊಂಡು ಹೊಂಟಿದ್ದಿ ನೀನು. ಇದ್ದಿದಿಲ್ಲಂದ್ರ ಕೋಳಿ ಸಿಗಲಾರ್ದಕ್ಕಿ ನೀ ಊರ ಮಂದಿಗಿಲ್ಲಾ ಬೈಕೋತ, ಸರಾಪಸಗೋತ, ಲಟಗಿ ಮುರಕೋತ ಬರಕ್ಕೇ......"

"ನಿನಗೆ ಯಾವಾಗನೂ ಇದೇ ಬಿಡು. ನಿಮ್ಮಣ್ಣನ ಚಿಂತಿನೇ.... ಅಂವಾ ಯಾಕ ಸಿಗ್ತಾನ ನನಗ...."

"ಮತ್ತ್ಯಾರಿಗಿ ಸಿಗ್ತಾನೆ? ನಿನಗೇ ಹುಡಕ್ಕೋತ ಅವನೂ ಹೊಂಟಿದ್ದ, ನಾಹೊರಕಡಿಗಿ ಹೋಗಾಮುಂದ ಹುಲ್ಲಿನ ಹೊರಿ ಹೋತಗೊಂಡು ಹೊಂಟಂವಾ ಕೇಳ್ದ ನನಗ. ಆಕಿನ ಕೋಳಿ ಕಳದದಾ. ಹುಡಕ್ಕೋತ ಹೋಗ್ಯಾಳಂತ ಹೇಳಿದ್ದ. ಮತ್ತ ಅವನೂ ತನ್ನ ಕೋಳಿಗಿ ಹುಡುಕ್ಕೋತ ಬಂದಿರ್ಬೇಕೇನೋ ಅಂತ ತಿಳ್ಕೊಂಡಿದ್ದ ಬಿಡು" ಲಚ್ಚಿ ಮೌನ ನಟಿಸಿ ಪಲ್ಯದ ಕಡ್ಡಿ ಚಿವುಟಿದಳು.

"ಅಂದ್ರ ನಾಯೇನು ಅವನ ಕೋಳಿಯೇನೇ ಕೆಂಚಿ? ನಿಂದ್ರು. ನಿನಗೆ ಮಾಡ್ತೀನಿ. ನೀನನ್ ಗೆಳತ್ಯಾಗಿ ಹಿಂಗಂತಿಯೇನೆ? ಬರ್ಲಿ ದೊಡ್ಡವ್ವ...."

ಅವಳ ಮಾತಿನ್ನೂ ಮುಗಿದಿರಲಿಲ್ಲ. ದೂರದಲ್ಲಿ ಫಕೀರಪ್ಪ ಹೊರಟಿರುವುದು ಕಾಣಿಸಿತು.

"ಯವ್ವಾಗೇ.... ಅಪ್ಪ ಬಂದ್ನೇ.... ನಾ ರೊಟ್ಟಿ ಮಾಡದದಾ ಹಿನಾ...." ಎನ್ನುತ್ತ ಲಚ್ಚಿ ತನ್ನ ಗುಡಿಸಲು ಸೇರಿದಳು.

"ಲಚವ್ವಾ.... ಕೋಳಿ ಸಿಕ್ತೇನೇ ತಂಗೀ... ಏನ್ಮಾಡ್ಲಕ್ಹತ್ತೀದೀ...."

ಎನ್ನುತ್ತ ಫಕೀರಪ್ಪ ಅಂಗಳ ಪ್ರವೇಶಿಸಿದ. ಒಳಗಿನಿಂದಲೇ ಲಚ್ಚಿ ಉತ್ತರಿಸಿದಳು.

"ಸಿಗಲಿಲ್ಲೋ ಯಪ್ಪಾ.... ಯಾ ನನ್ ಸವತಿ ಕೊಯ್ಕೊಂಡು ತಿಂದಾಳೋ ಅಕಿನ ಹೊಟ್ಟಿ ಕಡೀಲಿ...."

"ಹೋಗಲದ್ಯಾಕ ಬಿಡೇ ತಂಗೀ.... ಜಲ್ದಿ ರೊಟ್ಟಿ ಮಾಡು. ಹಸು ಆಗ್ಯಾದ"

"ಹೂ ಹೂಂ.... ಈಗ ಮಾಡ್ತೀನಿ"

ಬಿಸಿಬಿಸಿ ರೊಟ್ಟಿ ಉಳ್ಳಾಗಡ್ಡಿ ಖಾರಾ ಉಂಡವನೇ ಫಕೀರಪ್ಪ ಬಬಲಿ ಗಿಡದ ಬುಡಕ್ಕೆ ಹೋಗಿ ಉಚ್ಚೆ ಹೊಯ್ದು ಬಂದ. ಅಂಗಳದಲ್ಲಿಯ ಹೊರಸಿನ ಮೇಲೆ ಮಲಗಿ ನಿದ್ದೆ ಮಾಡತೊಡಗಿದ. ಅಸಲೀ ಹೆಂಡದ ಅಮಲು, ಹೊಟ್ಟೆ ತುಂಬ ಬಿಸಿ ಊಟದಿಂದ ಅವನಿಗೆ ನಿದ್ದೆ ಬರಲು ತಡವಾಗಲಿಲ್ಲ.

ಗುಡಿಸಲು ಒಳಗಡೆಯ ಹರಕು ಈಚಲು ಚಾಪೆಯ ಮೇಲೆ ಮಲಗಿದ್ದ ಲಚ್ಚಿಯ ಸನಿಹಕ್ಕೆ ನಿದ್ದೆ ಸುಳಿಯಲಿಲ್ಲ. ಕೋಳಿಯ ಚಿಂತೆಯೂ ಈಗ ಅವಳಿಂದ ದೂರ ಸರಿದಿತ್ತು. ತಲೆ, ಮನಸ್ಸನ್ನು ಆಕ್ರಮಿಸಿಕೊಂಡು ಪ್ರಿಯತಮ ನಿಂತಾಗ ಅವಳ ಕಣ್ಣುಗಳಿಗೆ ನಿದ್ದೆ ಎಲ್ಲಿಯದು?

ಕಾಸಿನಾತನ ಮಾತು, ವರ್ತನೆ ಪಿರೀತಿಗಳೆಲ್ಲ ಅವಳ ಕಣ್ಣು ಮುಂದೆ ಸಚಿತ್ರವಾಗಿ ಹಾದು ಬರತೊಡಗಿದವು. ಅವನ ಮಾತುಗಳ, ಸ್ಪರ್ಶದ, ಅಪ್ಪುಗೆಯ ನೆನಪಿನಿಂದಲೇ ಅವಳ ಹರೆಯದ ಮೈ ಬಿಸಿಯಾಗತೊಡಗಿತು. ಚಡಪಿಡಿಕೆ ವೃದ್ಧಿಸಿ ಚಾಪೆಯ ತುಂಬೆಲ್ಲ ಹೊರಳಾಡಿದಳು. ಅಂಥ ಕತ್ತಲೆಯಲ್ಲಿಯೂ ಅವಳ ಮುಖ ಲಜ್ಜೆಯಿಂದ ಕೆಂಪಾದದ್ದು ಅವಳಿಗೆ ಅರಿವಾಗಿರಬೇಕು.

"ಲಚ್ಚೀ..... ಹಾಂ ... ಸತ್ನೇಪೋ...." ಎನ್ನುವ ವಿಕಾರ ಸ್ವರ ಹರಿದು ಬಂದು ಅವಳ ನೆನಪಿನ ಚಿತ್ರಗಳಿಗೆ ಮಸಿ ಬಳಿಯಿತು, ಲಚ್ಚಿ ಧಡಕ್ಕನೆ ಎದ್ದು ಕುಳಿತಳು.

ವಿಕಾರವಾಗಿ ಕೂಗಿಕೊಂಡು ಫಕೀರಪ್ಪ ಹೊರಸಿನಿಂದ ಕೆಳಗುರುಳಿದ್ದ. ಲಚ್ಚಿ ಓಡಿಬಂದಾಗ ಅವನು ನಿಶ್ಚೇಷ್ಟಿತನಾಗಿ ನೆಲಕಚ್ಚಿದ್ದ.

"ಯಪ್ಪೋ.... ನಮ್ಮಪ್ಪಗೇನೋ ಆಗ್ಯಾದ. ಬರ್ರೊ. ಕೆಂಚೀ.... ಬಾರೇ...." ಎಂದು ಕಿರುಚುತ್ತ, ಅಳುತ್ತ ಲಚ್ಚಿ ಅಪ್ಪನ ಬಳಿ ಕುಸಿದಳು.

ಆಜುಬಾಜಿನ ಗುಡಿಸಲ ಜನರೆಲ್ಲ ಎದ್ದು ಬಂದರು. ಫಕೀರಪ್ಪನನ್ನೆತ್ತಿ ಹೊರಸಿನ ಮೇಲೆ ಹಾಕಿದರು. ಯಾರ್‍ಯಾರೋ ಏನೇನೋ ಔಷಧಿ ಅಂತ ಸೊಪ್ಪಿನ ರಸ ಹಿಂಡಿದರು. ಕಾಸಿದರು, ಕಟ್ಟಿದರು, ತಾಸಿನ ನಂತರ ಫಕೀರಪ್ಪನಿಗೆ ಎಚ್ಚರ ಬಂದಿತಾದರೂ ಅವನ ದೇಹದ ಎಡಭಾಗಪೂರ್ತಿ ಸ್ವಾಧೀನ ತಪ್ಪಿ ಹೋಯಿತು.

"ಲಕವಾ ಹೊಡದದೇ ಯವ್ವಾ..."

ಮುದುಕಿ ಮರೆವ್ವ ತಲೆಯಲ್ಲಾಡಿಸುತ್ತ ನುಡಿಯಿತು. ಲಚ್ಚಿ ಗೊಳೋ ಎಂದು ಅಳಲಾರಂಭಿಸಿದಳು. ಫಕೀರಪ್ಪನಿಗೆ ಮಾತಾಡಲು ಆಗಲೇ ಇಲ್ಲ. ಅವನ ಕಣ್ಣುಗಳಿಂದಲೂ ದಳದಳನೇ ನೀರಿನ ಪ್ರವಾಹ ಉಕ್ಕಿ ಹರಿಯಿತು.

"ಫಕೀರಾ... ನೀಗಾಬರ್‍ಯಾಗಿ ಎದಿ ಒಡಕೋ ಬ್ಯಾಡೋ ತಮ್ಮಾ..... ಧೈರ್ಯಾ ಬಿಡಬ್ಯಾಡಾ.... ಆದೊಂದು ಕೂಸದಾ ಅಲ್ಲ, ಲಚ್ಚಿ, ಅದರ ಮಾರಿ ನೋಡು. ನಿನಗೇನೂ ಆಗಂಗಿಲ್ಲ."

ಮುದುಕ ಶ್ರೀನಿಂಗಪ್ಪನ ಸಾಂತ್ವನದ ನುಡಿಗೆ ಫಕೀರಪ್ಪನ ಆಳು ನಿಲ್ಲುವ ಬದಲು ಹೆಚ್ಚಾಯಿತು.

ದಿನಗಳು ಸಾಯತೊಡಗಿದವು. ಮೂರು ತಿಂಗಳಾದರೂ ಫಕೀರಪ್ಪ ಹಾಸಿಗೆ ಬಿಟ್ಟು ಮೇಲೇಳಲಿಲ್ಲ. ಅವನಿನ್ನು ಮೇಲೇಳುವುದಿಲ್ಲ ಅಂತ ಎಲ್ಲರಿಗೂ ತಿಳಿದಿತ್ತಾದರೂ ಲಚ್ಚಿಗೆ ಧೈರ್ಯ ನೀಡುತ್ತಿದ್ದರು.

"ಅಂವಗೇನಾಗ್ತದೇ ಲಚ್ಚಿ ನೀ ಆಳಬ್ಯಾಡ. ಹಿನಾ ನೂರೊರಸ ಬದಕ್ತಾನ ನಿಮ್ಮಪ್ಪ, ಮೈಯಾಗ ತಾಕತ್ ಬರತನಕಾ ಜರಾ ತರಾಸ ಆಗ್ತದ ಆಟೇ." ಮಗ್ಗಲು ಗುಡಿಸಲ್ಲಿನ ನಿಂಗವ್ವಾಯಿಯ ಮಾತು.

"ಏನಾಗ್ತದೇನೋ ಆಯೀ.... ಮೂರು ತಿಂಗಳಾಯ್ತು. ಹೊರಸಬಿಟ್ಟು ಕೆಳಗಿಳದಿಲ್ಲ. ಹೇಲ, ಉಚ್ಚಿ ಎಲ್ಲಾ ಮನಕೊಂಡಲ್ಲೇ. ಅದೆಲ್ಲಾ ನಾ ಮಾಡ್ತಿನಿ

ಆಯಿ, ಅದರ ಅಪ್ಪಗ ಜಲ್ದಿ ಆರಾಮಾದರ ಸಾಕಾಗ್ಯಾದ." ಲಚ್ಚಿ ಕಣ್ಣೊರೆಸಿಕೊಳ್ಳುತ್ತ ನುಡಿದಳು.

"ಆಗ್ತದಗ ಪೋರಿ, ಆಗ್ತದ. ನೀ ಈಟು ಅತ್ತೂ ಅತ್ತೂ ಕಣ್ಣ ಕೆಡಸಗೋಬ್ಯಾಡ. ಈಗ ನೀನೇ ಅವನಿಗಿ ಮಗಾ, ಮಗಳು ಎಲ್ಲಾ ನೋಡು."

ಯಾರು ಏನೇ ಹೇಳಿದರೂ ಲಚ್ಚಿಗೆ ಸಮಾಧಾನವಿಲ್ಲ. ಹೊರಗೆಲ್ಲ ಅವಳು ದುಃಖ ತೋರಗೊಡದಿದ್ದರೂ ಒಳಗೊಳಗೇ ಅವಳಿಗೆ ಒಂದು ಮಾತು ಅರಿವಿಗೆ ಬಂದಿತ್ತು. ಅಪ್ಪ ಈಗ ಮತ್ತ ಮ್ಯಾಲೇಳಾಂಗಿಲ್ಲ. ಹುಳಾ ಹತ್ತಿದ ಕಟಗಿ ಅಂವಾ ಈಗ. ಅದು ಕೊರ್ದು ಕೊರ್ದು ಒಂದಿನಾ ಅಪ್ಪಗ ಖಲಾಸ್ ಮಾಡ್ತದ ಅಂತ.

ಹೊಲಕ್ಕೆ ಕೂಲಿ ಕೆಲಸ ಮಾಡಲು ಹೋದಾಗ, ಯಾರ ಮನೆಯಲ್ಲಾದರೂ ಬೀಸಲು, ಕುಟ್ಟಲು ಹೋದಾಗ - ಯಾವಾಗಲೂ ಅವಳ ತಲೆಯಲ್ಲಿ ಇದೇ ವಿಚಾರ ಸುತ್ತುತ್ತಿತ್ತು.

ಕಾಸಿನಾತ ಬರುತ್ತಿದ್ದ, ಫಕೀರಪ್ಪನ ಹತ್ತಿರ ಕುಳಿತು ಕೊಳ್ಳುತ್ತಿದ್ದ. ಅವನಿಗೆ ಉಚ್ಚೆ ಬಂದರೆ ಕಬ್ಬಿಣದ ಬುಟ್ಟಿ ಹಿಡಿದು ಹೊರಗೊಯ್ದು ಚೆಲ್ಲಿ ಬರುತ್ತಿದ್ದ.

ಆಗೆಲ್ಲ ಫಕೀರಪ್ಪನದು ಕಾಸಿನಾತನೆಡೆಗೆ ದೈನ್ಯದ ನೋಟ. ಮಾತಾಡಲು ಬಾರದವನು ಸನ್ನೆಯ ಮೂಲಕ ಕೃತಜ್ಞತೆ ಸೂಚಿಸುತ್ತಿದ್ದ, ಅಳುತ್ತಿದ್ದ.

ಎಲ್ಲರೂ ಹೇಳಿದ ಔಷಧಿ ಮಾಡಿದ್ದಾಯಿತು. ಕಾಸಿನಾತ ಅಡವಿ ಪಾರಿವಾಳಗಳನ್ನು ಬಲೆಹಾಕಿ ಹಿಡಿದು ತಂದು ಫಕೀರಪ್ಪನ ಸ್ವಾಧೀನ ತಪ್ಪಿದ ಭಾಗಗಳ ಮೇಲೆ ಅವುಗಳನ್ನು ಕೊಯ್ದು ರಕ್ತ ಲೇಪಿಸುತ್ತಿದ್ದ.

ಕಲಬುರ್ಗಿಯ ಸರಕಾರಿ ದವಾಖಾನೆಗೆ ಒಯ್ದು ಸೇರಿಸಲು ಒಬ್ಬಿಬ್ಬರೂ ಸಲಹೆ ನೀಡಿದರು. ಆದರೆ ಅದಕ್ಕೆ ಮುದುಕ ಒಪ್ಪಲೇ ಇಲ್ಲ. ಲಚ್ಚಿಗೂ ಅದೂ ಇಷ್ಟವಿರಲಿಲ್ಲ. ಒಯ್ಯುವಾಗಲೇ ಹಾದಿಯಲ್ಲಿ ಎಲ್ಲಾದ್ರೂ ತಂದೆಯ ಜೀಂವ ಹೋಗಿ ಅವನು ಹಾದಿ ಹೆಣವಾದರೇನು ಗತಿ ಎಂದವಳ ಯೋಚನೆ.

ಆರು ತಿಂಗಳಾಯಿತು. ಫಕೀರಪ್ಪ ಮತ್ತಷ್ಟು ನಿತ್ರಾಣನಾದ. ಒಂದು ಬೆಳಿಗ್ಗೆ ಲಚ್ಚಿ ಚಾ ಕಾಸಿಕೊಂಡು ಗಿಲಾಸಿನ ಲೋಟದಲ್ಲಿ ಹಾಕಿಕೊಂಡು ಅಪ್ಪನ ಬಳಿಬಂದಾಗ ಫಕೀರಪ್ಪನು ಕಣ್ಣು ಮುಚ್ಚಿ ಮಲಗಿದ್ದ.

"ಯಪ್ಪಾ.... ಯೆಳೋ.... ಚಾ ತಂದೀನಿ."

ಅವಳು ಮೆತ್ತಗೆ ಅವನನ್ನು ಹಿಡಿದು ಅಲ್ಲಾಡಿಸಿದಳು, ಅವನು ಕಣ್ತೆರೆಯಲಿಲ್ಲ. ಹಣೆಯ ಮೇಲೆ ಕೈಯಿಟ್ಟಳು. ಮಂಜಿನ ಗಡ್ಡೆಯಾಗಿತ್ತು. ಎವೆಯಿಕ್ಕದೆ ದಿಟ್ಟಿಸಿ ನೋಡಿದಳೊಂದು ಕ್ಷಣ. ಫಕೀರಪ್ಪನ ಎದೆಬಡಿತ ಯಾವಾಗಲೋ ನಿಂತು ಹೋಗಿತ್ತು. ಮರುಕ್ಷಣ ಲಚ್ಚಿ ಚಾದ ಲೋಟ ಬಿಸಾಡಿ ಅಪ್ಪನ ಮೇಲುರುಳಿ ಗುಡಿಸಲು ಹಾರಿಹೋಗುವಂತೆ ಬೊಬ್ಬೆ ಹಾಕಿದಳು. ಹೊಲಗೇರಿಯ ಜನರೆಲ್ಲ ಓಡಿ ಬಂದರು. ಲಚ್ಚಿಯನ್ನು ಎಳೆದು ಹೆಣದಿಂದ ಬೇರ್ಪಡಿಸಿದರು.

ಹೆಣವನ್ನು ಎತ್ತಿ ಕೆಳಗೆ ನೆಲದ ಮೇಲಿನ ಹರಕು ಚಾಪೆಯ ಮೇಲೆ ಹಾಕಿದರು. ಅದರ ಸೆಟೆದ ಕೈಕಾಲು ಮುರಿದು ಮೇಲೊಂದು ಕೌದಿ ಹೊದೆಸಿದರು.

ಲಚ್ಚಿ ಈಗ ಸಂಪೂರ್ಣ ಅನಾಥೆಯಾದಳು. ಅವಳ ಬದುಕಿಗೆ ಜೋಡಿಸಿದ್ದ ಕೊಂಡಿಗಳೆರಡೂ ಒಂದೊಂದಾಗಿ ಕಳಚಿಕೊಂಡವು. ಮೊದಲು ತಾಯಿ, ನಂತರ ತಂದೆ, ಅವಳಿಗೆ ಹೊಟ್ಟೆಗೇನು ಎನ್ನುವ ಯೋಚನೆ ಕಾಡಲಿಲ್ಲ. ಮೊದಲಿನಿಂದಲೂ ಆ ಮನೆ ನಿಂತದ್ದೇ ಅವಳ ರಟ್ಟೆಗಳ ಮೇಲೆ. ಅವಳು ಕೂಲಿನಾಲಿ ಮಾಡಿ ಕಾಳು, ಹಣ ತರುತ್ತಿದ್ದಳು; ತಿನ್ನುತ್ತಿದ್ದರು. ಆದರೂ ಈಗ ಎಲ್ಲ ಖಾಲಿ ಖಾಲಿ ಎನಿಸತೊಡಗಿತು. ತನಗ್ಯಾರೂ ಇಲ್ಲ. ತಾನು ತಬ್ಬಲಿ, ಒಬ್ಬಂಟಿ. ತಬ್ಬಲಿ ಎಂಬ ನೆನಪು ಬಂದಾಗಲೆಲ್ಲ ಅವಳು ಲಕ್ಕವ್ವನ ಗುಡಿಯ ಹಿಂದಿನ ಬೇವಿನ ಮರದಡಿಯಲ್ಲಿ ಕುಳಿತು ಕಣ್ಣೀರಿಡುತ್ತಿದ್ದಳು. ತಾನು ತಾಸುಗಟ್ಟಲೆ ಅತ್ತು ಕಣ್ಣು ಕೆಂಪು ಮಾಡಿಕೊಂಡು ಮನೆಗೆ ಮರಳುತ್ತಿದ್ದಳು.

ಅವಳನ್ನು ಸಂತೈಸುವಲ್ಲಿ, ಸಮಾಧಾನ ಪಡಿಸುವಲ್ಲಿ ಗೆಳತಿ ಕೆಂಚಿ, ಪ್ರಿಯಕರ ಕಾಸಿನಾತ ಬಹಳಷ್ಟು ಪ್ರಯತ್ನಿಸುತ್ತಿದ್ದರು. ಅವರು ಹತ್ತಿರವಿದ್ದಾಗ ಹೇಗೋ ಇರುತ್ತಿದ್ದವಳು ಅವರು ಹೋದ ನಂತರ ಗುಡಿಸಲ ಮೂಲೆಯಲ್ಲಿ ಹಾಗೆಯೇ ಬರಿನೆಲದ ಮೇಲೆ ಉರುಳುತ್ತಿದ್ದಳು. ಕಣ್ಣೀರು ಹನಿಹನಿಯಾಗಿ ಉದುರುತ್ತ ಕೆನ್ನೆಡಿಯ ನೆಲ ನೆನೆಯುತ್ತಿತ್ತು. ನೆಲ ನಿರ್ದಯಿ. ನೀರು ಸಿಕ್ಕರೆ ಸಾಕು, ತನ್ನೊಳಗೆ ಹೀರಿಕೊಳ್ಳುವ ತವಕ ಅದಕ್ಕೆ. ಮಳೆ ನೀರಾದರೇನು? ಕಣ್ಣೀರಾದರೇನು?

ನಿಟ್ಟುಸಿರುಗಳೊಂದಿಗೆ ಲಚ್ಚಿಗೆ ಗಾಢವಾಗಿ ನಂಟು ಬೆಳೆಯತೊಡಗಿತು.

ಕಾಸಿನಾತ ಅವಳನ್ನು ಎದೆಗೊತ್ತಿಕೊಂಡು ಸಂತೈಸುತ್ತ ತಾನೂ ಕಣ್ಣೀರುದುರಿಸುತ್ತಾನೆ.

"ಲಚ್ಚೀ... ನೀ ಹಿಂಗ್ ಅಳಕೋತ ಕುಂತರ ಹ್ಯಾಂಗೇ ನನ್ನರಗಿಣೀ..... ನನ್ನಾಣೆ ಆಗ್ಯಾದ. ನೀ ಅಳಬ್ಯಾಡೇ...." ಎನ್ನುತ್ತ ಅವಳ ಕಣ್ಣಿಗೆ ತುಟಿಯೊತ್ತಿ ಕಂಬನಿಯನ್ನು ಕುಡಿಯುತ್ತಿದ್ದ. ಆದರೇನು? ಅವಳ ಕಣ್ಣುಗಳಲ್ಲಿಯ ಕಂಬನಿಯ ಒರತೆ ಬತ್ತುತ್ತಿರಲಿಲ್ಲ.

"ನಾ ಅಳಬೇಕಂತ ಅಳಾಂಗಿಲ್ಲ ಕಾಸೀ.... ನಾ ಅತ್ತರ ನಿನಗ ಬಕ್ಕಳ ತರಾಸ ಆಗ್ತದಂತನೂ ನನಗ ಗೊತ್ತದಾ.... ಆದರೇನು ಮಾಡ್ಲೋ.... ಅಳು ತಡೆಂಗಿಲ್ಲಾ....."

ಅವನೆದೆಗೆ ಮುಖವಿಟ್ಟು ಬಿಕ್ಕಳಿಸುತ್ತಿದ್ದಳು. ಅವನೆದೆ ನೆನೆಯುತ್ತಿತ್ತು. ಅವನು ಅವಳ ತಲೆಗೆ ಕೆನ್ನೆಯಿಟ್ಟು ದೀರ್ಘ ಉಸಿರೆಳೆಯುತ್ತಿದ್ದ.

ಯಳ್ಳಾವಮಾಸಿಯ ಮುಂದೆ ಇಬ್ಬರೂ ಮದುವೆಯಾಗುವುದಾಗಿ ತೀರ್ಮಾನಿಸಿದರು. ಲಚ್ಚಿಗೆ ಸ್ವಲ್ಪ ಸಮಾಧಾನವಾಯಿತು. ಕಾಸಿನಾತ ಗೆಲುವಾದ.

ಬೇಸಿಗೆ ಮುಗಿಯಿತು. ಮೃಗ ಪ್ರವೇಶವೂ ಆಯಿತು. ಆದರೆ ಬಾನಿನಲ್ಲಿಯ ಸೂರ್ಯನ ಉರಿತ ಕಡಿಮೆಯಾಗಲಿಲ್ಲ. ಆಕಾಶದೆದೆಯ ಮೇಲೆ ಕಪ್ಪು ಮೋಡಗಳು ಕೈಯಾಡಿಸುತ್ತ ಸರಿದು ಬರಲಿಲ್ಲ. ಆಕಾರರಹಿತ ಬಿಳುಪು ಮೋಡಗಳು ಆಗಸದ ಮೈಗೆ ತೊನ್ನು ಹಿಡಿಸಿದುವು. ಸೂರ್ಯನು ಬೆದೆಹತ್ತಿದ ಗೂಳಿಯಂತೆ ಬಿಸಿ ಹರಿಸುತ್ತ ಆಕಾಶದುದ್ದಕ್ಕೂ ಓಟ ಕಿತ್ತ.

ಗುಲಬರ್ಗಾ ಜಿಲ್ಲೆಗೆ ಒಂದು ವರ್ಷ ಸುಕಾಲವಾದರೆ ನಾಲ್ಕು ವರ್ಷ ಬರಗಾಲ. ಈ ಸಲವೂ ಬರಗಾಲದ ಸೂಚನೆ ಕಂಡು ಒಕ್ಕಲಿಗರು ತತ್ತರಿಸಿದರು.

ಬರಗಾಲ ಬಂದೇ ಬಿಟ್ಟಿತು.

"ದಸರಿ ಅಮಾಸಿಗಿ ಬಸವನ ಹೆಗಲಿಗಿ ನೇಗಿಲ ಹೂಡಿ ದೀವಳಿಗಿಗಿ ಬಸವನ ಬಾಯಿಗಿ ಚಿಕ್ಕಾ ಬಿಡಸ್ತಿನ್ರೋ.... ತಳ ಕಾಣಿಸಲಾರ್ದಂಗ ಕೆರ್ಯಾಗ ಕುಂಡಿ ಮ್ಯಾಲ ಮಾಡಿ ಬಿದ್ದ ಒಕ್ಕಲಗ್ಯಾ ನೀರು ಕುಡ್ದು ಸಾಯಮುಂದ ಕಡೀ ಸರ್ತಿ ಮ್ಯಾಲ ತೇಲದಾಗ ಜುಟ್ಟಾ ಹಿಡ್ದು ಮ್ಯಾಲಕ್ಎತ್ತತ್ತಿನ್ರೋ...." ಎಂದು ಕಲ್ಲೂರ ಹಮುಕಸಿದ್ದನ ಹೇಳಿಕೆ ಸುಳ್ಳಾಯಿತು. ಈ ವಿಭಾಗದಲ್ಲಿ ಕಲ್ಲೂರ ಹಳ್ಳಿಯ ಕುರುಬ ದೇವರಾದ 'ಹಮುಕಸಿದ್ದ'ನ ಹೇಳಿಕೆ ಪ್ರಸಿದ್ಧ. ಒಕ್ಕಲಿಗರಂತೂ ಈ ದೇವರ ಹೇಳಿಕೆಯ ಮೇಲೆಯೇ ತಮ್ಮ ಮಳೆ ಬೆಳೆಯನ್ನು ನಂಬಿ ನಿಶ್ಚಿಂತರಾಗುತ್ತಾರೆ.

ಆದರೆ ಈ ಸಲ ಯಾಕೋ ಹಮುಕಸಿದ್ದನ ಹೇಳಿಕೆಯೂ ಸುಳ್ಳಾಗುವ ಸೂಚನೆ ಕಂಡು ಬರತೊಡಗಿದಾಗ ಒಕ್ಕಲಿಗರು ಬಾಯಿ ಬೆಳ್ಳಗೆ ಮಾಡಿಕೊಂಡು.

"ಅಲಲಲಾ.... ಈ ಸಾರಿ ಹಮುಕಸಿದ್ದ ಕೈ ಕೊಟ್ನಲಾ" ಎಂದು ಪರಿತಪಿಸತೊಡಗಿದರು.

ದಸರೆ ದೀಪಾವಳಿಯ ಅಮಾವಾಸ್ಯೆಗಳು ಕಳೆದರೂ ಒಂದು ಹನಿ ಮಳೆ ಕಾಣದೆ ಜೋಳದ ಬಿತ್ತನೆಗಳು ನಿಂತುಬಿಟ್ಟವು. ಮುಂಗಾರಿಯ ಬಿತ್ತನೆಯೂ ಆಗಿರಲಿಲ್ಲ.

ಕುಡಿಯಲು ನೀರಿಲ್ಲ, ದುಡಿಯಲು ಕೆಲಸವಿಲ್ಲ. ಹೊಟ್ಟೆ ಬೆನ್ನಿ ಗಂಟಿಸಿಕೊಂಡು ಜನ ಕ್ಷಣಕ್ಕೊಮ್ಮೆ ಆಗಸ ದಿಟ್ಟಿಸಿದರು. ಅದು ನಿರಂತರವಾಗಿ ಬೇಯುವ ಬೆಂಕಿ ಕೊಂಡ. ಬೆಂಕಿಯುಗುಳುವ ಸೂರ್ಯನ ಸುತ್ತ ನಾಲ್ಕು ಮಾರು ದೂರದಲ್ಲಿ ಕ್ಷಯರೋಗ ಪೀಡಿತ ಬಿಳಿಚಿಕೊಂಡ ಬಿಳಿ ಮೋಡಗಳು ಸಂಜೆಗೂ ಅಷ್ಟೇ. ಆಗಸವನ್ನು ತಬ್ಬಿ ನಿಂತ ತೊನ್ನು ಮೈಯ ಬಂಜೆ ಮೋಡಗಳು. ಕತ್ತಲೆಯಾದರೆ ಸಾಕು. ಗಂಡಸುತನ ಕಳದುಕೊಂಡು ಕರ್ರಗೆ ಜೋತು ಬಿದ್ದ ಚಡಪಡಿಸುವ ನೀಲಿ ಬಾನು.

ಹೊಟ್ಟೆಯಾಗಿ ಜನ ದೇವರ ಮೂರ್ತಿಗಳನ್ನೂ ತಂದು ಬಾಜಾರಿನಲ್ಲಿ ಹರಾಜಿಗೆ ಹಿಡಿದರು. ಅನ್ನದೇವರ ಮುಂದೆ ಅನ್ಯ ದೇವರಿನ್ನೆಲ್ಲಿಯದು? ಎಳೆ ಹರಯದ ಹೆಣ್ಣುಗಳ ಶೀಲ ಕಳಚಿ ಕಲಬುರ್ಗಿಯ ಮಾರ್ಕೆಟ್‌ನ ಬೀದಿ ಬೀದಿಗಳಲ್ಲಿ ಬೆತ್ತಲಾಗತೊಡಗಿತು. ಏರು ಜವ್ವನೆಯರಾದ ಹಳ್ಳಿಯ ಮುಗ್ಧ ಹೆಣ್ಣುಗಳು ಬರೀ ಒಂದು ಹೊತ್ತಿನ ಅನ್ನಕ್ಕಾಗಿ ನಗರದ ಸಿರಿವಂತ ಕಾಮುಕ ರಣಹದ್ದುಗಳ ಕೈದಿಗಳಾದರು. ಕಚ್ಚೆ ಹರುಕರ ಕಾಲ ಕೆಳಗೆ ತಮ್ಮ ಸೆರಗು ಹಾಸಿದರು.

ನೀರು ಕಾಣದ ನೆಲ ಬರಡಾಯಿತು. ಬಲವಂತದ ಬಂಜೆತನ ಸಹಿಸದೆ ಬಿರುಕು ಬಿಟ್ಟು ಅದರ ಗರ್ಭ ಹನಿ ನೀರಿಗಾಗಿ ಕಾತರಿಸಿ ಕಾತರಿಸಿ ಹೊಗೆಯುಗುಳಿತು.

ತಲೆ ಕೆದರಿಕೊಂಡ ಮೋಡಗಳು ಬಾನಿನುದ್ದಕ್ಕೂ ಮೈ ಕೈ ಪರಚಿಕೊಳ್ಳುತ್ತ ತೆವಳುತ್ತ ಸಾಗಿದುವು. ಉಹೂಂ ಒಂದೇ ಒಂದು ಮೋಡವೂ ಬಸಿರಾಗಲಿಲ್ಲ. ಎಲ್ಲವೂ ಗರ್ಭಕ್ಕೆ ಕತ್ತರಿ ಹಾಕಿಸಿಕೊಂಡು ಫ್ಯಾಮಿಲಿ ಪ್ಲಾನಿಂಗ್‌ಕ್ಕೊಳಪಟ್ಟು ಅವರು ಕೊಡುವ ಅರವತ್ತು ರೂಪಾಯಿಗಳಿಗಾಗಿ ಕಾದು ನಿಂತ ಗೊಡ್ಡು ಮೋಡಗಳು.

ಭೀಮಳ್ಳಿಯ ಬಹಳ ಜನ ಸಂಸಾರ ಸಮೇತ ಗುಳೇ ಹೊರಟು ಬೊಂಬಾಯಿ, ಬಳ್ಳಾರಿ, ಹೈದ್ರಾಬಾದಗಳತ್ತ ಹೊಟ್ಟೆ ಹೊರೆದುಕೊಳ್ಳಲು ಹೊರಟರು. ಕೆಂಚಿಯ ಪರಿವಾರವೂ ಹೊರಟಿತು. ಹೊಲಗೇರಿಯಲ್ಲಿಯ ಸರೀ ಅರ್ಧ ಗುಡಿಸಲುಗಳು ಖಾಲಿಯಾದುವು. ಮಾದಿಗರ ಕೇರಿಯೂ ಮುಕ್ಕಾಲು ಪಾಲು ಖಾಲಿಯಾಯಿತು.

ಕೆಂಚಿಯ ತಾಯಿ ತಂದೆಯವರು ಹಳ್ಳಿ ಬಿಡುವಾಗ ಲಚ್ಚಿಯನ್ನೂ ಕರೆದರು.

"ನಮ್ ಸಂಗಾಟ ಬಾರೇ ಲಚ್ಚೀ.... ನೀ ಒಬ್ಬಕ್ಕಿನೇ ಹರ‍್ಯಾದ ಪೋರಿ ಇಲ್ಲೇನು ಮಾಡ್ತಿ?"

"ಒಲ್ಲೆ ಕಾಕಾ.... ಸಿಕ್ಕರ ತಿಂತೀನಿ. ಸಿಗಲಿಲ್ಲಂದರ ನಮ್ಮವ್ವಾ ಅಪ್ಪನ ಬಲ್ಲಿ ಮ್ಯಾಲ ಹೋಗ್ತೀನಿ. ಈ ಹಳ್ಳಿ ಬಿಟ್ಟು ಬರಾಕಿಲ್ಲ."

ನಿರ್ಧಾರದ ನುಡಿ ಅವಳದು. ಕೆಂಚಿಗೆ ಅವಳದೆಲ್ಲ ತಿಳಿದಿತ್ತು. ಕಾಸಿನಾತನನ್ನು ಬಿಟ್ಟು ಲಚ್ಚಿ ಬರುವುದಾದರೂ ಹೇಗೆ? ಅವಳು ಲಚ್ಚಿಯನ್ನು ಬಲವಂತಪಡಿಸಲಿಲ್ಲ.

ಹೋಗುವ ದಿನ ಗೆಳತಿಯರಿಬ್ಬರೂ ಅತ್ತು ಅಪ್ಪಿಕೊಂಡು ಬೇರ್ಪಟ್ಟರು.

ಕಾಸಿನಾತ ಲಚ್ಚಿಯ ಬಳಿ ಬರುತ್ತಿದ್ದ, ಕುಲಕರ್ಣಿಯವರ ಮನೆಯಲ್ಲಿ ಅವರು ಕೊಟ್ಟ ಒಂದೇ ರೊಟ್ಟಿಯನ್ನು ಇಬ್ಬರೂ ಅರ್ಧ ಅರ್ಧ ತಿನ್ನುತ್ತಿದ್ದರು.

"ನೀ ದುಡ್ಯಾ ಗಂಡಸಮಗಾ ಕಾಸಿ. ಅದ್ದಾರೊಟ್ಟಿ ನಿನ್ ಹೊಟ್ಟಿಗಿ ಎಲ್ಲಿ ಹತ್ತಬೇಕು? ಕುಲಕಣ್ಣಿ ಬಲ್ಲಿಂದ ನೋಕರಿ ಬಿಡು. ಪಟ್ಟಣ ಬಲ್ಲಿ ಸರಕಾರದೋರು ಸಡಕ ಹಾಕಸಲಕತ್ತಾರಂತ. ಅಲ್ಲಿಗಿ ನಾವಿಬ್ರೂ ದಗದಕ್ಕ ಹೋಗಾಮಿ. ಇಬ್ಬರದೂ ಹೊಟ್ಟಿ ತುಂಬತದ."

ಒಂದು ದಿನ ಲಚ್ಚಿ ಸಲಹೆ ನೀಡಿದಳು. ಮಾರನೇಯ ದಿನವೇ ಕಾಸಿನಾತ ಕುಲಕರ್ಣಿಯವರ ಮುಂದೆ ನಿಂತು ಕೈ ಜೋಡಿಸಿ ತನ್ನ ಮನದಾಸೆಯನ್ನು ತೋಡಿಕೊಂಡ.

"ಮಾಲಕರೇ, ಮಳಿ ಬರಾತನಕಾ ನಾ ನಿಂಬಲ್ಲಿ ಕೆಲಸಕ್ಕ ಬರಂಗಿಲ್ರಿ ಯಪ್ಪಾ. ಸಡಕ ಹಾಕಲಕ್ ಹೋಗ್ತಿನ್ರಿಯಪ್ಪಾ...."

ಇವನ ಮಾತು ಕಿವಿಗೆ ಬಿದ್ದದ್ದೇ ತಡ; ಕುಲಕರ್ಣಿಯ ಕಣ್ಣುಗಳು ಕೆಂಡ ಕಾರಿದುವು.

"ಏನ್ಲೇ ಹಾದರಕ್ಹುಟ್ಟಿದ್ ನನ್ಮಗನೇ... ನಿನ್ ಸಾಲಾ ಹಿನಾ ಮುಟ್ಟಿಲ್ಲ. ಚಾಕರಿ ಬಿಟ್ಟು ಹೋಗ್ತ್ಯಾ? ನೀ ಎಲ್ಲಿ ಹ್ವಾದರನೂ ಹುಡಕಸಿ ತರ್ಸಿ ನಿನ್ ಕುಂಡ್ಯಾನ ಎಲು ಮರ್ದು ಮುಟಗಿ ಮಾಡ್ತೀನಿ! ತಿಳಿತೇನು! ಸುಮ್ಕ ನಂಬಲ್ಲಿ ಚಾಕರಿ ಮಾಡು ಹು!"

ಕಾಸಿನಾತನಿಂದ ಮುಂದೆ ಮಾತು ಹೊರಡಲಿಲ್ಲ. ಅವನು ತಲೆತಗ್ಗಿಸಿ ಹೊರಟು ಬಂದ.

ಲಚ್ಚಿ ಒಬ್ಬಳೇ ಕೂಲಿಗೆ ನಡೆದಳು. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಕೂಲಿ ಮಾಡಿದರೆ ಒಂದು ರೂಪಾಯಿ ಸಿಗುತ್ತಿತ್ತು.

ಒಂದು ದಿನ ಅವಳು ಕೂಲಿ ಮಾಡಿ ತಿರುಗಿ ಬರುತ್ತಿದ್ದಳು. ದಾರಿಯ ಮೇಲೆಯೇ ಕುಲಕರ್ಣಿಯ ತೋಟದಲ್ಲಿ ಕಾಸಿನಾತ ಕೆಲಸ ಮಾಡುತ್ತಿದ್ದ.

ಎಲ್ಲೆಡೆಗೂ ನೀರು ಬತ್ತಿ ಬರಗಾಲ ಬಿದ್ದಿದ್ದರೂ ಕುಲಕರ್ಣಿಯ ತೋಟದ ಬಾವಿಯಲ್ಲಿ ಮಾತ್ರ ಅದೆಂಥ ಕಂತ್ರಿ ಝರಿಯಿತ್ತೋ, ನೀರು ಬತ್ತುವುದಿರಲಿ, ಸ್ವಲ್ಪವೂ ಕಡಿಮೆಯಾಗಿರಲಿಲ್ಲ, ಅದೇ ನೀರಿನಿಂದ ಕುಂಬಳ, ಸವತೆ, ಗಜ್ಜರಿ ಗೆಣಸುಗಳನ್ನು ಬೆಳಸಿದ್ದ, ಅದರ ಕಾವಲಿಗೆ ಕಾಸಿನಾತ ನಿಂತಿದ್ದ.

ಕೂಲಿ ಕೆಲಸದಿಂದ ಬರುತ್ತಿದ್ದ ಲಚ್ಚಿ ನೀರಡಿಕೆ ತಾಳದೆ ಕುಲಕರ್ಣಿಯ ತೋಟ ಹೊಕ್ಕಳು. ಯಾರೂ ಇರಲಿಲ್ಲ. ಕಾಸಿನಾತ ಎದ್ದು ನಿಂತು ಕರೆದ.

"ಲಚ್ಚೀ.... ಯಾಕ ಈಕಾಡಿ ಹೊಂಟೀದಿ?"

"ಗಂಟಲಂಬಾದು ಒಣಗಿನಾಲಿಗಿ ಸೇದಲಕತ್ತಾದೋ ಕಾಸಿ. ಒಂದ ಬಗಸಿ ನೀರ ಕುಡ್ದು ಹೋಗ್ತೀನಿ."

"ಬಾ, ಬಾ..... ಜಲ್ದಿ ಕುಡ್ದು ಹೋಗು. ಕುಲಕರ್ಣಿ ಮನಶ್ಯಾರಿಗರೆ ಬಿಡು, ಒಂದ್ ಹಕ್ಕಿಗಿನೂ ನೀರು ಕುಡ್ಲಿಕ್ ಬಿಡುಗುಡಸಂಗಿಲ್ಲ ಇಲ್ಲಿ...."

ಅವಳು ಮಣ್ಣಿನ ಗೊಬ್ಬಿಯಲ್ಲಿ ತುಂಬಿಸಿಟ್ಟಿದ್ದ ನೀರು ತೆಗೆದುಕೊಂಡು. ಕುಡಿದಳು. ಕೈ ಬಾಯಿ ಒರೆಸಿಕೊಂಡು ಉಸ್ಸಪ್ಪಾ ಎಂದು ಕುಳಿತಳು.

"ಯಾಕ ಲಚ್ಚಿ.....ಮಾರಿ ಬಾಡ್ಯಾದಲ್ಲೇ. ನನ್ನರಗಿಣೀದೂ....... ಉಂಡಿದ್ಯಾ ಇಲ್ಲಾ ಹಿನಾ?" ಕಾಸಿನಾತ ಹತ್ತಿರ ಬಂದು ನಿಂತು ಕೇಳಿದ.

"ನಿನ್ನಿ ಪಗಾರ ಕೊಟ್ಟಿಲ್ಲ ನಮ್ ಸಾಬ್.... ನಾಳಿಗಿ ಕುಡ್ತಾನಂತ."

"ಹಂಗಾದ್ರ ನಿನ್ನಿಲಿಂದ ಉಪಾಸೇ ಬಿದ್ದಿದೇನು?" ಅವಳು ಮುಖ ಕೆಳಗೆ ಹಾಕಿದಳು. ಅವನು ಅವಳ ಕೆನ್ನೆ ಸವರಿದ. ಅವನ ಕಣ್ಣು ನೆನೆಯಿತು. ಮೌನವಾಗಿ ಸರಿದು ಹೋಗಿ ಬಳ್ಳಿಯಿಂದ ರಾಮಗುಂಬಳ ಕಾಯಿಯೊಂದನ್ನು ಹರಿದು ತಂದು ಅವಳ ಉಡಿಯಲ್ಲಿಟ್ಟು ಅವಸರಿಸಿದ.

"ಜಲ್ದಿ ಹೋಗು ಲಚ್ಚೀ... ಯಾರರೆ ನೋಡ್ಯಾರು. ಇವತ್ತ ಸಂಜೀಗಿ ಇದ್ದು ಕುದಸಗೊಂಡು ತಿನ್ನು."

ಅವಳು ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತ ನುಡಿದಳು.

"ಗೇಣ ಹೊಟ್ಟಿ ಸಲ್ಯಾಕ ಕಳ್ಳತನ ಮಾಡಾದು ಬಂತಲ್ಲೋ ಕಾಸೀ.... ನನ್ ಮನಸ ಇದಕ್ ಬ್ಯಾಡಂತಾದೋ..."

"ಹುಚ್ಚಿದ್ದಿಯೇನ್ಲೇ ಲಚ್ಚಿ? ಹೊಟ್ಟಿ ತುಂಬಿದ ಮ್ಯಾಲೇ ಮನಸ, ಪೀರೀತಿ, ಜಿಂವಾ ಎಲ್ಲಾ. ಹೋಗ್ ಹೋಗು. ಜಲ್ದಿ ಓಡು......"

ಅವಳು ಅವನನ್ನೊಮ್ಮೆ ಆಳವಾಗಿ ದಿಟ್ಟಿಸಿ ಕುಂಬಳಕಾಯಿಯನ್ನು ಉಡಿಯಲ್ಲಿಟ್ಟುಕೊಂಡು ಎದ್ದು ಹೊರಟಳು. ಅವಳು ತೋಟದ ಬಂದಾರಿ ದಾಟಿ ಕೆಳಗಿಳಿದಳು. ಕಲ್ಲುಗೋಡೆಗಳ ನಡುವಿನ ಕಾಲುದಾರಿಯ ಮೇಲೆ ಹೆಜ್ಜೆ ಹಾಕಿದಳು.

ಎದುರಿನಿಂದ ಸೈಕಲ್ ಮೇಲೆ ಬಂದಿಳಿದ ಕುಲಕರ್ಣಿ ಅವಳ ಮುಂದೆ ನಿಂತು ಕಿಸಿ ಕಿಸಿ ನಕ್ಕ.

"ಏನೇ ಲಚ್ಚಿ.... ಯಕಾಡಿ ಹೊಂಟೀದಿ?" ಸಡಿಲವಾದ ಧೋತರದ ಕಚ್ಚೆ ಸಿಕ್ಕಿಸಿಕೊಳ್ಳುತ್ತ ಹೊಲಸು ನಗೆ ಬೀರಿ ಬತ್ತಿಸು ಹಲ್ಲು ತೋರಿಸಿದ.

"ಯಕಾಡಿ ಇಲ್ರಿ ಕುಲಕಣ್ಣೀರೇ...."

"ಅರೆ ಈಟ್ಯಾಕ ಗಾಬರಿ ಆಗ್ತೇ...."

ಅವನು ಅವಳ ಮೈ ಕೈ ತಡವಿದ. ಅವಳ ಉಡಿಯಲ್ಲಿಯ ಕುಂಬಳ ಕಾಯಿ ಕೆಳಗುರುಳಿತು.

"ಓ! ನನ್ ತ್ವಾಟದಾಗಿನ ಕುಂಬಳಕಾಯಿ ಕಳು ಮಾಡ್ಕೊಂಡು ಹೊಂಟದೇನು? ಇರ್ಲಿ ಬಿಡು. ಇವತ್ತ ರಾತರಿ ನಮ್ ತ್ವಾಟದ ಮನೀಗಿ ಬಾ.... ನಿನಗೇನು ಹೇಳಿಕೇಳಿ ಯಾರೂ ಇಲ್ಲ." ಅವನು ವಿಚಿತ್ರ ರೀತಿಯ ನಗೆ ಹಾಕಿದ.

"ಕುಲಕರ್ಣ್ಣೀರೇ.... ನಿಮ್ ಕುಂಬಳಕಾಯಿ ನನಗ ಬ್ಯಾಡ್ರಿಯಪ್ಪಾ.... ಈಕಾ ತಗೋರಿ. ನಾ ರಾತರಿ ನಿಂಬಲ್ಲಿ ಬರಂಗಿಲ್ಲಾ..."

"ಎ ಭೋಸುಡಿ ಈಟು ಸೊಕ್ಕಾ ನಿನಗ?" ಎನ್ನುತ್ತ ಅವನು ಅವಳ ರಟ್ಟೆ ಹಿಡಿದೆಳೆದ. ಅವಳು ಆಬ್ಬರಿಸಿದಳು.

"ದೂರ ನಿಂತು ಮಾತಾಡೋ ಕುಲಕರ್ಣ್ಣೀ, ನೀ ದವುಳ್ಳಂವಾ ಇದ್ದರ ನಿನ್ ಮನೀಗಿ ಇದ್ದಿ ನನಗೇನು. ರಟ್ಟಿ ಗಿಟ್ಟಿ ಹಿಡದವರ ಬಿಡಸಗೊಂಡು ಹ್ವಾದಿ ಖಬರದಾರ ಖಬರಗೇಡೀ...." ಕುಲಕರ್ಣಿಯ ಸಿಟ್ಟು ನೆತ್ತಿಗೇರಿತು.

"ನಿನ್ನವ್ವನ ಹಲಕಟ್ ರಂಡೀ.... ಈಟು ಸೊಕ್ಕಾ ನಿನಗ...."

"ಬಾಯಿ ತೊಳಕೊಂಡು ಮಾತಾಡೋ.... ನಾ ಯೇನು ಬೀದಿ ಸೂಳೆಂತ ತಿಳ್ಕೊಂಡೇನು? ರಂಡಿಗಿಂಡಿ ಅಂದ್ರ ನೆಟ್ಟಗಾಗಲ್ಲ ನೋಡು. ನಿನ್ ಹೆಣ್ತಿ ಆದಾಳು ರಂಡಿ. ಹಾಂ,"

ಕುಲಕರ್ಣಿ ಅವುಡುಗಚ್ಚಿ ಸಿಟ್ಟು ತಡೆದ. ಅಲ್ಲಿಂದಲೇ ಆಳುಗಳಿಗೆ ಅಬ್ಬರದ ಕರೆ ನೀಡಿದ. ಬಂದ ಆಳುಗಳಿಗೆ ಅವಳನ್ನು ಒಪ್ಪಿಸಿದ.

"ಇಕಿಗಿ ಗಿಡಕ್ ಕಟ್ಟಿಹಾಕ್ರಿ. ಕುಂಬಳಕಾಯಿ ಕಳು ಮಾಡ್ಕೊಂಡು ಹೊಂಟಾಳ ತ್ವಾಟದಲಿಂದ. ಒಂದ್ ತಾಸ ನೋಡ್ರಿ. ಒಳ್ಳೇ ಮಾತ್ನಿಂದ ನನಗೆ ಮೈ ಒಪ್ಪವಳಂದರ ಸರಿ. ಇಲ್ದರ ಪಂಚಾಯ್ತಿ ಆಫೀಸಲಿಂದ ಫೋನ್ ಮಾಡಿ ಪೋಲಿಸರಿಗಿ ಕರಿ. ಅವರ ಕೈಯಾಗ ಹಿಡಕೊಡ್ತಿನಿ. ಲೌಡಿಗಿ ಪೋಲೀಸರ ಏಟಾ ಹಿನಾ ಗೊತ್ತಾಗಿಲ್ಲ... ಹುಂ ಹುಂ ಒಯ್ಯಿರಿಕೀಗಿ." ಆರ್ಭಟಿಸಿದ.

ಆಳುಗಳು ಅವಳನ್ನು ಗಿಡಕ್ಕೆ ಬಿಗಿದು ಕಟ್ಟಿದಳು. ಕಾಸಿನಾತ ತಲೆಯ ಮೇಲೆ ಕೈಹೊತ್ತು ಕುಸಿದು ಕುಳಿತ. ತಾಸು ಎರಡು ತಾಸು ಕಳೆದರೂ ಲಚ್ಚಿ ಕುಲಕರ್ಣಿಯ ಮಾತಿಗೆ ಸೊಪ್ಪು ಹಾಕಲಿಲ್ಲ.

ಹೊತ್ತು ಮುಳುಗಲು ಮಾರು ದೂರ ಇರುವಾಗ ಕಲುಬುರ್ಗಿಯಿಂದ ಪೋಲೀಸ್ ಜೀಪ್ ಬಂದಿತು. ಒಬ್ಬ ಇನ್ಸ್‌ಪೆಕ್ಟರ್ ಜೊತೆ ನಾಲ್ಕು ಜನ ಪೇದೆಗಳು ಬಂದರು.

"ಯಾಕ್ಲೇ ಭೋಸುಡಿ. ಕುಲಕರ್ಣಿ ಮಗ್ಗಲಮೆ ಸೋನಾ ನಹಿ ಮಾಂಗ ತಾಕ್ಯಾ.... ಚಲೋ ಸ್ಟೇಶನಕೊ"

ಎಂದವನೇ ಅವಳನ್ನು ಜೀಪ್‌ನಲ್ಲಿ ಹಾಕಿ ಕೊಂಡು ಹೊರಟರು. ಅವರ ಕಿಸೆ ಬೆಚ್ಚಗಾಗಿತ್ತು.

ಭೀಮಳ್ಳಿಯಿಂದ ಎರಡು ಹರದಾರಿ ದೂರದಲ್ಲಿದ್ದ ತಾಂಡ್ಯಾದ ರಾಮಸಿಂಗ್‌ನ ಭಟ್ಟಿಯ ಸರಾಯಿಯೂ ಅವರ ಹೊಟ್ಟೆ ಸೇರಿತ್ತು.

ಪೋಲೀಸ್ ಸ್ಟೇಶನ್‌ಗೆ ತಂದು ಲಾಕಪ್‌ನಲ್ಲಿ ಹಾಕಿ ಕಿಸಿಕಿಸಿ ನಗುತ್ತ ಪೇದೆಗಳು ಹೊರಬಂದರು. ಲಚ್ಚಿ ಧೊಪ್ಪನೆ ಕುಸಿದು ಬಿದ್ದು ಬಿಕ್ಕಳಿಸಿದಳು. ಅವಳ ಕಣ್ಣಿಗೆ ಕತ್ತಲಿಟ್ಟಿತು. ಎರಡು ದಿನಗಳ ಉಪವಾಸ, ಮೇಲೆ ಈ ಎಲ್ಲ ಕಿರಿಕಿರಿಯಿಂದ ದಣಿದ ದೇಹ ಎಚ್ಚರ ಕಳೆದುಕೊಂಡಿತು.

ಅವಳಿಗೆ ಎಚ್ಚರ ಬಂದಾಗ ಪೇದೆಯೊಬ್ಬ ಅವಳನ್ನು ಕೂಡಿಹಾಕಿದ ಕೋಣೆಯ ಬಾಗಿಲು ತೆರೆಯುತ್ತಿದ್ದ. ಇನ್ಸ್‌ಪೆಕ್ಟರ್ ಒಳಬಂದು ಆಬ್ಬರಿಸಿದ.

"ಏನೇ ಪೋರೀ.... ಕುಂಬಳಕಾಯಿ ಕಳು ಮಾಡಿದ್ಯಾ? ಕುಲಕರ್ಣಿ ಹೊಲದ ಕುಂಬಳಕಾಯಿ?"

ಲಚ್ಚಿ ಧಡಕ್ಕನೆ ಎದ್ದು ಕುಳಿತಳು, ನಿತ್ರಾಣದಿಂದ ಅವಳಿಗೆ ಕುಳಿತು ಕೊಳ್ಳಲಾಗಲಿಲ್ಲ. ಗೋಡೆಗೊರಗಿದಳು.

"ಇಲ್ರಿಯಪ್ಪಾ... ನಾ ಕಳು ಮಾಡಿಲ್ರಿ ಬಾಬಾ....."

"ಮತ್ತ್ಯಾರು ಕಳು ಮಾಡಿದ್ರು? ಕುಂಬಳಕಾಯಿ ಅನಾಮತಾಗಿ ನಿನ್ನುಡ್ಯಾಗ ಬಂದು ಕೊಡ್ತಾವೇನೇ ಲಡಕಿ? ಬದ್ಮಾಶಗಿರಿ ಮಾಡ್ಬೇಡಾ.... ಸುಮ್ನ ಇದ್ದಕಿದ್ಹಾಂಗ ಹೇಳಿಬಿಡು ಹುಂ....."

ಖಾಕಿಯುಡುಗೆಯವರು ತಮ್ಮ ಶಬ್ದಕೋಶದಲ್ಲಿಯ ಹೆಣ್ಣುಗಳಿಗೆ ಬೈಯ್ಯುವ ಎಲ್ಲ ಪದಗಳನ್ನೂ ಇನ್ಸ್‌ಪೆಕ್ಟರ್ ಇವಳ ಮೇಲೆ ಪ್ರಯೋಗಿಸಿದ. ಹೆದರಿಸಿದ, ಬೆದರಿಸಿದ. ಉಹೂಂ.... ಲಚ್ಚಿ ತಾನು ಕಳ್ಳಿ ಅಂತ ಒಪ್ಪಿಕೊಳ್ಳಲಿಲ್ಲ.

ರಾತ್ರಿ ಕಪ್ಪಗೆ ಬೆಳೆಯತೊಡಗಿತು. ಎಲ್ಲೆಡೆಗೂ ಕಪ್ಪು ಮೆತ್ತುತ್ತ ಸರಿದಾಡಿತು. ಬೀದಿಯ ದೀಪಗಳ ಬೆಳಕಿನೊಂದಿಗೆ ಅದರ ನಿರಂತರ ಹೋರಾಟ.

ಪೊಲೀಸ್ ಸ್ಟೇಶನ್‌ನಲ್ಲಿ ರಾತ್ರಿ ನಡೆಯುವ ಕೆಲಸಗಳು ಪ್ರಾರಂಭವಾದುವು. ಗಂಡು ಅಪರಾಧಿಗಳ ಕಣ್ಣಲ್ಲಿ ಕಾರ ತುಂಬಿದರು. ಮತ್ತೊಬ್ಬನ ಮೈಮೇಲೆ ರಕ್ತ ಸುರಿಯುವಂತೆ ಹೊಡೆದು ಉಪ್ಪು ಸವರಿದರು. ಇನ್ನೊಬ್ಬನ ಕಾಲುಗಳಿಗೆ ಕಬ್ಬಿಣದ ಸರಪಳಿಗಳಿಂದ ಬಿಗಿದು ಮುಖಕ್ಕೆ ಮೆಣಸಿನ ನೀರೆರಚಿದರು.

ಅಪರಾಧಿಗಳ ವೇದನೆಯ ದನಿಗಳು, ವಿಲವಿಲನೆ ಒದ್ದಾಟಗಳು, ಸದ್ದು ತೂರಿ ಆಳುವ ರೋದನ ಸ್ವರ. ಪೆಟ್ಟು ತಾಳದೆ ಹಾಕುವ ವಿಕಾರ ಸ್ವರಗಳಿಂದ ಸ್ವಲ್ಪ ಹೊತ್ತು ಪೋಲೀಸ್ ಠಾಣೆ ಬಿಕ್ಕಳಿಸಿ ಬಿಕ್ಕಳಿಸಿ ಅಳತೊಡಗಿತು.

ಇದನ್ನೆಲ್ಲ ಕಂಡ ಲಚ್ಚಿ ಕಂಗಾಲಾದಳು. ಅವಳೆದೆ ನಗಾರಿಯಂತೆ ಬಾರಿಸಿಕೊಳ್ಳತೊಡಗಿತು. ಬಾಯಲ್ಲಿಯ ದ್ರವ ಆರಿ ಗಂಟಲೊಣಗಿತು. ಕೈಕಾಲು, ಇಡೀ ಮೈಯೆಲ್ಲ ಬಿರುಗಾಳಿಗೆ ಸಿಲುಕಿದ ತರಗೆಲೆಯಂತೆ ತತ್ತರಿಸಿತು.

ರಾತ್ರಿ ಒದ್ದಾಡುತ್ತ ಅರ್ಧ ಸತ್ತಿತ್ತು. ಎಲ್ಲ ಕಡೆಗೂ ದಟ್ಟವಾದ ಗಾಢಾಂಧಕಾರದ ಸ್ತಬ್ಧತೆ ತಾನೇ ತಾನಾಯಿತು. ಠಾಣೆ ತೂಕಡಿಸಿತು. ಆಗೊಮ್ಮೆ ಈಗೊಮ್ಮೆ ಅಪರಾಧಿಗಳ ನರಳುವಿಕೆ ಬಿಕ್ಕಳಿಸುವಿಕೆಯ ಸಣ್ಣನೆಯ ದನಿಗಳನ್ನು ಬಿಟ್ಟರೆ ಉಳಿದದ್ದೆಲ್ಲ ಮೂಕ ಮೌನ.

ಒಮ್ಮಿಂದೊಮ್ಮೆಲೇ ಲಚ್ಚಿಯ ಕಿರುಚುವಿಕೆ ಎಲ್ಲೆಡೆಗೂ ದಿಕ್ಕುಗಳು ಹರಿದು ಹೋಗುವಂತೆ ದೌಡಾಯಿಸಿತು. ಮರುಕ್ಷಣ ಅವಳ ಬಾಯಿಗೆ ಬೀಗ ಬಿದ್ದಿತು. ಊಂ... ಊಂ.... ಅಂತ ನರಳುತ್ತ ಹೊರಲಾಡುವುದನ್ನು ಬಿಟ್ಟರೆ ಮತ್ತೇನೂ ಕಾಣಿಸಲಿಲ್ಲ. ಸಮಯ ಸರಿಯಿತು. ಕೆಲ ಹೊತ್ತಿನ ನಂತರ ಅವಳ ಕೋಣೆಯಿಂದ ಪೊಲೀಸರು ಹೊರಬಂದರು.

ಲಚ್ಚಿ ಆಂಗಾತ ಬಿದ್ದಲ್ಲಿಯೇ ಸಣ್ಣಗೆ ನರಳತೊಡಗಿದಳು. ಕಣ್ಣೀರು ದಳದಳನೆ ಹರಿದು ನೆಲಕ್ಕಿಳಿಯುತ್ತಿತ್ತು. ಬಾಯಿಯಲ್ಲಿ ತುರುಕಿದ್ದ ಸೆರಗನ್ನು ಪ್ರಯಾಸಪಟ್ಟು ತೆಗೆದುಕೊಂಡು ಬೋರಲು ಮಲಗಿದಳು. ನೆಲಕ್ಕೆ ಮುಖವಿಟ್ಟು ಭೂಮಿ ಬಿರಿಯುವಂತೆ ಬಿಕ್ಕಳಿಸಿದಳು. ಹೃದಯ ಕಿತ್ತುಬರುವಂತೆ ಅತ್ತಳು. ಬಿಚ್ಚಿದ ಸೀರೆಯನ್ನು ಸರಿಪಡಿಸಿಕೊಳ್ಳಲೂ ಅವಳಿಗೆ ತ್ರಾಣವಿರಲಿಲ್ಲ. ಕಾಸಿನಾತನ ಸ್ವತ್ತೆಲ್ಲ ಮತ್ತಾರೋ ಅಪಹರಿಸಿದ್ದರು. ಅವನಿಗೆಯೇ ಮೀಸಲಿಟ್ಟುದನ್ನು ಬೇರೆಯವರು ಮುರಿದಿದ್ದರು. ಮೈಯ ಯಾತನೆಗಳಿಂದ ಮನಸ್ಸಿನ ವ್ಯಥೆ ಹೆಚ್ಚಾಗಿ ನೀರಿನಿಂದ ಬೇರ್ಪಡಿಸಿದ ಮೀನಿನಂತೆ ಚಡಪಡಿಸಿದಳು.

ಅಂತಹುದೇ ನರಕಯಾತನೆಯ ಮೂರು ದಿನಗಳ ನಂತರ ಲಚ್ಚಿಯನ್ನು ಕೋರ್ಟಿನ ಕಟಕಟೆಯಲ್ಲಿ ನಿಲ್ಲಿಸಲಾಯಿತು.

ವಕೀಲರು ಕೇಳಿದ ಪ್ರಶ್ನೆಗಳಿಗೆಲ್ಲ ಅವಳದು ಬರೀ ಮೌನದ ಉತ್ತರ. ಕಣ್ಣೀರಿನ ಮಾತು. ಶೂನ್ಯ ನೋಟದ ವಿವರಣೆ.

ಕಳ್ಳತನದ ಕೇಸಿಗಾಗಿ ಅವಳ ಮೇಲೆ ಇಪ್ಪತ್ತು ರೂಪಾಯಿಗಳ ಜುಲ್ಮಾನೆಯಾಯಿತು. ಅದನ್ನು ತೆರಲು ಅವಳ ಬಳಿ ಹಣವಿರಲಿಲ್ಲ. ಅಂಥ ಬರಗಾಲದಲ್ಲಿ ಕಾಸಿನಾಥನಿಗಾದರೂ ಅಷ್ಟು ಹಣ ಕೊಡುವವರಾರು? ಅವಳಿಗೆ ಶಿಕ್ಷೆಯಾದ ದಿನವೂ ಕಾಸಿನಾತ ಕೋರ್ಟಿಗೆ ಬಂದಿದ್ದ. ಕುಲಕರ್ಣಿಯೂ ಕುಹಕ ನಗೆಬೀರುತ್ತ ಬಂದು ನಿಂತಿದ್ದ.

ಪೋಲೀಸರ ಹಿಂದೆ ಲಚ್ಚಿ ನಿಧಾನವಾಗಿ ನಡೆದಾಗ ಎದುರು ನಿಂತ ಕಾಸಿನಾತನನ್ನು ಕಣ್ಣೆತ್ತಿ ನೋಡಿದಳೊಂದು ಕ್ಷಣ. ಒಂದೇ ಒಂದು ಕ್ಷಣ. ಮರುಕ್ಷಣ ಓಡಿ ಹೋಗಿ ಅವನ ತೆಕ್ಕೆಗೆ ಬಿದ್ದು ಭೋರ್ಗರೆದು ಅತ್ತಳು. ಅವನಿಗೂ ಅಳುವುದರ ಹೊರತು ಬೇರೆ ಮಾತು ಬರಲಿಲ್ಲ. ಪೋಲೀಸ್ ಪೇದೆಗಳು ಅವಳನ್ನೆಳೆದುಕೊಂಡೊಯ್ದು ಸೆರೆಮನೆಯ ವ್ಯಾನ್‌ನಲ್ಲಿ ತಳ್ಳಿದರು.

ಬೃಹದಾಕಾರದ ಸೆರೆಮನೆಯ ಬಾಗಿಲ ಬಳಿ ವ್ಯಾನ್‌ನಿಂದಿಳಿದ ಲಚ್ಚಿ ತಲೆಯೆತ್ತಿದಳು.

ಬಾಗಿಲ ಮುಂದೆ ನಿರಂತರವಾಗಿ ಕೋವಿ ಹಿಡಿದು ಪಹರೆ ಕಾಯುತ್ತಿದ್ದ ಜೋಡಿ ಪೋಲೀಸ್ ಪೇದೆಗಳು ಕೆಂಪು ಕಣ್ಣಗಲಿಸಿ ಮೀಸೆ ಕುಣಿಸಿದರು. ಗಂಟು ಮುಖ, ಪೊದೆಮೀಸೆ, ಕೋವಿಯಂತಹ ಮೂಗು, ಬಿಗಿದ ತುಟಿಗಳು, ಗಂಭೀರ ಮುಖದ ಪೇದೆಗಳನ್ನು ಕಂಡು ಲಚ್ಚಿಯ ದೃಷ್ಟಿ ಹೆದರಿ ಕೆಳಗುರುಳಿತು.

"ಏಯ್, ಯಾಕ್ ನಿಂತಿ. ನಡಿ ಒಳಗ...."

ಹಿಂದಿನಿಂದ ಮತ್ತೊಬ್ಬ ಪೇದೆ ಅವಳನ್ನು ನೂಕಿದ. ಲಚ್ಚಿ ಒಳನಡೆದಳು.

ಲಚ್ಚಿಯ ಮೈಮೇಲಿನ ಕೆಂಪಂಚಿನ ಹಸಿರು ಸೀರೆ ಕುಪ್ಪಸಗಳನ್ನು ಕಳಚಿ ಸೆರೆಮನೆಯ ಕೈದಿಗಳ ಸಮವಸ್ತ್ರಗಳನ್ನು ಉಡಲು ಕೊಟ್ಟರು. ಜೈಲರ್‌ನ ರಿಜಿಸ್ಟರ್‌ನಲ್ಲಿ ಅವಳ ಹೆಸರು ಬರೆಯಲ್ಪಟ್ಟಿತು. ಮಹಿಳಾ ಕೈದಿಗಳನ್ನಿಡುವ ವಿಭಾಗಕ್ಕೆ ಅವಳನ್ನು ಕರೆದೊಯ್ಯಲಾಯಿತು.

ಲಚ್ಚಿ ಸೆರೆಮನೆಯಲ್ಲಿ ಯಾರಿಗೂ ಯಾವುದಕ್ಕೂ ಕಿರುಕುಳ ಕೊಡುವ ಹೆಣ್ಣಲ್ಲ. ತಾನಾಯಿತು ತನಗೊಪ್ಪಿಸಿದ ಕೆಲಸವಾಯಿತು. ಕೆಲಸ ಮುಗಿದು ಯಾವುದಾದರೂ ಗಿಡದ ಬುಡದಲ್ಲಿ ಕುಳಿತು ಆಗಸ ದಿಟ್ಟಿಸುವಳು. ಭಣಗುಟ್ಟುವ ಆಗಸದ ಬಿಳಿಮೋಡಗಳಲ್ಲಿ ಅವಳ ದೃಷ್ಟಿ ಕೀಲಿಸುತ್ತದೆ. ಯಾರಾದರೂ ಕರೆದಾಗಲೇ ಅವಳ ನೋಟ ಅಲ್ಲೋಲ ಕಲ್ಲೋಲ.

"ಲಚ್ಚವ್ವಾ... ಯಾಕ ನೀ ಹಿಂಗ ಒಳಗೊಳಗೇ ಹುಳಾ ಹತ್ತಿದ ಕಟಗಿ ಹಂಗೆ ಕೊರಗ್ತೇ ತಂಗೀ.... ನಿನ್ ಜೋಡಿ ಇರಾ ಕೈದಿಗೋಳಿಗೆರೆ ನೋಡು. ಖೂನ ಖತಲ ಮಾಡಿ ಬಂದ ರಂಡೇರೆಲ್ಲಾ ಹ್ಯಾಂಗ ಹುಕ್ಕಾ ಹಾಯ್ಕೋತ ನಗ್ತಾರ, ಕುಣೀತಾರ.... ನೀ ಏನೂ ಮಾಡಲಾರ್ದೆ ಬರೇ ಒಂದು ಕುಂಬಳ ಕಾಯಿ ಕಳುಮಾಡಿ ಬಂದಕ್ಕಿ. ಅದನೂ ಬರಗಾಲದಾಗ ಹೊಟ್ಟಿ ಹಸುವಿನ ಸಲ್ಯಾಕ. ನೀ ಯಾಕ ಚಿಂತಿ ಮಾಡ್ತೇ ನಮ್ಮವ್ವಾ... ನಿನ್ನ ಶಿಕಶ್ಯಾನೂ ಥ್ವಾಡೆ ಅದಾ. ಆರ ತಿಂಗಳದಾಗ ನೀ ಹೊರಗ ಹೋಗ್ತಿ."

ಮಹಿಳಾ ವಿಭಾಗದ ಕಾವಲುಗಾರ್ತಿ ರಂಗವ್ವ ಹೇಳಿದಳು.

ಲಚ್ಚಿ ತಲೆಯೆತ್ತಿ ಒಮ್ಮೆ ರಂಗವ್ವನನ್ನು ದಿಟ್ಟಿಸಿದಳಷ್ಟೇ, ಮಾತಾಡಲಿಲ್ಲ. ರಂಗವ್ವ ಏನು ಕೇಳಿದರೂ ಲಚ್ಚಿಯ ಶೂನ್ಯ ನೋಟವೇ ಉತ್ತರವಾಗುತ್ತಿತ್ತು.

ದಿನಗಳು ಉರುಳತೊಡಗಿದುವು. ಅಕ್ಕಿ ಆರಿಸುವುದು, ಬೇಳೆ ಆರಿಸುವುದು, ಕಸ ಗುಡಿಸುವುದು, ನೀರು ತಂದು ಆವರಣ ಸಾರಿಸುವುದು ಮೊದಲಾದ ತನಗೆ ವಹಿಸಿಕೊಟ್ಟ ಕೆಲಸವನ್ನೆಲ್ಲ ಲಚ್ಚಿ ತುಟಿ ಎರಡು ಮಾಡದೆ ಚೊಕ್ಕಟವಾಗಿ ಮಾಡಿ ಮುಗಿಸುತ್ತಿದ್ದಳು.

ಅವರು ಹಾಕಿದಷ್ಟನ್ನು ತಿಂದು ಎದ್ದು ಬರುತ್ತಾಳೆ. ಬೇರೆಯವರಂತೆ ಅನ್ನಕ್ಕಾಗಿ, ರೊಟ್ಟಿಗಾಗಿ ಅವಳು ಜಗಳಾಡುವುದಿರಲಿ, ಬೇರೆಯ ಕೈದಿಗಳು ಅವಳ ಎಡೆಯಿಂದ ಅದನ್ನು ಕಿತ್ತುಕೊಂಡರೂ ಅವಳು ಬೇಡವೆನ್ನುತ್ತಿರಲಿಲ್ಲ.

"ಯಕಾಡಿ ನೋಡ್ತೇ ಲಚ್ಚಿ? ನಿನ್ ಗಂಗಾಳದಾನ ರೊಟ್ಟಿ ಬಾಜು ಕುಂತ ಕಾಳಿ ತಗೊಂಡು ತಿನ್ನಕ್ಹತ್ತಾಳ. ಮೈ ಮ್ಯಾಲ ಖಬರದಾ ಯೇನೇ ನಿನಗ?"

ರಂಗವ್ವ ಎದ್ದು ಬಂದು ಬೈಯ್ದು, ಕಾಳಿಗೊಂದು ಗುದ್ದಿ ಮತ್ತೊಂದು ರೊಟ್ಟಿಯನ್ನು ಲಚ್ಚಿಯ ತಾಟಿನಲ್ಲಿ ಹಾಕುತ್ತಿದ್ದಳು.

ಒಂದು ದಿನ ಲಚ್ಚಿ ಮುಗಿಲು ನೋಡುವುದರಲ್ಲಿ ತನ್ಮಯಳಾಗಿದ್ದಳು. ಪೇದೆಯೊಬ್ಬ ಬಂದು ಬಾಗಿಲು ಬಡಿದು ರಂಗವ್ವನಿಗೆ ಏನೋ ಹೇಳಿದ.

ರಂಗವ್ವ ಅಲ್ಲಿಂದಲೇ ಕೂಗಿದಳು.

"ಲಚ್ಚಿ... ನಿನಗ ಭೇಟಿ ಆಗಲಕ್ಕ ಯಾರೋ ಬಂದಾರಂತ, ಬಾ.... ಕರ್‍ಕೊಂಡು ಬರಲಿಕ್ ಹೇಳ್ಯಾರಾ ಸಾಬ್ರು."

"ಲಚ್ಚಿ ಧಡಕ್ಕನೆ ಎದ್ದು ನಿಂತಳು. ರಂಗವ್ವನ ಹಿಂದೆ ನಡೆದು ಬಂದು ಕಿಟಕಿಯ ಸರಳುಗಳ ಹಿಂದೆ ನಿಂತಳು. ಆ ಕಡೆಗೆ ಕುಳಿತಿದ್ದ ಕಾಸಿನಾತ ಎದ್ದು ಬಂದು ಅವಳ ಮುಂದೆ ನಿಂತ. ಸರಳು ಹಿಡಿದು ಅವಳ ಕೈಗಳನ್ನು ಹಿಡಿದು ನಿಟ್ಟುಸಿರೆಳೆದ.

"ಚ್ಚಿ.... ಇದೆಲ್ಲಾ ಹಿಂಗ್ಯಾಕಾಯ್ತೇ...."

ಅವಳು ತುಟಿ ಬಿಚ್ಚಲಿಲ್ಲ. ಅವನ ಮುಖವನ್ನೇ ಕಣ್ಣೆವೆಯಿಕ್ಕದೆ ಪಿಳಿ ಪಿಳಿ ದಿಟ್ಟಿಸಿದಳು.

"ಲಚ್ಚೀ.... ನಿನ್ ಸಜಾ ಮುಗೇಣಾ ನಾವಿಬ್ರೂ ಮದಿ ಮಾಡ್ಕೊಂಡು ಬಿಡಾಮಿ. ಈ ಹಳ್ಳಿ ಬಿಟ್ಟು ದೂರ ಹೋಗಾಮಿ."

"ಕಾಸೀ...."

ಅವಳು ಪ್ರಯಾಸಪಟ್ಟು ನರಳು ದನಿ ಹರಿಸಿದಳು.

"ಏನು ಲಚ್ಚೀ.... ಹೇಳು. ಮಾತಾಡು. ನಿನ್ ಮನಸನ್ಯಾಗೇನು ತುಂಬ್ಯಾದೆ, ಅದೆಲ್ಲಾ ಒಮ್ಮೆ ಕಾರಕೊಂಡು ಬಿಡು ನನ್ಮುಂದ. ಹೇಳು ಲಚ್ಚೀ...."

"ಕಾಸೀ.... ನಮ್ ಮದಿ ಮಾತ ಮರ್‍ತು ಬಿಡು. ನಿನಗ ನಾ ಲಾಯಕ್ಕಿಲ್ಲ. ನೀ ಬ್ಯಾರೆ ಛಂದನ ಹೆಣ್ಣಿಗಿ ಮದಿ ಮಾಡ್ಕೋ."

ಅಷ್ಟು ನುಡಿದವಳು ತುಟಿ ಕಚ್ಚಿದಳು. ಅವಳ ಕೈಮೇಲೆ ಕೈಯಿಟ್ಟ ಕಾಸಿನಾತನ ಹಿಡಿತ ಬಿಗಿಯಾಯಿತು. ಅವನು ಅವಸರಿಸಿದ.

"ಯಾಕ ಲಚ್ಚೀ ಯಾಕ? ಒಂದೇ ಒಂದು 'ಕಾರವಯಿ'ಗಿ ನೀ ಅಂಜಿ ಬಿಟ್ಯಾ? ನಿನಮ್ಯಾಲ ಕಳ್ಳತನ ಕೇಸಾಗಿ, ಕಟ್ಟಿಕಚೇರಿ ಏರಿ ಜೇಲ ಸೇರದರೇನಾಯ್ತು. ನಾ ಮದಿ ಆಗಾದು ನಿನ್ ಸಂಗಾಟೇ ಲಚ್ಚೀ... ನೀ ಹಿಂತಾ ಮಾತಾಡಬ್ಯಾಡಾ...."

"ಕಾಸೀ.... ನಾ ಕೆಟ್ಟು ಹೋಗಿನೋ.... ಈಗ ನನ್ ಬಲ್ಲಿ ಏನೂ ಉಳದಿಲ್ಲ ನಿನಗ ಕುಡಲಕ. ಅವತ್ತ ಅವತ್ತ.... ಪೋಲೀಸ ಠಾಣೇದಾಗ ನಂದು ಎಲ್ಲೋರೂ ಕಸಗೊಂಡು ಬಿಟ್ರೋ.... ಕಸಗೊಂಡು ಬಿಟ್ರೋ ಕಾಸೀ... ನನಗ ಜಿಂವಾಯಿಟ್ಟೇ ಕೊಲ್ಲಿಬಿಟ್ರೋ.... ಕೊಲ್ಲಿಬಿಟ್ರು. ನನ್ ಮ್ಯಾಲ ಅತ್ಯಾಚಾರ ಮಾಡಿಬಿಟ್ರು."

ಅವಳು ಕಿಟಕಿಯ ಕಬ್ಬಿಣದ ಸರಳುಗಳಿಗೆ ತಲೆ ಚಚ್ಚುತ್ತ ದನಿ ತೆಗೆದು ಅತ್ತಳು.

ಒಮ್ಮಿಂದೊಮ್ಮೆಲೇ ಈ ಮಾತು ಕೇಳಿದ ತತ್‌ಕ್ಷಣ ಅವನ ಹಿಡಿತ ಸಡಿಲಾಯಿತು. ಅವನ ಬಾಯಿಯಿಂದ ದನಿ ಹೊರಡಲಿಲ್ಲ. ಒಂದು ಕ್ಷಣ ಗರಬಡಿದವನಂತೆ ಸ್ತಬ್ಧನಾಗಿ ನಿಂತುಬಿಟ್ಟ. ಮೈಯಲ್ಲಿಯ ಎಲ್ಲ ಶಕ್ತಿಯನ್ನೂ ಮಶೀನಿನಿಂದ ಹೀರಲ್ಪಟ್ಟವನಂತಾಗಿ

"ಲಚ್ಚೀ...."

ಎಂದು ವೇದನೆಯ ನರಳು ದನಿ ಹಾಕಿದ. ನಿಂತಲ್ಲಿಯೇ ಕುಸಿದು ಕುಳಿತ. ಅವಳು ಅವನನ್ನೇ ದಿಟ್ಟಿಸಿದಳು. ದಿಟ್ಟಿಸುತ್ತ ದಿಟ್ಟಿಸುತ್ತ ಅವಳ ಕಣ್ಣುಗಳಲ್ಲಿಯ ಶೂನ್ಯ ಕೆನೆಗಟ್ಟತೊಡಗಿತು. ಹೆಪ್ಪುಗಟ್ಟುತ್ತ ಗೆಡ್ಡೆ ಗೆಡ್ಡೆಯಾಗತೊಡಗಿತು.

"ಟೈಂ ಖತಮ್ ಹೋಗಯಾ.... ಹೊರಗ ನಡಿಯಪಾ..."

ಜವಾನ ಬಂದು ಎಚ್ಚರಿಸಿದ. ಕಾಸಿನಾತ ಎದ್ದು ಅವಳನ್ನೊಮ್ಮೆ ನೋಡಿ ತಿರುಗಿ ನಡೆದ. ಅವನು ಹೋಗುವವರೆಗೂ ಅಲ್ಲಿಯೇ ನಿಂತಿದ್ದ ಲಚ್ಚಿಯ ತುಟಿಗಳಲ್ಲಿ ವಿಚಿತ್ರ ನಗು ಹುಟ್ಟಿ ಸತ್ತಿತು. ಕಾಸಿನಾತ ಹೋಗುವಾಗ ಒಮ್ಮೆಯೂ ಅವನು "ಹೋಗುತ್ತೇನೆ ಲಚ್ಚಿ....." ಎನ್ನಲಿಲ್ಲ. ಆವನು ಅವಳ ಮಾತಿಗೆ ಏಕ್‌ದಂ ಬದಲಾಯಿಸಿ ಬಿಟ್ಟಿದ್ದ. ಅವನಲ್ಲಿಯ ಬದಲಾವಣೆ ಲಚ್ಚಿಯ ಹೃದಯಕ್ಕೆ ಸಟಕ್ಕನೆ ತಿಳಿಯಿತು. ಅವಳು ನಿಂತಲ್ಲಿಯೇ ಮರಗಟ್ಟಿದಳು.

ರಂಗವ್ವ ಲಚ್ಚಿಯನ್ನು ತಡವಿದಳು. ಲಚ್ಚಿ ತಲೆ ತಗ್ಗಿಸಿಕೊಂಡು ಅವಳನ್ನು ಹಿಂಬಾಲಿಸಿದಳು.

ಯಾರ ಕಣ್ಣೀರಿಗೂ ವ್ಯಥೆಗೂ ಬೆಲೆ ಕೊಡದ ಸಮಯ ಸರಿಯುತ್ತಿತ್ತು. ಸಮಯಕ್ಕೆ ಮನುಷ್ಯರ ದುಃಖ ದುಗುಡಗಳೆಡೆಗೆ ಮೊದಲಿನಿಂದಲೂ ಕುರುಡು ನೋಟ. ನಿರ್ದಯಿ. ನಿಷ್ಕರುಣಿ ಅದು.

ಮಜಬೂತಾದ ಜೈಲು ಕಟ್ಟಡದ ಮುಂಭಾಗದ ಗೋಡೆಯ ಮೇಲೆ ಹಸುಳೆ ರವಿಯ ಹೊಂಬಣ್ಣದ ಕಿರಣಗಳು ಚಿನ್ನದ ನೀರೆರೆದುವು. ಜೈಲಿನೊಳಗೆ ಕೈದಿಗಳು ಬೆಳೆಯಿಸಿದ ಹೂದೋಟ, ಗಿಡಮರಗಳ ಮೇಲೆಲ್ಲ ಚೆಲುವಿನ ಬೆಳಕು ಹರಿದು ನಿಂತಿತು.

ಆದರೆ ಆ ದುರ್ದೈವಿ ಕೈದಿಗಳಿಗೆ ಯಾವ ಬೆಳಗೂ ಸುಂದರವಾಗಿರಲು ಸಾಧ್ಯವಿಲ್ಲ. ನಾಲ್ಕು ಗೋಡೆಗಳ ನಡುವಿನ ಸೀಮಿತ ಪ್ರದೇಶದಲ್ಲಿಯ ಬೆಳಗು, ಸಂಜೆಗಳು ಅವರಿಗೆ ಸುಂದರವಾಗಿ ಕಾಣಿಸುವುದು ಸಾಧ್ಯವೂ ಇರಲಿಲ್ಲ.

ತನ್ನ ಪಾಲಿನ ಬೆಳಗಿನ ಕೆಲಸವನ್ನೆಲ್ಲ ಮುಗಿಸಿ ಲಚ್ಚಿ ಮರದ ಬುಡಕ್ಕೆ ಬಂದು ಕುಳಿತಳು. ಅವಳ ದೃಷ್ಟಿ ಶೂನ್ಯವಾಗಿ ಮುಗಿಲೆಡೆಗೆ ಸರಿಯಿತು.

"ಲಚ್ಚೀ... ಬಾರೇ... ಇವತ್ತ ನಿನಗ ಬೆಳಗಾಯ್ತು ಬಾ..."

ಜವಾನ ಬಂದು ಸುದ್ದಿ ತಲುಪಿಸಿದ ತತ್‌ಕ್ಷಣ ರಂಗವ್ವ ಲಚ್ಚಿಯೆಡೆಗೆ ಓಡಿ ಬಂದಳು. ಲಚ್ಚಿ ಎದ್ದು ನಿಂತು ಪಿಳಿ ಪಿಳಿ ಕಣ್ಣುಬಿಟ್ಟಳು.

"ನಿನ್ 'ಸಜಾ'ದ ದಿನಗೋಳು ಮುಗದೂ ಅಂತ. ಇವತ್ತ ನಿನಗ ಬಿಡ್ತಾರಂತ ಲಚ್ಚೀ... ಬಾ ಎಣ್ಣಿ ಕುಡ್ತಿನೆಂತ. ತೆಲಿ ಹಿಕ್ಕೊಂಡು ಮಾರಿ ತೊಳ್ಕೊಂಡು ಬಾ. ಸಾಬ್ರು ಕರ್‍ಲಿಕ್ಹತ್ತಾರಂತ."

ರಂಗವ್ವನಿಗೆ ಆದ ಸಂತೋಷ ಲಚ್ಚಿಗೆ ಉಂಟಾಗಲಿಲ್ಲ. ಬದಲಾಗಿ ಅವಳೆದೆಯಲ್ಲಿ ಯಾತನೆಯ ಎಳೆಯೊಂದು ಅಡ್ಡಾದಿಡ್ಡಿಯಾಗಿ ಹೊಯ್ದಾಡಿ ಮೈಯ ಸಂದಿ ಸಂದಿಗಳಲ್ಲಿ ನೋವು ಬೀರಿತು.

ಜೈಲಿನಲ್ಲಿ ಹೊಟ್ಟೆಯ ಚಿಂತೆ ಅವಳಿಗಿರಲಿಲ್ಲ. ಮೈಮುರಿದು ಕೆಲಸ ಮಾಡುತ್ತಿದ್ದಳು. ಮೇಲಾಗಿ ಅವಳಿದ್ದುದು ಮಹಿಳಾ ಕೈದಿಗಳ ಜೊತೆಗೆ. ಊಟ ಕೊಡಲು ಬರುವ ಎರಡು ಗಂಡು ಕೈದಿಗಳನ್ನು ಬಿಟ್ಟರೆ ಮತ್ತಾವ ಗಂಡು ಹುಳುವೂ ಅಲ್ಲಿಗೆ ಸುಳಿಯುತ್ತಿರಲಿಲ್ಲ. ಜೈಲಿಗೆ ಬಂದಂದಿನಿಂದ ಅವಳಿಗೆ ಗಂಡಿನ ಕ್ರೌರ್ಯದ, ದೌರ್ಜನ್ಯದ ಅತ್ಯಾಚಾರದ ಅನುಭವ ಮರುಕಳಿಸಿರಲೇ ಇಲ್ಲ. ಜೈಲಿನ ನಾಲ್ಕು ಗೋಡೆಗಳ ನಡುವೆ ತಾನು ಸುರಕ್ಷಿತೆ ಎನಿಸಿತ್ತು. ತನ್ನ ತಂಟೆಗೆ ಒಂದು ಗಂಡು ನೋಟವೂ ಬರುವುದಿಲ್ಲವೆಂದು ಖಾತ್ರಿಯಾದವಳಿಗೆ ಎಂಥದೋ ಒಂದು ರೀತಿಯ ಆಂತರಿಕ ಸಾಂತ್ವನ ದೊರೆತಿತ್ತು.

ಆದರೆ ಈಗ?

ಅಂದು ಬಂದು ಅವಳ ಬಾಯಿಯಿಂದಲೇ ಅವಳು ಹಾಳಾದ ಸುದ್ದಿ ಕೇಳಿ ಹೋಗಿದ್ದ ಕಾಸಿನಾತ ಮತ್ತೆಂದೂ ತಿರುಗಿ ಅವಳನ್ನು ಕಾಣಲು, ಭೇಟಿಯಾಗಲು ಬಂದಿರಲಿಲ್ಲ! ತಾನು ಅವನೊಬ್ಬನಿಗೆಯೇ ಮೀಸಲಾಗಿದ್ದಾಗ ತನ್ನನ್ನು ಪ್ರೀತಿಸಿದ ಗಂಡು ಬೇರೆ ಗಂಡಸರಿಂದ ತನ್ನ ಮೇಲೆ ಅತ್ಯಾಚಾರವಾದ ಸುದ್ದಿ ತಿಳಿದಾಗ ಹೇಗೆ ನಿರ್ಭಿಡೆಯಿಂದ ತನ್ನಿಂದ ದೂರ ಸಿಡಿದು ನಿಂತಿದ್ದ? ಕಾಸಿನಾತನೊಬ್ಬ ಎಲ್ಲರಂತೆಯೇ ಸಾಧಾರಣ ಗಂಡಸು ಎಂಬ ಅರಿವಾದಾಗ ಅವಳೆದೆ ದುಃಖದ ಹೊಂಡ. ಹಂಗಾದ್ರ ಕಾಸಿ ಇನಮ್ಯಾಲ ನನ್‌ಬಲ್ಲಿ ಬರಂಗಿಲ್ಲ? ಅವನ ಭೇಟಿನೇ ಆಗಂಗಿಲ್ಲೇನು ನನಗ?

ಪ್ರಶ್ನೆಗಳ ಬಣಿವೆಯಿಂದ ಒಂದೊಂದೇ ಸೂಡುಗಳು ಹೊರ ಬರತೊಡಗಿದುವು. ಅಷ್ಟರಲ್ಲಿ ಬಂದ ಮಹಿಳಾ ಕೈದಿಯೊಬ್ಬಳು ಅವಳ ತಲೆ ಬಾಚತೊಡಗಿದಳು.

ತಾಸಿನಲ್ಲಿ ಲಚ್ಚಿಯ ಸಿಂಗಾರ ಮುಗಿಯಿತು. ತವರು ಮನೆಯವರು ಮಗಳನ್ನು ಸಿಂಗರಿಸಿ ಅತ್ತೆಯ ಮನೆಗೆ ಕಳಿಸಿಕೊಡುವಂತಿತ್ತು ಸನ್ನಿವೇಶ. ರಂಗವ್ವ ಬಂದು ಅವಳ ತಲೆ, ಬೆನ್ನು ಸವರಿದಳು. ಉಳಿದೆಲ್ಲ ಹೆಣ್ಣು ಕೈದಿಗಳು ಲಚ್ಚಿಯನ್ನು ಘೇರಾಯಿಸಿದರು. ಎಲ್ಲರೂ ಕೈ ಜೋಡಿಸಿದರು. ಅವಳ ಕೈ ಹಿಡಿದರು, ಮೈದಡವಿದರು, ಕೆನ್ನೆ ತೀಡಿದರು.

"ಲಚ್ಚೀ...... ಹೋಗವ್ವಾ, ಮತ್ತೆಂದೂ ಈ ನರಕಕ್ಕ ಬರಬ್ಯಾಡ ತಂಗೀ... ದೇವರು ನಿನ್ ಬಾಳ್ಯಾ ಹಸನ ಮಾಡ್ಲಿ."

ಹೆಂಗಸರ ಕಣ್ಣುಗಳು ನೆನೆದುವು. ಲಚ್ಚಿ ಕಣ್ಣೆತ್ತಿ ಎಲ್ಲರನ್ನೂ ಒಮ್ಮೆ ನೋಡಿದಳು. ಅವಳ ಕಣ್ಣುಗಳಿಂದ ನೀರುಕ್ಕಿತು. ಎಲ್ಲರನ್ನೂ ಅಪ್ಪಿ ಬೇರ್ಪಟ್ಟು ರಂಗವ್ವನ ಕಾಲಿಗೆರಗಿದಳು.

ಅರಿತೋ ಅರಿಯದೆಯೋ ಯಾವುದೋ ತಪ್ಪು ಮಾಡಿ ಸಿಕ್ಕಿಹಾಕಿಕೊಂಡು ಸೆರೆಮನೆ ಸೇರಿದ ನತದೃಷ್ಟ ಹೆಣ್ಣುಗಳವು. ಅಕ್ಕ ತಂಗಿ, ತಾಯಿ ತಂದೆ, ಗಂಡ ಮಕ್ಕಳು ಎಲ್ಲರಿಂದಲೂ ದೂರಾಗಿ, ಎಲ್ಲರ ಪ್ರೀತಿ ಮಮತೆಗಳಿಂದ ವಂಚಿತರಾಗಿ ಜೈಲು ಸೇರಿ ತಮ್ಮ ಬಾಳಿನ ದಿನಗಳನ್ನು ಸವೆಯಿಸುತ್ತಿರುವ ಜೀವಿಗಳವು. ಅಲ್ಲಿ ಬಂದವರಿಂದಲೇ ಪರಸ್ಪರ ಪ್ರೀತಿ, ಮಮತೆಗಳನ್ನು ಕೊಟ್ಟುಕೊಂಡು

ದಿನಗಳೆಯುತ್ತಿರುವ ಪಾಪದ ಹೆಂಗಸರವರು. ಇಂದು ಲಚ್ಚಿಗೆ ಬಿಡುಗಡೆ ಎಂದು ತಿಳಿದಾಗ ಸಂತಸವಾಗಿದ್ದರೂ ಅವಳು ತಮ್ಮಿಂದ ಅಗಲುತ್ತಾಳಲ್ಲ ಎಂಬ ದುಃಖವೂ ಅವರಿಗೆ ಆಗದಿರಲಿಲ್ಲ.

ರಂಗವ್ವ ಲಚ್ಚಿಯನ್ನು ಎದೆಗೊತ್ತಿಕೊಂಡು ಕಂಬನಿ ಸುರಿಸಿದಳು.

"ಅಳಬಾರ್ದವ್ವಾ ಲಚ್ಚೀ... ದೇವರು ನಿನಗ ಎಲ್ಲಾ ಛಲೋದು ಮಾಡ್ತಾನ."

"ನಾ ಒಲ್ಲೆವ್ವೋ... ಇಲ್ಲಿಂದ ನಾ ಹೊರಗ ಹೋಗಂಗಿಲ್ಲ...."

ಲಚ್ಚಿ ಜೈಲಿನಿಂದ ಬಂದಾಗಿನಿಂದ ಇಲ್ಲಿಯವರೆಗೂ ಆಡಿದ ಮೊದಲ ಮತ್ತು ಕೊನೆಯ ಮಾತು ಇದೇ. ಈ ಮಾತು ಕೇಳಿ ಎಲ್ಲರೂ ದಂಗಾದರು. ಎಂಥ ಹುಚ್ಚಿ ಲಚ್ಚಿ! ಎಲ್ಲ ಕೈದಿಗಳೂ ಸೆರೆಮನೆಯಿಂದ ಹೊರಗೆ ಹೋಗಲು ತುದಿಗಾಲ ಮೇಲೆ ನಿಂತಿರುವಾಗ ಇವಳು ಇಲ್ಲಿಯೇ ಇರಲು ಬಯಸುತ್ತಾಳೆ!

ಆದರೆ ವೃದ್ಧೆ ರಂಗವ್ವಳಿಗೆ ಈ ಮಾತಿನ ಹಿಂದಿನ ದಟ್ಟವಾದ ಅಳಲಿನ ಅರ್ಥವಾಯಿತು. ಅವಳೆದೆ ಸೀಳಿಕೊಂಡು ನಿಟ್ಟುಸಿರೊಂದು ಹೊರ ನುಸುಳಿತು. ಮೃದುವಾಗಿ ಅವಳ ಬೆನ್ನು ಚಪ್ಪರಿಸಿ ನಿಧಾನವಾಗಿ ನುಡಿದಳು.

"ಧೈರ್ಯ ಬಿಡಬಾರ್ದು ಮಗಾ... ಈ ಸಂಸಾರಕ್ಕ ತಲಿಕೊಟ್ಟ ಮ್ಯಾಲ ಆಮ ಬಡೀತಾದಂತ ಅಂಜಬಾರ್ದು ನಮ್ಮವ್ವಾ...."

ಮತ್ತೆ ಜವಾನ ಕರೆಯಲು ಬಂದ.

ರಂಗವ್ವ ಲಚ್ಚಿಯನ್ನು ಕರೆದುಕೊಂಡು ಹೊರಟಳು. ಜೈಲರ್‌ನಿಗೆ ವಂದಿಸಿದ ಲಚ್ಚಿ ಕೈ ಜೋಡಿಸಿ ನುಡಿದಳು.

"ನನಗ್ಯಾರೂ ಇಲ್ರಿ ಸಾಬ್ರೇ.... ನಾ ಹುಟ್ಟಿಂದ ಹಿಡ್ದು ಪರದೇಶಿ ಹೀನಿ. ಈಗ ನಾ ಎಲ್ಲಿಗಿ ಹೋಗ್ಲಿರಿಯಪ್ಪಾ... ನಾ ಇಲ್ಲೇ ಇರ್ತೀನ್ರಿ....." ಎನ್ನುತ್ತ ಹೃದಯ ಕಿತ್ತು ಬರುವಂತೆ ಅಳತೊಡಗಿದಳು. ಸಾಹೇಬ್ರು ಕಣ್ಣೆತ್ತಿ ರಂಗವ್ವನನ್ನು ನೋಡಿದರು.

"ಹೋಯಿಂದ್ರಿ ಬಾಬಾ..... ಆಕಿಗಿ ಈ ದುನಿಯಾದಾಗ ಯಾರೂ ಇಲ್ಲಂತ್ರಿ, ರಿಮಾಂಡ ಹೋಮದಾಗ ಸೇರ್ಸಿಬಿಡ್ರಿಯಪ್ಪಾ ಈಕಿಗಿ."

ರಂಗವ್ವನ ಶಿಫಾರಸ್ಸು. ಜೈಲರ್ ಮತ್ತೆ ಕಾಗದದಲ್ಲಿ ಏನೇನೋ ಗೀಚಿದ. ಲಚ್ಚಿಯ ಹೆಬ್ಬೆರಳಿಗೆ ಮಸಿ ಸವರಿ ಕಾಗದದ ಮೇಲೆ ಒತ್ತಿಸಿದ ಜವಾನನನ್ನು ಕರೆದು,

"ವ್ಯಾನ್‌ನಲ್ಲಿ ಇವಳನ್ನೊಯ್ದು ಕೋರ್ಟಿಗೆ ಹಾಜರಪಡಿಸು. ಈ ಕಾಗದದ ಮೇಲೆ ದೊಡ್ಡ ಸಾಹೇಬರ ಸಹಿ ಮಾಡಿಸಿಕೊಂಡು ಇವಳನ್ನು "ಸ್ತ್ರೀನಿಕೇತನ"ಕ್ಕೆ ದಾಖಲ ಮಾಡಿ ರಸೀದಿ ತೆಗೆದುಕೊಂಡು ಬಾ" ಅಪ್ಪಣೆಯಿತ್ತನು.

ಲಚ್ಚಿ ರಂಗವ್ವನ ಆದೇಶದ ಮೇರೆಗೆ ಸೆರೆಮನೆಯ ಸಮವಸ್ತ್ರದ ಸೀರೆ ರವಕೆ ಕಳಚಿ ತನ್ನ ಹಿಂದಿನ ಸೀರೆ ಕುಪ್ಪಸಗಳನ್ನುಟ್ಟು ಹೊರಬಂದಳು.

ಅವಳನ್ನು ಹೊರಹಾಕಿ ಜೈಲಿನ ಕೋವಿಧಾರಿ ಜವಾನರು ಬಾಗಿಲು ಮುಚ್ಚಿಕೊಂಡರು. ಹೊರಗೆ ಬಂದು ಹೊರಗಿನ ಗಾಳಿ ಕುಡಿದವಳು ದೂರದಲ್ಲಿಯ ಗಿಡಮರಗಳ ಕೆಳಗೆ ಆಕಡೆ ಈಕಡೆಗೆ ಅರಸುನೋಟ ಬೀರಿದಳು. ಅವಳ ಕಣ್ಣುಗಳಿಗೆ ನಿರಾಸೆ ಧುತ್ತೆಂದು ರಾಚಿತು. ಕಾಸಿನಾತನ ಮುಖ ಎಲ್ಲಿಯೂ ಕಾಣಿಸಲಿಲ್ಲ. ಅವಳ ಹೃದಯ ಕೆಳಗೆ ತಳಕಾಣದ ಪ್ರಪಾತಕ್ಕೆ ಅಪ್ಪಳಿಸಿ ಛಿದ್ರವಿಚ್ಛಿದ್ರವಾಯಿತು.

"ಹೂಂ.... ನಡಿ ಮೋಟರದಾಗ ಕೂಡು."

ಪೇದೆ ಅವಳನ್ನು ತಿವಿದು ಹೇಳಿದ. ಅವಳು ವಾಹನ ಹತ್ತಿದಳು.

ಸೆರೆಮನೆಯಿಂದ ಅವಳನ್ನು ಕೋರ್ಟಿನಲ್ಲಿ ಹಾಜರಪಡಿಸಿ ನಂತರ "ಸ್ತ್ರೀನಿಕೇತನ"ಕ್ಕೆ ತಂದು ಎಸೆಯಲಾಯಿತು.

ಪೋಲೀಸ ಸ್ಟೇಶನ್.... ಸೆರೆಮನೆ.... ಸ್ತ್ರೀನಿಕೇತನ ಒಂದರಿಂದ ಇನ್ನೊಂದಕ್ಕೆ, ಇನ್ನೊಂದರಿಂದ ಮತ್ತೊಂದು ಪ್ರಪಾತಗಳೆಡೆಗೆ ಬದುಕು ಅವಳನ್ನು ರಬ್ಬರ್ ಚೆಂಡಿನಂತೆ ಎಸೆಯತೊಡಗಿತು. ವಿಧಿಯ ಆಟದ ಚೆಂಡು ಅವಳು. ನರ್ತಕಿಯ ಕಾಲಿನ ಗೆಜ್ಜೆಯಂತೆ ಅವಳು ಒಂದು ಕಾಲಿನಿಂದ ಇನ್ನೊಂದಕ್ಕೆ ಬದಲಾಯಿಸತೊಡಗಿದಳು. ಹಳ್ಳಿಯ ಅಮಾಯಕ ಮುಗ್ಧ ಬಾಲೆಯ ಮೇಲೆ ವಿಧಿಯ ಕ್ರೌರ್ಯದ ಅಟ್ಟಹಾಸ.

ಸ್ತ್ರೀನಿಕೇತನದಲ್ಲಿ ಲಚ್ಚಿಯ ಬಾಳಪುಟಗಳು ಮತ್ತೆ ತೆರೆಯಲ್ಪಟ್ಟುವು. ಇಂಥ ಕುರೂಪವಾದ, ದುರ್ದೈವದಿಂದ ವಿಕೃತಗೊಂಡ ಆಳಲನ್ನು ಕೊಟ್ಟಿದ್ದ ದೇವರು ಅವಳಿಗೆ ಚೆಲುವಿನ ಮೈ ಮುಖ ಕೊಟ್ಟು ಅನ್ಯಾಯವೆಸಗಿದ್ದ. ಮುಖವೂ ಕುರೂಪದ್ದಾಗಿದ್ದಿದ್ದರೆ ಇಂಥ ತೀವ್ರ ಯಾತನೆಯ ಪರಿಧಿಯಲ್ಲಿ ನರಳ ಬೇಕಾಗಿರಲಿಲ್ಲವೋ ಏನೋ.....

"ಸ್ತ್ರೀನಿಕೇತನ"ದಲ್ಲಿ ಆಶ್ರಯ ಪಡೆಯುವ ಹೆಂಗಸರು ಅನಾಥೆಯರು, ದಾರಿ ತಪ್ಪಿದವರು, ಬದುಕಿನ ಸರಿದಾರಿ ಮರೆತವರು, ಮಕ್ಕಳೊಂದಿಗೆ ಗಂಡನ

ದಬ್ಬಾಳಿಕೆಗೆ ನೊಂದು ಬೆಂದು ಬಂದು ಸೇರಿದವರು, ಬಾಳಿನ ನೋವುಂಡೂ ಉಂಡೂ ಅರೆಮರೆ ತಲೆಕೆಟ್ಟಂತಹ ವಿಧವೆಯರು, ಹರೆಯದ ಕನ್ನೆಯರು, ಪರಿತ್ಯಕ್ತೆಯರು.

"ಸ್ತ್ರೀನಿಕೇತನ"ದ ಸೂಪರಿಂಟೆಂಡೆಂಟ್ ಬಿಳಿ ಮೈಯ, ಚಂಚಲ ಕಣ್ಣುಗಳ, ಕಾನ್ವೆಂಟಿನಲ್ಲಿಯೇ ಓದಿದ, "ಸ್ತ್ರೀನಿಕೇತನ"ದ ಮಹಿಳೆಯರೊಂದಿಗೂ ಸಹ ಇಂಗ್ಲಿಷ್‌ನಲ್ಲಿಯೇ ಮಾತಾಡುತ್ತ ಜೋರುಮಾಡುವ ಭಾರತೀಯ ಹೆಣ್ಣು. ವಿದೇಶಿ ಸಂಸ್ಕೃತ ಸಂಸ್ಕಾರದಲ್ಲಿ ಅಡಿಯಿಂದ ಮುಡಿಯವರೆಗೂ ನೆನೆದು ನಿಂತ ಸ್ವದೇಶಿ ಹೆಂಗಸು.

ಹೊಲಿಗೆ, ಕಸೂತಿ, ಓದು ಅಂತ ಸರ್ಕಾರ ಅನಾಥ ಮಹಿಳೆಯರಿಗಾಗಿ ಬೇರೆಲ್ಲ ವ್ಯವಸ್ಥೆ ಮಾಡಿದ್ದರೂ ಅದರ ನಿಜವಾದ ಪ್ರಯೋಜನ ಯಾರಿಗೋ ಏನೋ. ಬಾಳಿನಲ್ಲಿಯ ವಿಷ ಕುಡಿದು, ನರಳಿ, ಸೋತು ಬಂದ ಹೆಂಗಸರಿಗೆ ಇಲ್ಲಿ ರೊಟ್ಟಿ ಬಟ್ಟೆ ದೊರೆಯುತ್ತಿತ್ತಾದರೂ ಸಾಂತ್ವನದ, ಕರುಣೆಯ, ಮಮತೆಯ ಒಂದು ನುಡಿ ಯಾರಿಂದಲೂ ಸಿಗುವುದು ಲಚ್ಚಿ ಬಂದ ದಿನಗಳಲ್ಲಿ ಸಾಧ್ಯವಿರಲಿಲ್ಲ.

ಲಚ್ಚಿಯು ಹೆಸರನ್ನು ರಿಜಿಸ್ಟರ್‌ನಲ್ಲಿ ನೋಂದಾಯಿಸಿಕೊಳ್ಳುತ್ತ "ಸ್ತ್ರೀನಿಕೇತನ"ದ ಒಡತಿ ಅವಳನ್ನು ಉದ್ದಕ್ಕೂ ಅಳೆಯುವವಳಂತೆ ಹದ್ದಿನ ನೋಟ ಬೀರಿದಳು. ತಾನು ಖರೀದಿಸಿದ ಕುರಿಯ ಮೈ ಎಷ್ಟು ಕೆ.ಜಿ. ಖಂಡ ಕೊಡಬಹುದು ಅಂತ ಕಟುಕ ನೋಟ ಆ ಮೇಲ್ವಿಚಾರಕಿಯದು. ಲಚ್ಚಿಯ ಮುಖದ ಅಂದವನ್ನು ದಿಟ್ಟಿಸುತ್ತ ದಿಟ್ಟಿಸುತ್ತ ಅವಳ ಬಣ್ಣ ಬಳಿದ ತುಟಿಗಳ ಮೂಲೆಯಲ್ಲೊಂದು ಕಿರುನಗೆ ಮೂಡಿ ನಿಂತಿತು.

* * * *

ಲಚ್ಚಿ "ಸ್ತ್ರೀನಿಕೇತನ" ಸೇರಿ ವಾರ ಉರುಳಿತು. "ಸ್ತ್ರೀನಿಕೇತನ"ದ ಮೇಲ್ವಿಚಾರಕಿಯನ್ನು ನೋಡಿದರೆಯೇ ಲಚ್ಚಿ ಹೆದರಿ ಮುದುಡಿಕೊಳ್ಳುತ್ತಾಳೆ ಅವಳ. ಬಹಳಷ್ಟು ಇಂಗ್ಲಿಷ್ ಬೆರೆತ ಪಿಸಿ ಪಿಸಿ ಮಾತುಗಳು, ಹದ್ದಿನ ಕಣ್ಣಿನ ತೀಕ್ಷ್ಣ ನೋಟ, ಬಾಬ್ ಮಾಡಿದ ಕೂದಲು, ತುಂಬಿಬಣ್ಣ, ಮೈ ಕಾಣುವ ಪಾರದರ್ಶಕ ಉಡುಪುಗಳೆಲ್ಲವೂ ಲಚ್ಚಿಗೆ ಹೆದರಿಕೆ ಹುಟ್ಟಿಸುತ್ತಿದ್ದವು.

ಲಚ್ಚಿಯ ಕೇಸ್ ಹಿಸ್ಟರಿ ಮೇಲ್ವಿಚಾರಕಿಗೆ ತಿಳಿದಿತ್ತು. ಲಚ್ಚಿ ತಾನು ನಿರಪರಾಧಿಯೆಂದು ಹೇಳಿಕೊಳ್ಳುವ ಗೋಜಿಗೆ ಹೋಗಲಿಲ್ಲ. ಜೈಲಿನಲ್ಲಿರುವಂತೆ

ಇಲ್ಲಿಯೂ ಲಚ್ಚಿ ಮೌನ ಸಾಧಿಸಿದಳಾದರೂ ಇಲ್ಲಿಯ ಜನ ಅವಳ ಬಾಯಿ ಬಿಡಿಸಿದರು. "ಸ್ತ್ರೀನಿಕೇತನ" ಅಂದರೆ ಬರೀ ಹೆಣ್ಣುಮಕ್ಕಳೇ ಇರುವ ಸ್ಥಳ ಎಂದು ಸಮಾಧಾನದಿಂದಿದ್ದವಳ ಸಮಾಧಾನ ಬಹಳ ದಿನ ಉಳಿಯಲಿಲ್ಲ.

ಮೇಲ್ವಿಚಾರಕಿಯ ಚೇಂಬರ್‌ಗೆ ಹೊರಗಿನ ಯಾರು ಯಾರೋ ಆಫೀಸರ್‌ಗಳೆಂದು, ಸ್ನೇಹಿತರುಗಳೆಂದು ಬರುವ ಗಂಡಸರು ಬಹಳಷ್ಟಿದ್ದರು. ಅವರು ಬಂದಾಗಲೆಲ್ಲ ನೀರು, ಟೀ, ಅದೂ ಇದೂ ಅಂತ ಮೇಲ್ವಿಚಾರಕಿ ಲಚ್ಚಿಯನ್ನೇ ಆಫೀಸಿಗೆ ಕರೆಯುವುದು ಜಾಸ್ತಿಯಾಯಿತು.

"ನಾ ಒಲ್ಲ ಆಯೀ... ನೀನೇ ನೀರ ಒಯ್ದು ಕುಡು ಅವ್ರಿಗಿ. ನನಗ ಆ ಗಂಡಸರ ಮುಂದ ಹೋಗಲಕ ಅಂಜಿಕಿ ಬರ್‍ತದ."

ಅಲ್ಲಿಯ ಚಪರಾಸಿ ವೃದ್ಧೆ ನಿಂಗವ್ವನಿಗೆ ಒಂದು ದಿನ ಲಚ್ಚಿ ಹೇಳಿದಳು. ಅವಳ ಮಾತು ಕೇಳಿ "ಸ್ತ್ರೀನಿಕೇತನ"ದ ಅವಳ ಜೊತೆಗಾತಿಯರು ಕಿಸಿ ಕಿಸಿ ನಕ್ಕರು. ಕೆಲವರು ಏನೇನೋ ಸನ್ನೆ ಮಾಡಿದರು. ಲಚ್ಚಿಗೆ ಏನೂ ತಿಳಿಯಲಿಲ್ಲ.

"ನನ್ ಮುದಿ ಮಾರಿ ತಗೊಂಡು ಅವರೇನು ಮಾಡ್ತಾರವ್ವಾ ಲಚ್ಚಿ.... ನಿನಗೇ ಬಾ ಅಂತಾರಲ್ಲ ಬಾಯಿಯೋರು, ನೀನೇ ಹೋಗಿ ಕುಡು."

"ನನಗೇ ಯಾಕ ಬಾ ಅಂತ ಅಂತಾರ ಆಯೀ?" ಲಚ್ಚಿಯ ಮುಗ್ಧ ಪ್ರಶ್ನೆ.

"ನಿನಗ ತಿಳೆಂಗಿಲ್ಲೇನಗs ಲಚ್ಚಿ?"

ಮುದುಕಿ ಎಲೆಯಡಿಕೆ ಹಾಕಿಕೊಳ್ಳುತ್ತ ಕೇಳಿತು.

"ಉಹೂಂ.... ನಾ ಹೇಳಿ ಕೇಳಿ ಹಳ್ಳಿ ಊರಕ್ಕಿ. ನನಗ ಶಾರ ಪಟ್ಟಣದವರ ಸುದ್ದಿನೇ ಗೊತ್ತಿಲ್ಲರೀ. ನನಗ ಇವರ ಮಾತಗೋಳು, ತಿಳೆಂಗಿಲ್ಲ ಆಯೀ....."

"ಥ್ವಾಡೆ ದಿನಾ ನಿಂದ್ರು. ಎಲ್ಲಾ ತಿಳಕೋತ ಬರ್‍ತದ. ಇವರೂ ನಿನ್ಹ್ಹಂಗೇ ಇದ್ರು ಇಲ್ಲಿಗಿ ಬಂದಾಗ. ಈಗ ಎಟ್ಟರೇ ಹುಷಾರ ಆಗ್ಯಾರ ನೋಡು."

ನಿಂಗವ್ವ ಉಳಿದ ಹೆಂಗಸರನ್ನು ತೋರಿಸಿ ನುಡಿದಳು.

ನಿರ್ವಾಹವಿಲ್ಲದೆ ತಾನೇ ನೀರಿನ ತಂಬಿಗೆ, ಲೋಟ ತೆಗೆದುಕೊಂಡು ಲಚ್ಚಿ ಬಾಯಿ ಸಾಹೇಬರ ಬಾಗಿಲ ಬಳಿ ಹೋಗಿ ನಿಂತಳು.

"ಒಳಗ ಬಾ ಲಚ್ಚೀ...." ಅವರು ಕರೆದರು. ಇವಳು ಮೈ ತುಂಬ ಸೆರಗು ಹೊದ್ದು ಒಳಬಂದು ನಿಂತಳು.

"ಲೋಟಕ್ಕೆ ನೀರು ಹಾಕಿಕೊಂಡು ಎಲ್ಲರಿಗೂ. ಇವರೆಲ್ಲ ದೊಡ್ಡ ದೊಡ್ಡ ಆಫೀಸರ್ರು."

ನಿಕೇತನದ ಒಡತಿ ಪರಿಚಯಿಸಿ ಕಾಲಗೇಟ ಟೂತ್‌ಪೇಸ್ಟ್‌ನ ನಗೆ ಬೀರಿದಳು.

ಲಚ್ಚಿ ನಡುಗುವ ಕೈಗಳಿಂದ ಲೋಟಕ್ಕೆ ನೀರು ಸುರಿದು ಒಬ್ಬೊಬ್ಬರ ಮುಂದೆ ಹಿಡಿದಳು. ಅವರು ಅವಳ ಮುಖವನ್ನೇ ದಿಟ್ಟಿಸುತ್ತ ಲೋಟ ಹಿಡಿದ ಅವಳ ಕೈಯನ್ನೊತ್ತಿ ಲೋಟ ತೆಗೆದುಕೊಂಡರು.

"ಇವಳು ಮೊನ್ನೆ ಹೊಸದಾಗಿ ಬಂದು ನಮ್ಮಲ್ಲಿ ಸೇರಿಕೊಂಡಿರೋ ಹುಡುಗಿ. ಲಚ್ಚಿ ಏಕದಂ, ಹೊಸ ಹುಡುಗೀ... ತಾಜಾ ತಾಜಾ ಹೆಣ್ಣು."

ನಿಕೇತನದ ಮೇಲ್ವಿಚಾರಕಿ ಲಚ್ಚಿಯನ್ನು ಅವರಿಗೆ ಪರಿಚಯಿಸಿದಳು. ಇಂಥ ಹಲವಾರು ಸಂದರ್ಭಗಳು ಮೇಲಿಂದ ಮೇಲೆ ಬರತೊಡಗಿದುವು. ಲಚ್ಚಿ ಮೈಯನ್ನು ಹಿಡಿಯಾಗಿಸಿಕೊಂಡು ತಲೆತಗ್ಗಿಸಿ ಬಂದವರ ಮುಂದೈ ಕೈ ಜೋಡಿಸಿ ನಿಲ್ಲುತ್ತಾಳೆ. ಬಂದ ಗಂಡಸರ ಮುಂದೆಲ್ಲ ಮೇಲ್ವಿಚಾರಕಿ ತನ್ನನ್ನು ಈ ರೀತಿ ನಿಲ್ಲಿಸುವುದರ ಅರ್ಥ ಲಚ್ಚಿಗಿನ್ನೂ ಹೊಳೆದಿಲ್ಲ.

ಒಂದು ದಿನ ರಾತ್ರಿ ಊಟ ಮಾಡಿ ಮಲಗಿದ್ದರು. ಒಮ್ಮೆಲೇ ಯಾರೋ ಕರೆದಂತಾಗಿ ಲಚ್ಚಿ ಎದ್ದು ಕುಳಿತಳು.

"ಲಚ್ಚಿ ಏಳೇ.... ನಿನಗ ಬಾಯೋರು ಕರದಾರ." ನಿದ್ದೆಯಲ್ಲಿದ್ದ ಲಚ್ಚಿ ಧಡಕ್ಕನೇ ಎದ್ದು ಕುಳಿತಳು.

"ಹಿಂತಾ ರಾತರ್ಯಾಗ ಯಾಕ?"

"ಸುಮ್ಮಕ ನಡಿ ಬಾಯಿ ಮುಚಗೊಂಡು ಅವರು ಹೇಳ್ದಂಗ ಕೇಳು. ನಿನ್ ಸಂಗಾಟ ಹಿನಾ ಮೂರು ಮಂದಿ ಹೆಂಗಸರನೂ ಹರಾ."

ಲಚ್ಚಿಗೇನೂ ತಿಳಿಯಲಿಲ್ಲ. ಕಣ್ಣು ಹೊಸಕಿಕೊಳ್ಳುತ್ತ ಎದ್ದು ಬಂದಳು. ಮೊದಲೇ ಅಲ್ಲಿ ಅದೇ ನಿಕೇತನದ ಮೂರು ಹುಡುಗಿಯರು, ಅವಳ ಸಹ ಅನಾಥೆಯರು ನಿಂತಿದ್ದರು.

"ಲಚ್ಚೀ.... ನಮ್ಮ ಸ್ನೇಹಿತರು ನಿಮ್ಮನ್ನು ಕಳಿಸಲು ಹೇಳಿದ್ದಾರೆ. ಮೋಟಾರಿನಲ್ಲಿ ಕರೆದುಕೊಂಡು ಹೋಗಿ ಮತ್ತೆ ಇಲ್ಲಿಗೆ ತಂದು ಬಿಡ್ತಾರೆ. ಹೋಗಿ ಬರ್ರಿ."

ಮೇಲ್ವಿಚಾರಕಿಯ ಅಪ್ಪಣೆಯ ದನಿ. ನಾಲಿಗೆಗೆ ನುಗ್ಗಿದ ಸಾವಿರ ಪ್ರಶ್ನೆಗಳನ್ನು ಹಿಂದಕ್ಕೊತ್ತಿ ಲಚ್ಚಿ ಅವರೊಂದಿಗೆ ನಡೆದಳು. ಕಾವಲುಗಾರ ಚೆನ್ನಪ್ಪ ಕಬ್ಬಿಣದ ಗೇಟು ತೆರೆದ. ಹೊರಗೆ ಕತ್ತಲೆಗೆ ಹೊಂದಿಕೊಳ್ಳುವ ಬಣ್ಣದ ಜೀಪು ನಿಂತಿತ್ತು. ಇವರು ಒಳಗೆ ಕುಳಿತುಕೊಳ್ಳುವುದೇ ತಡ, ಡ್ರೈವರ್ ಗಾಡಿ ಚಲಾಯಿಸಿದ.

ಹದಿನೈದು ಇಪ್ಪತ್ತು ನಿಮಿಷಗಳ ಪ್ರಯಾಣದ ನಂತರ ಗಾಡಿ ಒಂದು ವಿಶಾಲ ಕಟ್ಟಡದ ಮುಂದೆ ಬಂದು ನಿಂತಿತು. ಡ್ರೈವರ್ ಇಳಿದು ಬಂದು ಹಿಂದಿನ ಬಾಗಿಲು ತೆರೆದ.

ನಾಲ್ಕೂ ಜನ ಕೆಳಗಿಳಿದರು. ಕಾವಲುಗಾರ ಅವರನ್ನು ಮೌನವಾಗಿ ಒಳಗೆ ಕರೆದುಕೊಂಡು ಹೋದ. ಒಂದೊಂದು ಕೋಣೆಯಲ್ಲಿ ಒಬ್ಬೊಬ್ಬರನ್ನು ಬಿಟ್ಟು ಬಾಗಿಲೆಳೆದುಕೊಂಡು ಹೊರಬಂದು ಕುಳಿತ.

ಲಚ್ಚಿ ರೂಮು ಹೊಕ್ಕು ನಿಂತವಳು ತತ್ತರಿಸಿದಳು. ವ್ಯಕ್ತಿಯೊಂದು ಸ್ವಿಚ್ ಅದುಮಿ ದೀಪ ಬೆಳಗಿಸಿತು. ಬಾಗಿಲು ಬೋಲ್ಟ್ ಮಾಡಿ ಬಂದು ಅವಳ ಕೈ ಹಿಡಿದೆಳೆಯಿತು.

ಅವನನ್ನು ಗುರುತಿಸುವುದು ಅವಳಿಗೆ ಕಷ್ಟವಾಗಲಿಲ್ಲ. ತನ್ನ ಬಾಯಿಜೀಯ ಆಫೀಸಿಗೆ ಬರುತ್ತಿದ್ದ ಗಂಡಸರಲ್ಲಿ ಅವನೂ ಒಬ್ಬನಾಗಿದ್ದ. ಅವಳು ಅವನನ್ನು ದಿಟ್ಟಿಸಿದಳು. ಅಚ್ಚ ಕಲ್ಲಿದ್ದಲಿನ ಬಣ್ಣದ ಅಕರಾಳ ವಿಕಾರಳ ಅಜಾನುಬಾಹು. ಪೊದೆ ಮೀಸೆ, ದಪ್ಪ ತುಟಿ, ಮೊಂಡು ಮೂಗು, ರಕ್ತ ಕಾರುವ ರಕ್ಕಸ ಕಣ್ಣುಗಳು.

ಅವಳು ಕಿಟಾರನೆ ಕಿರುಚಿ ದೂರ ಸರಿದಳು. ಅವನು ಕುಡಿದ ಅಮಲಿನಲ್ಲಿ ಗಹಗಹಿಸಿದ.

"ನಯಾ ನಯಾ ಪಂಛಿ ಹೈ ನಾ.... ಅದಕೇ ಗಾಬರಿ ಆಗಿದ್ದೀ... ನೀ ಗಾಬರಿ ಆಗಬೇಡಾ ಲಚ್ಚಿ. ನಾ ನಿನಗ ಪ್ಯಾರ ಕರತಾ.... ಬಾ... ನನ್‌ಬಲ್ಲಿ ಬಾ ಮೇರಿ ಜಾನ್."

ಅವನು ತೊದಲು ನುಡಿಯುತ್ತ ಅವಳನ್ನು ಕೈ ಹಿಡಿದು ಎಳೆದ. ಅವಳ ಮೈಮೇಲಿನ ಪ್ರಜ್ಞೆ ತಪ್ಪಿದಂತಾಗಿ ರೋಷ ಉಕ್ಕಿತು. ತತ್‌ಕ್ಷಣ ತನ್ನ ಕೈ ಬಿಡಿಸಿಕೊಂಡು ಅವನ ಕೆನ್ನೆಗೆ ಬೀಸಿ ಹೊಡೆದಳು.

"ಘಾಡಕವು ನನ್ ಹಾಟ್ಯಾ.... ಸಾಲಿ ಕಲ್ತು ದೊಡ್ಡ ಆಫೀಸರ ಆಗಿ ಹಿಂತಾ ಹಲ್ಕಾ ಧಂದಾ ಮಾಡ್ತ್ಯಾ?"

ಅವಳ ಒಂದೇ ಏಟಿಗೆ ಅಮಲಿನಲ್ಲಿದ್ದ ಆಫೀಸರ ತತ್ತರಿಸಿ ಮಂಚಕ್ಕೆ ಢಿಕ್ಕಿ ಹೊಡೆದ. ಮರುಕ್ಷಣ ಅವನು ಅಬ್ಬರಿಸಿದ.

"ಮಾದರಚೋದ ಲೌಡಿ.... ನನಗs.... ನನಗೇ ಹೊಡಿತ್ಯಾ.... ನಿನ್ ಹೆಣಾ ಹಾಕ್ತೀನಿ ಭೋಸುಡೀ." ಎನ್ನುತ್ತ ಅವಳ ಸೀರೆಗೆ ಕೈಯಿಕ್ಕಿ ರಭಸದಿಂದ ಎಳೆದ. ಸೀರೆ ಬಿಚ್ಚಿತು. ಅವರಿಬ್ಬರ ಜಗಳ ಕುಸ್ತಿಯಲ್ಲಿ ಅವಳ ರವಕೆ ಹರಿಯಿತು. ಅವನ ಬೂಟುಗಾಲಿನ ಹೊಡೆತ ಸೊಂಟಕ್ಕೆ ಬಿದ್ದಾಗ ಅವಳು ನೆಲಕಚ್ಚಿದಳು. ದನಿ ತೆಗೆದು ಅತ್ತಳು.

ಯಾರೂ ಸಹಾಯಕ್ಕೆ ಬರಲಿಲ್ಲ. ಊರ ಹೊರಗಿನ ಬಹುದೂರದ ನಿರ್ಜನ ಪ್ರದೇಶದಲ್ಲಿಯ ಒಂಟಿ ಬಂಗಲೆ ಅದು. ಅವಳ ಅಳು ಅರಣ್ಯ ರೋದನವಾಯಿತು. ಅರ್ಧ ಗಂಟೆಯಲ್ಲಿ ಅವಳು ಅವನ ಕಾಮಪಿಪಾಸೆಗೆ ಬಲಿಯಾಗಿ ಸೋತು ಬಿದ್ದಳು.

ಮತ್ತೆ ಹತ್ತು ನಿಮಿಷಗಳಲ್ಲಿ ಮತ್ತೊಬ್ಬ ಬಂದ, ಅನುಭವಿಸಿದ, ಬಿಟ್ಟು ಹೋದ. ಯಾರೂ ಅವಳ ಅಳುವಿಗೆ, ಬಿಕ್ಕಳಿಕೆಗಳಿಗೆ, ಕಣ್ಣೀರಿಗೆ ಬೆಲೆ ಕೊಡಲಿಲ್ಲ. ಅವಳ ಮೈಯನ್ನು ಉಪಯೋಗಿಸಿಕೊಂಡರು, ಬಿಟ್ಟು ಹೋದರು. ಅವಳ ಮನಸ್ಸಿನೊಂದಿಗೆ ಅವರಿಗೇನು ಸಂಬಂಧ?

ರಾತ್ರಿ ಬೆಳೆಯುತ್ತಿತ್ತು. ಸೌಧದಲ್ಲಿಯ ಕ್ಷೀಣ ಬೆಳಕು ಉಸಿರು ಬಿಗಿ ಹಿಡಿದಿತ್ತು. ಲಚ್ಚಿಯ ನರಳುವಿಕೆ ನಿಧಾನವಾಗಿ ಹೊರಗೆ ಕೇಳಿ ಬರುತ್ತಿತ್ತು.

"ನೀರು.... ನೀರು.... ನೀರೂ...."

ಲಚ್ಚಿ ನರಳಿದಳು. ಕ್ಷಣದ ನಂತರ ಆ ಕಟ್ಟಡದ ಕಾವಲುಗಾರ ವೃದ್ಧ ಮಲ್ಲಪ್ಪ ನೀರಿನ ಲೋಟ ಹಿಡಿದು ಅವಳ ರೂಮು ಪ್ರವೇಶಿಸಿದ.

ಅಂಗಾತ ಮಲಗಿ ನೀರಿಗಾಗಿ ಬಾಯಿ ಬಿಡುತ್ತಿದ್ದ ಬೆತ್ತಲೆ ಲಚ್ಚಿ. ಅವನು ಮಂಚದ ಮೇಲಿನ ಚಾದರನ್ನು ತಂದು ಅವಳ ಮೈಮೇಲೆ ಹೊದೆಸಿದ. ಅವಳ ತಲೆಯ ಬಳಿ ಕುಳಿತು ಮೃದುವಾಗಿ ಕರೆದ.

"ಎದ್ದು ಕೂಡ್ತಿಯೇನವ್ವಾ.... ನೀರ ತಂದೀನಿ."

"ಊಹೂಂ.... ಎಳ್ಳಕ್ಕ ಬರಂಗಿಲ್ಲಪ್ಪೋ.... ನನ್ ತೊಡಿ, ಟೊಂಕಾ ಎಲ್ಲಾ ಮುರ್ದ್ಹಾಂಗ ಆಗ್ಯಾದ. ಯಪ್ಪೋ ಊಂ.... ಯಪ್ಪೋ...."

ಅವಳು ಅಳತೊಡಗಿದಳು. ವೃದ್ಧ ಮಲ್ಲಪ್ಪ ಲೋಟ ಕೆಳಗಿಟ್ಟು ಮೆಲ್ಲನೆ ಅವಳ ಕತ್ತಿನ ಕೆಳಗೆ ಕೈಯಿಟ್ಟು ತಲೆಯೆತ್ತಿ ನೀರು ಕುಡಿಸಿದ.

ಅವಳು ಅವನೆಡೆಗೆ ದೀನತೆಯ, ಕೃತಜ್ಞತೆಯ ನೋಟ ಬೀರಿದಳು. ಎಲ್ಲಿಲ್ಲದ ದುಃಖ ವತ್ತರಿಸಿಕೊಂಡು ಬಂದಿತು. ಆ ಮುದುಕನ ಮುಖದಲ್ಲಿ ತನ್ನ ಸತ್ತ ತಂದೆ ಫಕೀರಪ್ಪನ ಮುಖ ಕಂಡಂತಾಗಿ ಅವನ ಭುಜಕ್ಕೆ ತಲೆಯಿಟ್ಟು ನಿರರ್ಗಳವಾಗಿ ಬಿಕ್ಕಳಿಸಿ ಅತ್ತಳು.

ಅವಳ ಅಳು ಹತೋಟಿಗೆ ಬರುವವರೆಗೂ ಅವನು ಸುಮ್ಮನಿದ್ದ. ನಂತರ ಅವಳೆಡೆಗೆ ತಿರುಗಿ,

"ಯವ್ವಾ.... ನೀ ಜರಾ ಎದ್ದು ಮಂಚದ ಮ್ಯಾಲ ಮಲಕೋ ತಂಗೀ... ಬೆಳಗಾನಾ ಈ ಪಾಲಿಶ್ ಫರಸಿ ಮ್ಯಾಲೇ, ಮೈಯಾಗ ಅರವೆ ಇಲ್ದೆ ಮಲಗಿದರ ಶೀತ ಏರ್ತದ ಮಗಾ...."

"ಅಂವಾ.... ಅಂವಾ... ಆ ಮನುಷ್ಯಾ...."

ಅವಳು ಹೆದರಿಕೆಯ ದನಿ ಹರಿಸಿದಳು. ಮಲ್ಲಪ್ಪ ಜೋರಾಗಿ ತಲೆ ಅಲ್ಲಾಡಿಸಿದ.

"ಈಗ ಅವರ್‍ಯಾರೂ ಇಲ್ಲವ್ವಾ.... ತಮ್ಮ ತಮ್ಮ ಮನೀಗಿ ಹ್ವಾದ್ರು. ಇದು 'ಡಾಕಬಂಗಲಾ' ಅದಾ. ನಾ ಇಲ್ಲಿ ಕಾವಲುಗಾರ. ಹೆಸರಿಗಿ ಮಾತರ ನಾ ಕಾವಲುಗಾರ ನನ್ನವ್ವಾ... ಯಾವ ಹೆಣ್ಣು ಮಗುವಿನ ಮರ್ಯಾದಿಗೂ ಕಾಯೋದು ನನ್ ಕೈಯಿಂದಾಗಿಲ್ಲ." ಮುದುಕ ಪ್ರಾಮಾಣಿಕವಾಗಿ ನಿಟ್ಟುಸಿರೆಳೆದ.

"ಯಪ್ಪಾ...."

"ನೀ ಈಗ ಮಾತಾಡಬ್ಯಾಡ ಮಗಾ... ನಡಿ. ಚಾದರ ಹೊದಗೊಂಡೇ ಮಂಚದ ಮ್ಯಾಲ ಮನಕೊ ನಡಿ. ನಾ ನಿನಾ ರಟ್ಟೆ ಹಿಡೀತಿನಂತ."

ಅವಳು ನರಳುತ್ತ ಎದ್ದು ಅವನ ಭುಜಕ್ಕಾತು ಹೆಜ್ಜೆ ಕಿತ್ತಿಟ್ಟು ಬಂದು ಮಂಚದ ಮೇಲೆ ವರಗಿದಳು. ಅವನು ಮತ್ತೊಂದು ಉಲ್ಲನ್ ಬೆಡ್‌ಶೀಟ್ ತಂದು ಅವಳ ಮೇಲೆ ಹೊದಿಸಿದ. ನಿಮಿಷದ ನಂತರ ಗಾಜಿನ ಲೋಟದಲ್ಲಿ ದ್ರವ ತಂದ,

"ಯವ್ವಾ... ಇದು ಕುಡಿ. ನಿದ್ದಿ ಬರ್ತದ. ಮೈ ಕೈ ನುಯ್ಯಾದೆಲ್ಲಾ ಕಮ್ಮ ಆಗ್ತದ" ಎಂದ. ಅವಳ ಕಂಗಳಿಂದ ಮತ್ತೆ ಕಂಬನಿಯ ಧಾರೆ ಉಕ್ಕಿತು.

"ಯಪ್ಪಾ..... ನನಗೊಂದೀಟು ಇಸಾ ಕುಡುಯಪ್ಪೋ ಕುಡೀತಿನಿ. ನನಗ ಈ ಬಾಳ್ಯಾ ಸಾಕು."

"ತಂಗೀ.... ಇದು ಇಸಾನೇ ಅದಾ ಅವ್ವಾ.... ಇಸಾನೇ ಇದು.. ಕುಡಿ ನಮ್ಮವ್ವಾ...."

ಅವಳು ಅದನ್ನು ಗಟಗಟನೆ ಕುಡಿದು ತಲೆ ಝಾಡಿಸಿದಳು. ಗಂಟಲಲ್ಲೆಲ್ಲ ಬೆಂಕಿಯಿಟ್ಟು ಪಾನೀಯ ಕೆಳಗಿಳಿಯಿತು.

ಮತ್ತೆ ಹತ್ತು ನಿಮಿಷಗಳಲ್ಲಿ ಅವಳಿಗೆ ನಿದ್ರೆಯ ಮಂಪರು. ನಿಧಾನವಾಗಿ ಅವಳು ನಿದ್ದೆಯ ಆಳಕ್ಕೆ ಸ್ವಲ್ಪ ಸ್ವಲ್ಪವಾಗಿ ಸದ್ದಿಲ್ಲದೆ ಜಾರತೊಡಗಿದಳು.

ಬೆಳಗಿನ ನಾಲ್ಕು ಗಂಟೆಯಿರಬಹುದು. ಅದೇ ಕಾವಲುಗಾರ ಬಂದು ಅವಳನ್ನೆಬ್ಬಿಸಿದ.

"ಯೇಳು ಮಗಾ.... ನಿಮಗ ಕರಿಲಕ್ಕ ಬಂದಾರ."

"ಯಾರು? ಯಾರು ಯಪ್ಪಾ?"

"ಡ್ರೈವರ್ ಬಂದಾನ. ನಿಮಗ ಕರ್‍ಕೊಂಡು ಹೋಗಿ ನಿಮ್ಮ ಆಶ್ರಮಕ್ಕೆ ಬಿಟ್ಟು ಬರ್‍ತಾನ."

"ನನ್ ಮೈ ಕೈಯೆಲ್ಲಾ ನುಯ್ಯಲಕತ್ತಾದ ಯಪ್ಪಾ. ಈಗ ನಾ ಬಲ್ಲೀ...."

"ಒಲ್ಲಂದರ ಬಿಡಂಗಿಲ್ಲ ಮಗಾ ಈ ಮಂದಿ. ನಿನ್ ಮನಸಿನ್ಯಾಗ ಇದ್ದದ್ದು ಒಂದೂ ಇಲ್ಲಿ ನಡಂಗಿಲ್ಲ ಮಗಾ... ಏಳು. ಎದ್ದು ನೀ ಸೀರಿ ಕುಬಸಾ ಉಟಗೋ. ನಾ ಹೊರಗಿರ್‍ತೀನಿ."

ಅವನು ಹೊರಟು ಹೋದ. ಅವಳು ತತ್ತರಿಸುತ್ತ ಎದ್ದು ಸೀರೆ ಸುತ್ತಿಕೊಂಡಳು. ಹರಿದ ರವಕೆ ಹಾಕಿಕೊಂಡಳು.

"ಆಯ್ತೇನು ಮಗಾ..."

ಅವನು ಹೊರಗಿನಿಂದಲೇ ಕೇಳಿದ.

"ಹೂಂ.... ಆಯ್ತು."

ಅವನು ಬಾಗಿಲು ತಳ್ಳಿ ಒಳಬಂದ.

"ನಡಿಯವ್ವಾ.... ನಿನ್ ಹೆಸರೇನು ತಂಗೀ...."

"ಲಚ್ಚೀ.... ಯಪ್ಪಾ.... ನೀ ನಮ್ಮಪ್ಪನ್ಹಂಗೆ ಕಾಣಸ್ತಿ. ಗಂಡಸಾದರನೂ ನೀ ಭಾಳ ಛಂದೊನ ಮನುಷ್ಯಾ ಇದ್ದಿಯಪಾ. ಎಲ್ಲಾ ಗಂಡಗೋಳು ನಿನ್ಹ್ಹಂಗೇ ಇದಿದ್ದರ...."

ಅವನು ಮೃದು ನಗೆ ನಕ್ಕು ಅವಳ ತಲೆ ಸವರಿದ. ಹೊರಗಿನಿಂದ ಜೀಪ್‌ನ ಹಾರ್ನ್ ದನಿ ಹೊರಡಿಸಿತು.

"ನಡೀ ಲಚ್ಚವ್ವಾ...."

ಅವನು ಅವಳೊಂದಿಗೆ ಹೊರಬಂದ.

ಲಚ್ಚಿ ಮತ್ತಿತರರನ್ನು ಹೊತ್ತ ಜೀಪ್ ರಸ್ತೆ ಅಳೆಯತೊಡಗಿತು ಅರ್ಧ ಗಂಟೆಯಲ್ಲಿ ಅದು 'ಸ್ತ್ರೀನಿಕೇತನ'ದ ಗೇಟ್ ಬಳಿ ನಿಂತು ನಿಟ್ಟುಸಿರೆಳೆಯಿತು.

ವಾಚಮನ್ ಚೆನ್ನಪ್ಪ ಎದ್ದು ಬಂದು ಬಾಗಿಲು ತೆರೆದ. ಎಲ್ಲರೂ ಕೆಳಗಿಳಿದರು. ಅವನು ಗೇಟ ಹಾಕಿ ಬೀಗ ಜಡಿದ.

ಜೀಪ್ ಹಿಂತಿರುಗಿತು. ಲಚ್ಚಿ ತೂರಾಡುತ್ತ ಬಂದು ತನ್ನ ಹಾಸಿಗೆಯ ಮೇಲೆ ಬಿದ್ದುಕೊಂಡಳು. ವ್ಯಂಗ್ಯ ನಗೆಯೊಂದು ಅವಳಧರಗಳ ಮೇಲೆ ತೇಲಿ ಬರುತ್ತಿರುವಂತೆಯೇ ಅವಳು ನಿದ್ದೆಯ ತೆಕ್ಕೆಗೆ ನುಸುಳಿದಳು.

'ಸ್ತ್ರೀನಿಕೇತನ'ದ ಬಾಗಿಲಲ್ಲಿ ನಿಂತು ಲಚ್ಚಿ ದೂರದವರೆಗೂ ದೃಷ್ಟಿ ಓಡಿಸಿದಳು. ಶರಣಬಸಪ್ಪನ ತುಂಬಿ ನಿಂತ ಕೆರೆ. ಬಹಮನಿ ಅರಸರು ಕಟ್ಟಿಸಿದ್ದ, ಈಗ ಹಾಳು ಬಿದ್ದ ಕೋಟೆಯ ಕಪ್ಪನೆಯ ಗೋಡೆ. ಅದಕ್ಕೊತ್ತಿ ನಿಂತ ಕೆಳಗಡೆಯ ಕಂದಕದಲ್ಲಿ, ಹರಿವ ನೀರಿನಲ್ಲಿ ನಿಬಿಡವಾಗಿರುವ ತಿಳಿನೀಲ ವರ್ಣದ ಹೂಗಳ ಸಮೂಹ.

ಗುಡಿಯಿಂದ ಮಾರ್ಕೆಟ್‌ಗೆ ತಿರುಗುವ ಜನ ತುಂಬಿದ, ಟಾಂಗಾ, ರಿಕ್ಷಾಗಳು, ಸೈಕಲ್ ಸವಾರರು, ಪಾದಚಾರಿಗಳು, ಸ್ಕೂಟರುಗಳು....

ಶರಣಬಸಪ್ಪನ ಗುಡಿಯಿಂದ ಹೊರಟ ರಸ್ತೆ ಕಂದಕ ಕೆರೆಗಳ ನಡುವೆ ತೂರಿ ಅಂಕು ಡೊಂಕಾಗಿ ಮಾರ್ಕೆಟ್‌ಗೆ ಬರುವಾಗ ಮೀನುಗಾರರ ನಿವಾಸ

ದಾಟಿ ಎಡಕ್ಕೆ ತಿರುಗಿ ಚಂದ್ರಹನುಮಾನ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಕವಲೊಡೆಯುತ್ತದೆ. ಮುಂದೆ ಹೋದರೆ ಕೋಟೆಯ ಹೆಬ್ಬಾಗಿಲು. ಅದರ ಮುಂದಿನ ವಿಶಾಲ ಮೈದಾನದಲ್ಲಿ ವಾರಕ್ಕೊಮ್ಮೆ ಶನಿವಾರ ಸಂತೆ ನೆರೆಯುತ್ತದೆ. ನಗರದ ಸುತ್ತಲಿನ ಹಳ್ಳಿಗಳಿಂದ ಜನ ಸಂತೆಗೆ ತಮ್ಮಲ್ಲಿದ್ದುದನ್ನು ಮಾರಲು, ಇಲ್ಲದುದನ್ನು ಕೊಳ್ಳಲು ಬರುತ್ತಿರುತ್ತಾರೆ.

ರಸ್ತೆ ಹಿಡಿದು ನೇರವಾಗಿ ನಡೆದು ಬಂದು ಬಲಕ್ಕೆ ಸರಿದ ದಾರಿಯ ಮೇಲೆ ತಿರುಗಿದ ಪ್ರೌಢ ವಯಸ್ಸಿನ ಹಸಿರು ಸೀರೆಯುಟ್ಟ ಹೆಂಗಸನ್ನು ಕಂಡು ಲಚ್ಚಿ ತಟಸ್ಥಳಾದಳು. 'ಸ್ತ್ರೀನಿಕೇತನ'ದ ಬಾಗಿಲು ದಾಟಿ ಹೊರಬಂದಳು. ಹತ್ತಿರದಿಂದಲೇ ಅಪರಿಚಿತ ಹೆಂಗಸು ನಡೆದು ಹೋಗುವಾಗ ಲಚ್ಚಿ ತಡೆಯದೆ ಕರೆದಳು.

"ಏಗವ್ವತ್ತಿ.... ಏಗವ್ವತ್ತಿ...." ತನ್ನ ಹೆಸರು ಕೇಳಿದ ಆ ಹೆಂಗಸು ನಿಂತು ತಲೆಯೆತ್ತಿದಳು. ಲಚ್ಚಿ ಅವಳೆಡೆಗೆ ತ್ವರಿತ ಗತಿಯಿಂದ ನಡೆದು ಬಂದಳು.

"ಏಗವ್ವತ್ತಿ.... ನನಗ ಖೂನಾ ಹಿಡೀಲಿಲ್ಲೇನೇ.... ನಾ ಹೀನಿ.... ನಾ ಹೊಲೇರ ಲಚ್ಚಿ. ಫಕೀರಪ್ಪನ ಮಗಳು...."

ಏಗವ್ವಳಿಗೆ ಈಗ ತಟ್ಟನೆ ನೆನಪಾಯಿತು.

"ಹೊಯಿಂದಲ್ಲೇ ಮಗಾ.... ವರ್ಸ ಅಗಲಕತ್ತಾದ ನಿನಗ ನೋಡಿ. ಈಗ ಎಲ್ಲಿದ್ದಿಯವ್ವಾ....?

"ಇಲ್ಲೇ. ಸರಕಾರದವ್ರು ನಮಗ ಇರಲಕ ಯವಸ್ಥಾ ಮಾಡ್ಯಾರ.... ಯಾರೂ ಇರಲಾರ್ದ ಪರದೇಶಿ ಹೆಂಗಸರಿಗಿ ಸರಕಾರ ನೋಡ್ಕೋತದ. ಹೊಟ್ಟಿಗೀ, ಬಟ್ಟೀಗಿ ಕುಡ್ತಾದ."

ಲಚ್ಚಿಯ ಕಣ್ಣಂಚು ನೆನೆದುವು. ಗಂಟಲ ನರ ಉಬ್ಬಿ ನಿಂತು ಅರೆಕ್ಷಣ ಮಾತಿಗೆ ಆತಂಕವೊಡ್ಡಿತು.

ಏಗವ್ವ ಲಚ್ಚಿಯ ತಲೆ ನೇವರಿಸಿದಳು. ಕಣ್ಣೊರಸಿದಳು. ಸಂತೈಸಿದಳು.

"ಅಳಬ್ಯಾಡ್ ಮಗಾ.... ಇಲ್ಲಿ ಬಾ... ಗಿಡದ್ ನೆಳ್ಳಾಗ ಕೂಡಾಮಿ."

ಇಬ್ಬರೂ ರಸ್ತೆ ಬದಿಯ ಜಾಲಿಯ ಮರದಡಿಯಲ್ಲಿ ಕುಳಿತರು. ಏಗವ್ವಳೇ ಮಾತೆಳೆದಳು.

"ಏನೇನೋ ನಡ್ದು ಹೋಯ್ತು ನಿನ್ ಬಾಳ್ಯಾದಾಗ ಲಚ್ಚಿ. ಎಲ್ಲ ಛಂದಿದ್ದರ ನೀ ಈಗ ಗಂಡನ ಮನ್ಯಾಗಿದ್ದು ಮಕ್ಕಳ ತಾಯಾಗಿ ಸಂಸಾರ ಮಾಡತಿದ್ದಿ. ಫಕೀರಪ್ಪ ಮಾಂವ ಜೀವ ಇದ್ದಾಗೇ ನಿನ್ ಮದಿ ಮಾಡಿ ಬಿಡಲಿಲ್ಲ ನೋಡು. ಅಂವ ಸತ್ತ. ನೀ ಪೂರಾ ಪರದೇಶಿ ಆದಿ.... ಏನು ಮಾಡಾದು ಬಿಡು. ಸಟವಿ ಯಾರ್‍ಯಾರ ಹಣಿಬರದಾಗ ಏನೇನು ಬರದಾಳೋ. ಹಣೀಬರ ಕೆಡಸಲಕ ಬರಂಗಿಲ್ಲವ್ವಾ ತಂಗೀ....."

"ಅತ್ತೀ.... ಕಾಸಿನಾತ ಹ್ಯಾಂಗ ಹನಾನೇ?" ಲಚ್ಚಿ ಕೇಳಿಯೇ ಬಿಟ್ಟಳು.

"ಯಾ ಕಾಸಿನಾತಂತೀ? ಕುಲಕರ್ಣಿ ಆಳಮಗಾಯೇನು?"

"ಹೂಂ.... ಹೂಂ...... ಅವನೇ...."

"ಅಂವಗೇನವ್ವ.... ಈಗ ನಾಕ ತಿಂಗಳ ಹಿಂದೇ ನರೋಣಿಹಳ್ಳಿ ಹೆಣ್ಣ ತಗದು ಮದಿಮಾಡ್ಕೊಂಡಾನ. ಕುಲಕರ್ಣಿ ಅವನ ತೆಲ್ಯಾಗ ಏನೇನು ತುಂಬದನೋ ಏನೋ.... ಈಗರೆ ಕುಲಕರ್ಣಿ ಖಾಸಾ ಮಗಾ ಆದ್ಹಂಗ ಅಗ್ಯಾನ ಕಾಸಿನಾತ."

ಏಕವ್ವನ ಮಾತುಗಳು ಲಚ್ಚಿಯ ಹೃದಯವನ್ನು ನೇರವಾಗಿ ಭೇದಿಸಿದುವು. ಎದೆ ವತ್ತಿ ಹಿಡಿದುಕೊಂಡ ಲಚ್ಚಿ ತುಟಿ ಕಚ್ಚಿದಳು. ಹೃದಯ ಸೀಳಿ ಬಂದ ಬೆಂಕಿ ಉಸಿರನ್ನು ಹೊರತಳ್ಳಿದಳು.

ಬಿಸಿಲು ಬಲಿಯಿತು. ಸ್ವಲ್ಪ ಹೊತ್ತು ಮೌನ ಅಸಹ್ಯತೆ ಪಸರಿಸಿತು.

"ಸಂತಿಗಿ ಬಂದಿದೇನು ಅತ್ತಿ?"

"ಹೊಯಿಂದು ಮಗಾ... ಹಿಂದ ಕಣಕಿ ಬಂಡಿಗೋಳು ಹೊಂಟಾವ. ಮಾರ್‍ಲಕ ತಂದೀನಿ. ಸಂತಿ ನೆರ್‍ಯಾ ಹೊತ್ತಾಯ್ತು ಲಚ್ಚಿ... ನಾ ಇನ್ನ ಬರ್‍ಲಾ?"

"ಹೋಗಿ ಬಾ ಅತ್ತಿ. ನಾನೂ ಹೋಗ್ತೀನಿ. ನಮ್ ಬಾಯೋರು ನೋಡದರಂದ್ರ ಬೈತಾರ. ಹಿಂಗೆಲ್ಲಾ ನಮಗ ಹೊರಗ ಬಿಡಂಗಿಲ್ಲ...."

ಇಬ್ಬರೂ ಎದ್ದು ನಿಂತರು. ಏಗವ್ವ ಸಂತೆಯ ದಾರಿ ಹಿಡಿದಳು. ಲಚ್ಚಿಯ ಎದೆಯಲ್ಲಿ ಕಾಸಿನಾತನ ರುದ್ರ ನರ್ತನ. ಅವಳು 'ಸ್ತ್ರೀನಿಕೇತನ'ದಲ್ಲಿ ಸೀಸದ ಹೆಜ್ಜೆ ಎತ್ತಿಟ್ಟಳು.

ಆರು ತಿಂಗಳ ನಂತರ ಒಂದು ದಿನ ಬೆಳಗಿನ ಹನ್ನೊಂದು ಗಂಟೆಗೆ 'ಸ್ತ್ರೀನಿಕೇತನ'ದ ಒಡತಿಯಿಂದ ಲಚ್ಚಿಗೆ ಕರೆ ಬಂದಿತು. ಲಚ್ಚಿ ಬಂದು ಆಫೀಸಿನಲ್ಲಿ

ನಿಂತಳು. ಈಗ ಅವಳಿಗೆ ಮೊದಲಿನಂತೆ ಆಫೀಸಿಗೆ ಬರಲು, ಗಂಡಸರನ್ನೆದುರಿಸಲು, ಮೇಲ್ವಿಚಾರಕಿಯ ಬಳಿ ನಿಲ್ಲಲು ಹೆದರಿಕೆಯೆನಿಸುತ್ತಿರಲಿಲ್ಲ. 'ಸ್ತ್ರೀನಿಕೇತನ'ದ ಎಲ್ಲ ರೀತಿಯ ರಿವಾಜುಗಳು ಈಗ ಅವಳ ಮೈಗೆ ಒಗ್ಗಿ ಹೋಗಿವೆ. ಅದರದೇ ಬಣ್ಣದಲ್ಲಿ ಲಚ್ಚಿ ನೆನೆದು ನಿಂತಿದ್ದಾಳೆ.

"ಲಚ್ಚೀ... ಇವನು ನಿನ್ನನ್ನು ಮದುವೆಯಾಗಲು ಮುಂದೆ ಬಂದಿದ್ದಾನೆ. ಬಸ್ಸಣ್ಣಿ ಅಂತ ಹೆಸರು. ಸರ್ಕಾರಿ ಆಫೀಸಿನಲ್ಲಿ ಚಪರಾಸಿ ಕೆಲಸ ಅದಾ ಇವನಿಗೆ. ನೀನು ಏನಂತೀಯ?" ಮೇಲ್ವಿಚಾರಕಿ ಕೇಳಿದಳು.

ಲಚ್ಚಿ ಅಚ್ಚರಿಯಿಂದ ಬಾಯಿ ತೆರೆದು ಕಣ್ಣರಳಿಸಿ ಎದುರಿಗೆ ಕುಳಿತಿದ್ದ ವ್ಯಕ್ತಿಯನ್ನು ದಿಟ್ಟಿಸಿದಳು. ಆಫೀಸ್ ಪ್ಯೂನ್‌ನ ಖಾಕಿ ಸಮವಸ್ತ್ರದಲ್ಲಿಯೇ ಹೆಣ್ಣು ನೋಡಲು ಬಂದಿತ್ತು ಅಸಾಮಿ.

ನಲವತ್ತರ ಹರೆಯ. ಕಪ್ಪಿನಲ್ಲಿ ಸುಣ್ಣ ಸಿಂಪಡಿಸಿದಂತೆ ಕಾಣುತ್ತಿರುವ ಬಿಳಿಕಪ್ಪು ತಲೆಗೂದಲು. ಒಳಸೇರಿದ್ದರೂ ಹೊಳಪುಳಿಸಿಕೊಂಡ ಸಣ್ಣ ಕಣ್ಣುಗಳು. ನೆಟ್ಟನೆಯ ಮೂಗು. ಉಬ್ಬು ಹಲ್ಲು, ಕೆಂಪಿಗೆ ತಿರುಗಿದ ಮೈಬಣ್ಣ.

ತನ್ನನ್ನೇ ತಿನ್ನುತ್ತಿರುವ ಅವನ ಕಣ್ಣುಗಳನ್ನು ಕಂಡು ಲಚ್ಚಿ ತಟ್ಟನೇ ಕೇಳಿದಳು.

"ಬಾಯೀ.... ಇವರಿಗೆ ಮದಿನೇ ಆಗಿಲ್ಲೇನ್ರಿ?" ಬಸ್ಸಣ್ಣಿನೇ ಉತ್ತರಿಸಿದ.

"ಆಗಿತ್ತು. ಮದಲಿನ ಹೆಣ್ತಿ ಸತ್ತಾಳ. ಮಕ್ಕಳಿಲ್ಲ."

"ಏನಂಬಾದು ನಾಳಿಗಿ ತಿಳಸ್ತೀನ್ರಿ ಬಾಯಿ" ಎಂದು ಲಚ್ಚಿ ಹೊರಬಂದಳು.

ಅಂದು ರಾತ್ರಿಯೆಲ್ಲಾ ಯಾರಿಂದಲೂ ಕರೆ ಬರಲಿಲ್ಲ. ಇವಳು ಚಿಂತಿಸಿದಳು. ದಿನವೂ ಹಲವು ಗಂಡುಗಳಿಗೆ ಮೈಯೊಪ್ಪಿಸುವುದಕ್ಕಿಂತ ಒಬ್ಬನೊಂದಿಗೇ ಮೌನವಾಗಿ ಬದುಕುವುದು ಚಂದ ಅಂತ ತೀರ್ಮಾನಕ್ಕೆ ಬಂದಳಾದರೂ ಕಾಸಿನಾತನ ನೆನಪಿನಿಂದ ಅವಳ ಹೃದಯ ಅತ್ತಿತ್ತು. ಅವನ ಮೇಲೆ ಸಿಟ್ಟೂ ಬಂತು. 'ಥೂ.... ಈ ಗಂಡು ಜಾತಿನೇ ಈಟು' ಅಂತಲೂ ಅಂದಳು.

ಮಾರನೆಯ ದಿನ ಮತ್ತೆ ಬಸ್ಸಣ್ಣಿ ಬಾಯಿ ಚಪ್ಪರಿಸುತ್ತ ಬಂದು ನಿಂತ. ನಗುನಗುತ್ತ ಹೊರಟು ಹೋದ.

ತಿಂಗಳ ನಂತರ ಲಚ್ಚಿ ಬಸ್ಸಣ್ಣಿಯ ಹೆಂಡತಿಯಾಗಿ 'ಸ್ತ್ರೀನಿಕೇತನ' ಬಿಟ್ಟು ಅವನ ಮನೆಗೆ ಬಂದಳು.

ಕೋಟೆ ಬದಿಯ ಸಾಲು ಮನೆಗಳಲ್ಲಿ ಒಂದು ದೊಡ್ಡ ಕೋಣೆಯನ್ನು ಬಸ್ಸಣ್ಣಿ ಬಾಡಿಗೆಗೆ ಹಿಡಿದಿದ್ದ. ಬಿದಿರ ತಡಿಕೆ ಕಟ್ಟಿ ಒಂದರಲ್ಲೇ ಎರಡು ಕೋಣೆ ಹುಟ್ಟಿಸಿದ್ದ.

ಹೂವು, ಹಣ್ಣು, ಪೇಡಾ ಮಿಠಾಯಿಗಳನ್ನು ಬಾಜಾರಿನಿಂದ ತಂದಿದ್ದ ಬಸ್ಸಣ್ಣಿ ಹೆಂಡತಿಯ ಕೈಯಲ್ಲಿಟ್ಟ.

"ಇವತ್ತ ಬಂದಿದ್ದಿ. ನಿನಗ ಅಡಗಿ ಮಾಡ್ಲಕ ಹಚ್ಚಂಗಿಲ್ಲ ನಾ. ಹೊಟೇಲ್‌ನಿಂದ ಎರ್ಡು ಊಟಾ ತರ್‍ತೀನಿ. ನೀ ಹೊಸಾ ಸೀರಿ ಉಟಗೊಂಡು ಸಿಂಗಾರ ಮಾಡ್ಕೋ" ಎಂದು ಹೇಳಿ ಮುಸಿ ಮುಸಿ ನಕ್ಕ. ಲಚ್ಚಿಗೆ ಗಂಡನ ಮಾತುಕತೆ ತಮಾಷೆ ಎನ್ನಿಸಿತು. ಪಾಪ ಎನಿಸಿತು. ಯಾವುದನ್ನೂ ತೋರಗೊಡದೆ ನಿರ್ವಿಕಾರ ಮುಖ ಅವಳದು.

ರಾತ್ರಿ ಬಸ್ಸಣ್ಣಿ ನಾಯಿಯಂತೆ ಇವಳ ಮೈ ನೆಕ್ಕಿದ. ಗಿಡುಗನಂತೆ ಅಪ್ಪಿ ಹಿಡಿದ. ಕಾಗೆಯಂತೆ ಕುಕ್ಕಿದ. ರಣಹದ್ದಿನಂತೆರಗಿ ಹಸಿಮಾಂಸ ಹಿಂಡಿದಾಗ ಲಚ್ಚಿ ಕಂಗಾಲಾಗಿ ನರಳಿದಳು. ಅವಳ ಕಣ್ಣುಗಳಿಂದಿಳಿದ ಉಪ್ಪು ನೀರಿಗಿ ನಾಲಿಗೆ ಹಾಕಿದವನು ಕೇಳಿದ.

"ಯಾಕ ಅಳಾಕ್ಹತ್ತೀದಿ ಲಚ್ಚೀ?" ಲಚ್ಚಿ ಏನೂ ಹೇಳಲಿಲ್ಲ. ಮಗ್ಗಲು ತಿರುವಿ ಮಲಗಿದಳು. ಅವನಿಗೆ ಆಯಾಸದ ನಿದ್ದೆ. ಮರುಕ್ಷಣ ಕಣ್ಣು ಮುಚ್ಚಿ ಗೊರಕೆ ಹೊಡೆಯತೊಡಗಿದ. ಅವನ ಗೊರಕೆ ಹೆಚ್ಚಿದಂತೆಲ್ಲ ಇವಳ ಕಣ್ಣೀರು ಉಕ್ಕಿತು.

ಯಾರ ಕಣ್ಣೀರು ಉಕ್ಕಿದರೇನು? ಸಮಯಕ್ಕೆ ಅದನ್ನೆಲ್ಲ ನೋಡುತ್ತ ಕುಳಿತಿರಲು ಕಣ್ಣಿದೆಯೆ? ಅದಕ್ಕಿರುವುದು ಬರೀ ಕಾಲುಗಳಷ್ಟೇ. ಕ್ಷಣವೂ ನಿಲ್ಲದ ನಿರಂತರ ಚಲನೆ ಅದಕ್ಕೆ.

ಲಚ್ಚಿ ಬಸ್ಸಣ್ಣಿಯರ ಸಂಸಾರ ಯಾವ ಏರಿಳಿತಗಳೂ ಇಲ್ಲದೆ ನಡೆಯತೊಡಗಿತು. ಬಸ್ಸಣ್ಣಿಗೆ ಹೆಂಡತಿಯನ್ನು ಸಂತೋಷಪಡಿಸುವ ಒಂದೇ ಒಂದು ಕಲೆ ತಿಳಿದಿತ್ತು. ಅದನ್ನು ಅವನು ದಿನವೂ ರಾತ್ರಿ ತಪ್ಪದೆ ಆಚರಣೆಯಲ್ಲಿ ತರುತ್ತಿದ್ದ.

ಆ ಕಲೆಯಿಂದ ಲಚ್ಚಿಗೆ ಅವನ ಮೇಲೆ ಪ್ರೀತಿ ಹೋಗಿ ತಿರಸ್ಕಾರ ಬೆಳೆಯಲಾರಂಭಿಸಿತು. ಬಸ್ಸಣ್ಣಿ ತನ್ನನ್ನು ಮದುವೆಯಾದದ್ದು ಇಷ್ಟಕ್ಕೆಯೇ ಎನಿಸುತ್ತಿತ್ತು. ಕಾಸಿನಾತನ ನೆನಪು ಬೇಡಬೇಡವೆಂದರೂ ಅಂತರ್ಯದ ಗೋರಿಯಿಂದ ದೆವ್ವದಂತೆ ಮೇಲೆದ್ದು ಬರುತ್ತದೆ. ಅವನ ಪ್ರೀತಿ, ಹಾವಭಾವ, ಭಂಗಿಗಳೆಲ್ಲ ಕಣ್ಣುಗಳ ಮುಂದೆ ಕಟ್ಟಿದಂತಾಗಿ ಕಣ್ಣುಗಳ ನೀರು ತುಂಬುತ್ತಿದ್ದವು. ಅವಳ ಕಲ್ಪನೆಗೂ ಬಾರದಂತೆ ಒಂದಾದ ನಂತರ ಒಂದರಂತೆ ಅದೆಷ್ಟು ಕೆಟ್ಟ ಘಟನೆಗಳು ನಡೆದು ಹೋಗಿದ್ದವು. ತಾನು ಕಾಸಿನಾತನೊಂದಿಗೆ ಕಟ್ಟಿದ್ದ ಸಾವಿರಾರು ಸುಂದರ ಕನಸುಗಳೆಲ್ಲ ಬೇರು ಕಳಚಿ ಬಿದ್ದು ನೆಲದ ಮಣ್ಣಿನಲ್ಲಿ ಹುದುಗಿ ಹೋದುವು.

ಕಾಸಿನಾತ ಎಂಥವನು? ನಿರಪರಾಧಿಯಾದವಳ ಕೈ ಬಿಟ್ಟ ಕಟುಕ. ಅವನಿಗೆ ತನ್ನ ಮೇಲೆ ಹಿಂದೆ ಇದ್ದುದು ಬರೀ ಮೈಯ ಬಯಕೆಯೇ ಹಾಗಾದರೆ? ಇರಲಿಕ್ಕಿಲ್ಲ ಪಿರೀತಿಯೂ ಇತ್ತು. ಆದರೆ ಆ ಪಿರೀತಿಯ ಎದೆಯಲ್ಲಿ ಕರುಣೆಯಿರಲಿಲ್ಲವೇ? ಎಂತ ಪಿರೀತಿ ಅದೂ.... ಎಂಬ ಹತ್ತು ಹದಿನಾರು ಅನಿಸಿಕೆಗಳೆಲ್ಲ ಅವಳೆದೆಯಲ್ಲಿ ಬೆಂಕಿ ಬಿತ್ತುತ್ತವೆ.

ಕಾಸಿನಾತ..... ಕುಲಕಣ್ಣಿ... ಪೋಲೀಸರು... "ಸ್ತ್ರೀನಿಕೇತನ"ದಲ್ಲಿದ್ದಾಗ ಸಂಪರ್ಕಕ್ಕೆ ಬಂದ ಹಲವಾರು ಗಂಡಸರು... ಗಂಡ ಎನ್ನಿಸಿಕೊಂಡ ಬಸ್ಸಣ್ಣಿ.

ಎಲ್ಲರೂ ಸಾಲು ಸಾಲಾಗಿ ಎದುರು ಬಂದು ನಿಂತು ದೆವ್ವದ ನಗೆ ನಗುತ್ತಾರೆ. ಅವಳನ್ನು ಅಧಃಪತನದ ಪ್ರಪಾತದಲ್ಲಿ ನೇರವಾಗಿ ನೂಕಿದ ಗಂಡುಗಳಿವು ಎಂಬುದು ನೆನಪಾದಾಗ ಗಂಡು ಜಾತಿಯ ಮೇಲೆಯೇ ಅವಳಿಗೆ ತಿರಸ್ಕಾರ, ಹೇಸಿಗೆ, ಜುಗುಪ್ಸೆ ಹುಟ್ಟುತ್ತದೆ.

ಈ ವಿಭಾಗಕ್ಕೆ ಬರಗಾಲ ಬರುತ್ತಲೇ ಇರುತ್ತದೆ. ಆದರೆ ಲಚ್ಚಿಯ ಕಣ್ಣುಗಳಿಗೆ ಮಾತ್ರ ನೀರಿನ ಬರ ಎಂಬುದೇ ಇಲ್ಲ. ಕುಳಿತರೆ, ನಿಂತರೆ, ಎಚ್ಚರವಿದ್ದರೆ, ಮಲಗಿದ್ದರೆ ಎಲ್ಲ ಸ್ಥಿತಿಯಲ್ಲಿಯೂ ಅವಳೊಂದು ಬೇಯುವ ಗೊಂಬೆಯಾಗತೊಡಗಿದಳು. ಕಂಬನಿ ಹರಿಸಿದರೆ ಬಿಸಿ, ನಿಟ್ಟುಸಿರೆಳೆದರೆ ಬಿಸಿ, ಮಾತಾಡಿದರೆ ಬಿಸಿಯಾಗಿ ಅವಳ ಅಂತರಾಳದಲ್ಲಿಯ ಬೆಂಕಿ ಹೊರಹೊಮ್ಮ ತೊಡಗಿತು.

ಜೊತೆಗೆ ಅವಳ ಆರೋಗ್ಯವೂ ಕ್ಷೀಣಿಸತೊಡಗಿತು. ಹೊಟ್ಟೆಯಲ್ಲಿ ತಳಮಳ, ನಿರುತ್ಸಾಹ, ವಾಂತಿ, ತಲೆಸುತ್ತು ಅಂತ ಅವಳು ಅನ್ನ ನೀರು ಬಿಟ್ಟು ಹಾಸಿಗೆ ಹಿಡಿದಳು.

ನಾಲ್ಕು ದಿನಗಳಾದರೂ ಹೆಂಡತಿ ಹಾಸಿಗೆ ಬಿಟ್ಟೇಳದಿದ್ದಾಗ ಬಸ್ಸಣ್ಣಿ ಅವಳನ್ನು ರಿಕ್ಷಾದಲ್ಲಿ ಕುಳ್ಳಿರಿಸಿಕೊಂಡು ಹತ್ತಿರದ ಡಾಕ್ಟರರಲ್ಲಿಗೆ ಕರೆದೊಯ್ದ. ಅವಳನ್ನು ಪರೀಕ್ಷಿಸಿದ ಡಾಕ್ಟರು ಬಸ್ಸಣ್ಣಿಗೆ ಸುದ್ದಿ ತಿಳಿಸಿದರು.

"ನಿನ್ನ ಹೆಂಡತಿ ಬಸುರಿ. ಬಯಕೆಯ ಕಾಟ ಇದು. ಮೈಯಲ್ಲಿ ಶಕ್ತಿಯಿಲ್ಲ. ಆರಾಮ ಬೇಕು" ಎಂದು ಔಷಧಿ ಬರೆದುಕೊಟ್ಟರು. ಬಸ್ಸಣ್ಣಿಗೆ ಖುಷಿಯಾಯಿತು. ಹೆಂಡತಿಯನ್ನು ಮನೆಗೆ ಕರೆತಂದವನು ಅವಳನ್ನಪ್ಪಿ ಮುದ್ದಿಸಿದ.

"ಇನ್ ಮ್ಯಾಲ ನೀ ಆರಾಮ ಮಾಡು ಲಚ್ಚಿ. ನಿನ್ ಹೊಟ್ಯಾಗ ನನ್ ಮಗಾ ಬೆಳಿಲಕ್ಹತ್ತಾನ. ನಿನಗೇನು ಬೇಕು ಹೇಳು. ಎಲ್ಲ ನಾ ತಂದು ಕುಡ್ತೀನಿ" ಎಂದು ನುಡಿದ.

ಅವಳ ಒಣಗಿದ ತುಟಿಗಳ ಮೇಲೆ ಶುಷ್ಕ ನಗೆ ಹಾದು ಬಂದಿತು. ನಾಲಿಗೆ ಏನನ್ನೂ ನುಡಿಯದೆ ತಟಸ್ಥವಾಯಿತು.

ರಾತ್ರಿ ಬರುವಾಗ ಬಸ್ಸಣ್ಣಿ ಏನೇನೋ ತಿಂಡಿಯ ಪೊಟ್ಟಣಗಳನ್ನು ಕೈ ಚೀಲದಲ್ಲಿ ತುಂಬಿಸಿಕೊಂಡು ಬಂದ. ಹೆಂಡತಿಯನ್ನೆಬ್ಬಿಸಿ ತಿನ್ನಿಸಿದ. ಅವಳು ಬೇಡ ಬೇಡವೆನ್ನುತ್ತ ಅಲ್ಪ ಸ್ವಲ್ಪ ತಿಂದಳು. ಕೆಲ ಸಮಯದಲ್ಲಿಯೇ ತಿಂದುದನ್ನೆಲ್ಲ ವಾಂತಿ ಮಾಡಿಕೊಂಡಳು.

ಸುಸ್ತಾಗಿ ಅವಳು ಹಾಸಿಗೆಯಲ್ಲೊರಗಿದಳು. ನಡು ರಾತ್ರಿಯ ಯಾವುದೋ ಹೊತ್ತಿನಲ್ಲಿ ಅವಳಿಗೆ ಅದೇ ತಾನೇ ನಿದ್ದೆ ಹತ್ತಿತ್ತು. ಬಸ್ಸಣ್ಣಿಯ ತೋಳುಗಳು ಹಾವಿನಂತೆ ಭುಸುಗುಟ್ಟುತ್ತ ಅವಳ ಕತ್ತು, ಎದೆ, ಮೊಲೆಗಳ ಮೇಲಾಡಿದಾಗ ಅವಳು ಕಣ್ತೆರೆದಳು. ಅವನು ಒರಟಾಗಿ ಅವಳ ಮೇಲೆ ಆಕ್ರಮಣ ಮಾಡಿದ.

"ಬ್ಯಾಡ ಬಸ್ಸಣ್ಣಿ.... ನನಗೀಗ ಇದೆಲ್ಲ ತಡಕೊಳ್ಳಿಕ್ಕಾಗಂಗಿಲ್ಲ.... ಡಾಕದರ ನನಗ ಆರಾಮ ಬೇಕಂತ ಅಂದಾರಲ್ಲ.... ಅಯ್ಯೋ....."

ಅವಳು ನರಳಿದಳು, ಅವನು ಬಿಡಲಿಲ್ಲ.

"ಇದಕ್ಕೆಲ್ಲಾ ಏನಾಗ್ತದೆ ಲಚ್ಚಿ. ಹಗಲತ್ತೆಲ್ಲ ಆರಾಮೇ ತಗೋತಿಯಲ್ಲ. ಈಗ ಸುಮ್ಮಿರು" ಅವಳು ನಿಶ್ಚೇಷ್ಟಿತಳಾದಳು. ಕೈಕಾಲು ಸಡಿಲ ಬಿಟ್ಟು ಉಸಿರಾಡುವ ಹೆಣವಾದಳು. ಕಣ್ಣುಗಳಲ್ಲಿ ಯಾತನೆ ಹೆಪ್ಪುಗಟ್ಟಿತು. ತುಟಿ ಕಚ್ಚಿ ಶತಸಾಹಸ ಪಟ್ಟು ತಡೆದರೂ ನರಳುವಿಕೆ ಹೊರ ನುಗ್ಗಿತು. ಅದನ್ನು ಅಳು ಹಿಂಬಾಲಿಸಿತು.

ಹಾಗೂ ಹೀಗೂ ನಾಲ್ಕು ತಿಂಗಳು ತುಂಬಿ ಲಚ್ಚಿಯ ಬಸಿರು ಐದರ ಹೊಸಿಲು ಪ್ರವೇಶಿಸಿತು. ಈಗ ಅವಳಿಗೆ ಬಯಕೆಯ ಕಿರಿಕಿರಿ ಇಲ್ಲದಿದ್ದರೂ ಇನ್ನುಳಿದ ಬೇರೆಲ್ಲ ಚಿಂತೆಗಳ ಬೆಟ್ಟ ಕರಗಿಲ್ಲ. ಅದು ಹೆಬ್ಬಂಡೆಗಳ ಬೆಟ್ಟ. ಬಂಡೆಗೆ ಕರಗುವುದು ಗೊತ್ತೆ? ಮಂಜಿನ ಬೆಟ್ಟವಾಗಿದ್ದರೆ ಅವಳ ಬಿಸಿಯುಸಿರಿಗೆ ಸ್ವಲ್ಪವಾದರೂ ಕರಗುತ್ತಿತ್ತೋ ಏನೋ....

ಗರ್ಭಿಣಿಯ ಮೈ ಮುಖ ತುಂಬಿಕೊಂಡವು. ಅಂತರ್ಯದ ಆಳಲನ್ನು ಹಿಂದಕ್ಕೊತ್ತಿ ಮೈ ಬೆವರಳಿಸಿತು. ಕುರಿ ಬಲಿತಷ್ಟೂ ಕಟುಕನಿಗೆ ಖುಷಿ. ಲಚ್ಚಿ ಮೈ ಕೈ ತುಂಬಿಕೊಂಡು ಚೆಲುವಾದಷ್ಟೂ ಬಸ್ಸಣ್ಣಿಗೆ ಖುಷಿ ಹೆಚ್ಚಿತು.

ಲಚ್ಚಿಯ ಚೆಲುವು ಮಳೆಗಾಲದ ಟಾರುರೋಡಿನ ಮೇಲೆ ಪೆಟ್ರೋಲು ಚೆಲ್ಲಿದಂತೆ. ಬಾನಂಗಳದಲ್ಲಿ ಬಿದ್ದು ಬಲಿತ ಕಾಮನ ಬಿಲ್ಲಿನಂತೆ.

ಬೇಸಿಗೆ ಕಾಲದಲ್ಲಿ ಮಳೆ ಬರುವುದಿಲ್ಲ ನಿಜ. ಆದರೆ ಉತ್ತರ ಕರ್ನಾಟಕದ ಬಯಲು ಸೀಮೆಯ ಈ ವಿಭಾಗದಲ್ಲಿ ಹಾಗಾಗುವುದಿಲ್ಲ. ಸರ್ಫ್ ಸೋಪ್ ಪೌಡರ್‌ನಲ್ಲಿ ಅದ್ದಿ ಒಗೆದು ಪ್ರೆಸ್ ಮಾಡಿ ಹರವಿಟ್ಟಂತಹ ಈ ಕಡೆಯ ಬೇಸಿಗೆಯ ತಿಳಿನೀಲ ಸ್ವಚ್ಛ ಆಗಸದಲ್ಲಿ ಒಮ್ಮಿಂದೊಮ್ಮೆಲೇ ಎಲ್ಲೆಲ್ಲಿಂದಲೋ ಕಪ್ಪು ಮೋಡಗಳು ಆನೆ ಹಿಂಡಿನಂತೆ ಗುಂಪು ಕಟ್ಟಿಕೊಂಡೇ ದಾಳಿಯಿಡುತ್ತವೆ. ಬಿರುಗಾಳಿ ಬೀಸುತ್ತದೆ. ಮೋಡಗಳ ಮೈಗೆ ಧೂಳಿನ ಪೌಡರಿನ ಲೇಪನ.

ಮರುಕ್ಷಣದಲ್ಲಿ ರಭಸದ ಮಳೆ ಹುಯ್ಯತೊಡಗುತ್ತದೆ. ಆಕಸ್ಮಿಕವಾಗಿ ಹೀಗೆ ಬರುವ ಮಳೆಗೆ 'ಅವಗಡ ಮಳಿ' ಎನ್ನುತ್ತಾರೆ ನಮ್ಮ ವಕ್ಕಲಿಗರು.

ಲಚ್ಚಿಯ ಬಾಳಿನಲ್ಲಿಯೂ ನಡೆಯುತ್ತ ಬಂದಿರುವುದು ಹೀಗೆಯೇ. ಸುಳಿವು ಸೂಚನೆ ಕೊಡದ ಮೋಡಗಳಂತೆ ಹಾದು ಬಂದು, ಅಬ್ಬರಿಸಿ ಮಳೆಯುಕ್ಕಿಸುವಂಥ ಘಟನೆಗಳೇ ಅವಳ ಬದುಕಿನಲ್ಲಿ ನಡೆದು ಬಂದಿದ್ದು. ಬವಣೆಗಳು ಯಾವಾಗಲೂ ಹೀಗೆಯೇ ಅಲ್ಲವೇ? ಸುಳಿವು ಸೂಚನೆ ಕೊಟ್ಟು, ನಾವು ಬರುತ್ತಿದ್ದೇವೆ ಹುಷಾರು ಎಂದೇನಾದರೂ ಹೇಳಿ ಅವು ಬರುವುದಿದೆಯೇ? ಲಚ್ಚಿಯ ಬದುಕೂ ಇದಕ್ಕೆ ಹೊರತಲ್ಲ.

ಅಂದು ಸಂಜೆ ಮನೆಗೆ ಬಂದ ಬಸ್ಸಣ್ಣಿ ಮುಖ ಉಬ್ಬಿಸಿಕೊಂಡು ಕಣ್ಣುಗಳಲ್ಲಿ ಬೆಂಕಿ ಕಾರುತ್ತಲೇ ಮನೆಯಲ್ಲಿ ಕಾಲಿಟ್ಟ. ಲಚ್ಚಿ ನೀರು ತಂದು ಕೊಟ್ಟರೆ ಅದನ್ನು ತೆಗೆದುಕೊಳ್ಳದೆ ತಾನೇ ನೇರವಾಗಿ ಬಚ್ಚಲಿಗೆ ನುಗ್ಗಿ ಕೈ ಕಾಲುಗಳಿಗೆ

ನೀರೆರೆದುಕೊಂಡ. ಅವಳು ಮಾಡಿಟ್ಟ ಚಹ ಕುಡಿಯದೆ ಅದನ್ನು ಬಚ್ಚಲಿಗೆ ಚೆಲ್ಲಿದ. ಬಂದು ಹಾಸಿಗೆಯ ಮೇಲೊರಗಿ ಭುಸುಗುಟ್ಟತೊಡಗಿದ.

ಲಚ್ಚಿಗೆ ಅವನನ್ನು ಮಾತಾಡಿಸುವ ಧೈರ್ಯವಾಗಲಿಲ್ಲ. ಮೆಲ್ಲಗೆ ಬಂದು ಅವನ ಬಳಿ ಕುಳಿತಳು.

"ಯಾಕ್ ಈಟು ಸಿಟ್ಟು ನನ್ ಮ್ಯಾಲ? ತೆಲಿ ನುಯ್ಯಲಕತ್ತಾದೇನು? ವತ್ತಲ್ಯಾ?" ಎನ್ನುತ್ತ ಅವನ ಹಣೆಯ ಮೇಲೆ ತನ್ನ ಹಸ್ತವಿಟ್ಟಳು. ಅವನು ಬಿಗಿಯಾಗಿ ಕಣ್ಣು ಮುಚ್ಚಿ ತೆರೆದ. ಮರುಕ್ಷಣ ಅವಳ ಹಸ್ತ ಸರಿಸಿ ಎದ್ದು ಕುಳಿತ.

"ಲಚ್ಚೀ...." ಕರೆದ. ಏನು ಎನ್ನುವಂತೆ ಅವಳು ಅವನ ಮುಖ ನೋಡಿದಳು.

"ಲಚ್ಚೀ.... ಒಂದ ಮಾತ ಕೇಳ್ತೀನಿ. ಖರೆ ಖರೆ ಹೇಳ್ಬೇಕು ನೀ....."

ಅವನದು ಅದೇ ಗುಡುಗಿನ ದನಿ.

"ಕೇಳು. ಖರೇ ಇದ್ದದ್ದೇ ಹೇಳ್ತೀನಿ. ಇವತ್ತಿನ ತನಕಾ ಸುಳ್ಳಾಡಿ ಗೊತ್ತಿಲ್ಲ ನನಗ"

"ನೀ..... ನೀ...... ಜೇಲಖಾನ್ಯಾಗ ಬಿದ್ದು ಬಂದಕ್ಕೆಂತ. ಖರೆ ಏನು?"

ಬಸ್ಸಣ್ಣಿ ಆರ್ಭಟಿಸಿದ. ಲಚ್ಚಿ ಗದಗುಟ್ಟಿ ನಡುಗಿದಳು.

"ಹೇಳು. ಯಾಕ ಸುಮ್ಮಕಾದಿ?"

"ಇದು.... ಇದೆಲ್ಲಾ ನಮ್ಮ 'ರಿಮಾಂಡ ಹೋಂ'ದ ಬಾಯೋರು ನಿನಗ ಹೇಳಿರಲಿಲ್ಲೇನು?" ಅವಳು ಹೆದರಿ ಹೆದರಿ ಕೇಳಿದಳು.

"ಆ ಭೋಸಡಿ ಇದೆಲ್ಲಾ ನನಗ ಮದಲೇ ಹೇಳಿದ್ದಳಂದ್ರ ನಾ ಯಾಕ ನಿನ್ ಸಂಗಾಟ ಮದಿ ಮಾಡ್ಕೋತಿದ್ದೆ? ಎಲ್ಲೋರೂ ಬದಮಾಸರು ನನಗ ಮುಚ್ಚಿಟ್ಟು ಕೊಲ್ಲಿದ್ರಿ. ಶ್ಯಾಲನ್ಯಾಗಿಟ್ಟು ಮಚ್ಚೀಲೆ ಹೊಡದ್ರಿ.... ನಿಮ್ಮವ್ವ ನಾ... ರಂಡಿ ಮಕ್ಕಳು...."

"...................."

"ಅದರಕಿನ್ನಾ ಮದಲ ಪೋಲೀಸ ಠಾಣ್ಯಾದಾಗ ಇದ್ದಿ ಅಲ್ಲ?"

"ಹೂಂ...." ಅವಳು ತಾನು ಮಾಡಲಾರದ ತಪ್ಪಿಗೆ ತಲೆ ತಗ್ಗಿಸಿದಳು. ಕಂಬನಿ ಮತ್ತೆ ಅವಳ ಕಣ್ಣುಗಳಿಂದ ದಳದಳನೆ ಕೆಳಗಿಳಿಯತೊಡಗಿದುವು.

"ಆದರ ಬಸ್ಸಣ್ಣಿ, ಇದರಾಗ ನಂದೇನೂ ತೆಪ್ಪಿಲ್ಲ...... ಆ ಬಾಯಿಯೋರು ಇದೆಲ್ಲಾ ನಿನಗ ಹೇಳಿರ್‍ಬೇಕು, ಇದೆಲ್ಲಾ ಕೇಳೀನೇ ನೀ ದೊಡ್ಡ ಮನಸ ಮಾಡಿ ನನ್ ಕೈಹಿಡ್ದಿದ್ದಿ ಅಂತೇ ನಾ ತಿಳ್ಕೊಂಡಿದ್ದೆ. ಇಲ್ದರ ನಾನೇ, ನಿಮ್ಮುಂದ ಎಲ್ಲಾ ಬಿಚ್ಚಿ ಹೇಳ್ತಿದ್ದೆ...."

"ಹುಂ....." ಅವನು ಹೂಂಕರಿಸಿದ.

"ನೋಡು ಲಚ್ಚೀ, ನನಗಿದೆಲ್ಲಾ ಪಸಂದ ಬರಂಗಿಲ್ಲ. ಯಾರ್‍ಯಾರ ಮಗ್ಗಲದಾಗೋ ಮನಕೊಂಡು ಬಂದಕ್ಕೀಗಿ ನನ್ ಮಗ್ಗಲದಾಗ ಇನ್ ಮ್ಯಾಲ್ ನಾ ಮನಗಸ ಗೋಮಂಗಿಲ್ಲ. ನಿನಗ ನಾ ನನ್ಹೆಣ್ತಿ ಅಂತ ಅನಾದನೂ ಇಲ್ಲ" ಎಂದವನೇ ಎದ್ದು ಅವಳ ಕೊರಳಲ್ಲಿಯ ತಾಳಿ ಹರಿದುಕೊಂಡ.

"ಬ್ಯಾಡ್.... ಬ್ಯಾಡ ಬಸ್ಸಣ್ಣೀ... ಬ್ಯಾಡಾ ತಾಳಿ ಹರ್‍ಕೋಬ್ಯಾಡಾ...." ಎನ್ನುತ್ತ ಅವನ ಪಾದದ ಮೇಲುರುಳಿದವಳನ್ನು ಝಾಡಿಸಿ ಒದ್ದು ಅವನು ದಾಪುಗಾಲು ಹಾಕುತ್ತ, ಸೊಂಟದ ಕೆಳಗಿನ ಬೈಗುಳಗಳನ್ನೆಲ್ಲ ಬೈಯುತ್ತ ಹೊರಟು ಹೋದ.

ಆ ರಾತ್ರಿ ಅವನು ಮನೆಗೆ ಬರಲಿಲ್ಲ. ಮಾರನೆಯ ಹಗಲೂ ರಾತ್ರಿಯೂ ಅವನ ಹಾಜರಿ ಸೊನ್ನೆ.

ಲಚ್ಚಿ ಗಾಬರಿಯಾದಳು. ಮೂರು ದಿನಗಳವರೆಗೂ ಬಾರದ ಗಂಡ ನಾಲ್ಕನೆಯ ದಿನ ರಾತ್ರಿ ಬಂದ. ಒಬ್ಬನೇ ಬರಲಿಲ್ಲ. ಜೊತೆಗೆ ಯಾವುದೋ ಒಂದು ಹೆಣ್ಣನ್ನೂ ಕಟ್ಟಿಕೊಂಡು ಬಂದ.

"ಮಲ್ಲೀ.... ಇದು ನನ್ ಮನಿ. ನೀ ಗೆಣತಿ ಆದ್ರೂ ನನ್ ಹೆಣ್ತಿ ಇದ್ದಾಂಗೇ. ನಿಯತ್ತಿನವಳು. ಆ ಹಾದರಗಿತ್ತಿಯನ್ನು ಹೊರಗ್ಹಾಕು." ಬಸ್ಸಣ್ಣಿ ಕುಡಿತದ ಅಮಲಿನಲ್ಲಿ ಒದರಾಡಿದ. ಅದನ್ನು ಕೇಳಿದ ಲಚ್ಚಿಯ ಹೊಟ್ಟೆಯಲ್ಲಿದ್ದ ಕರುಳು ಬಾಯಿಗೆ ಬಂದುವು. ಓಡಿ ಬಂದು ಬಸ್ಸಣ್ಣಿಯ ಪಾದದ ಬಳಿ ಬಿದ್ದು ಹೊರಳಾಡಿ ಅತ್ತಳು.

"ಆಕಿನೂ ಇರಲ್ಯಾಕ ಬಸ್ಸಣ್ಣೀ... ನಾನೂ ಇರ್‍ತೀನಿ. ನಿಮಗ ನಾ ಯಾವದಕ್ಕನೂ ಅಡ್ಡ ಬರಂಗಿಲ್ಲ.... ಕಸ ಮುಸರಿ ಮಾಡ್ಕೊಂಡು ನೀವು ಹಾಕಿದ್ದು ತಿಂದು ಬೀಳ್ತೀನಿ.... ನನಗ ಹೊರಗ ಹಾಕ್ಬ್ಯಾಡ ಬಸ್ಸಣ್ಣೀ.... ನನ್ ಹೊಟ್ಯಾಗ ನಿನ್ ಕೂಸ ಅದಾ...." ಅವಳು ಅಳುತ್ತ ಹಲುಬಿದಳು.

ಮಲ್ಲಿ ಬಂದು ಲಚ್ಚಿಯ ತಲೆಗೂದಲು ಹಿಡಿದೆಳೆದು ದೂರ ಸರಿಸಿದಳು. ಲಚ್ಚಿಯ ಅಳು ವೃದ್ಧಿಸಿತು. ನೆರೆ ಹೊರೆಯ ಜನ ಬಂದರು. ಬಸ್ಸಣ್ಣಿಯನ್ನು ತರಾಟೆಗೆ ತೆಗೆದುಕೊಂಡರು.

"ಏನೋ ಬಸ್ಸಣ್ಣೀ.... ರಂಡೀಗಿ ತಂದು ಮನ್ಯಾಗಿಟಗೊಂಡು ಹೆಣ್ತಿಗಿ ಹೊರಗ ಹಾಕ್ತ್ಯಾ? ಅದೂ ಲಚ್ಚಿಯಂತಾ ಹೆಣ್ತಿಗಿ.... ಲಚ್ಚಿ ಮಾನಸ್ಥಳು. ಒಂದದಿನಾನೂ ಮನಿಬಿಟ್ಟು ಹೊರಗ ಬಂದಕ್ಕಿ ಅಲ್ಲ. ಈಗ ಬಸುರಿ ಬ್ಯಾರೆ. ನೀ ಆಕಿಗಿ, ಹೊರಗ ಹಾಕದ್ರ ನೀ ಈ ಕೇರ್ಯಾಗ ಇರಾದು ಮುಶಕಿಲ್ ಆಗ್ತಾದ. ರಂಡೇರ ಕಾಲಾಗ ಹೆಂಡ್ರೀಗಿ ಕಳಕೋತಾರೆನೋ ಹೊಂಬ...... ಅಕಿನೂ ಇರ್ಲಿ.... ಇಕಿನೂ ಇರ್ಲಿ ತಗೋ...."

ಬಸ್ಸಣ್ಣಿ ಸುಮ್ಮನಾದ. ಮಲ್ಲಿ ಒಳಗೆ ಹೋದಳು.

ಲಚ್ಚಿ ಹೊರಗೆ ಚಳಿಗಾಳಿಯಲ್ಲಿ ಗದಗದ ನಡುಗುತ್ತ ಗಂಡನ ಮನೆಯ ಮುಚ್ಚಿದ ಬಾಗಿಲಿಗೆ ತಲೆಯಿಟ್ಟು ರಾತ್ರಿ ಕಳೆದಳು. ಒಳಗಿನಿಂದ ಮಲ್ಲಿ, ಬಸ್ಸಣ್ಣಿಯರ ನಗು, ಬಳೆಗಳ ಸದ್ದು, ಸಿಹಿ ನರಳುವಿಕೆಗಳೆಲ್ಲ ಕಾದ ಸೀಸದಂತೆ ಹರಿದು ಬಂದು ಇವಳ ಕಿವಿ ತಾಕುತ್ತಿದ್ದವು.

ಎಲ್ಲ ಕೆಲಸ ಮಾಡಿಕೊಳ್ಳುತ್ತ, ಮಲ್ಲಿ ಹಾಕಿದ್ದು ಉಣ್ಣುತ್ತ ಲಚ್ಚಿ ಕೆಲಸ ದಾಳಿನಂತೆ ದಿನಗಳೆಯತೊಡಗಿದಳು.

ಹಾಗೂ ಹೀಗೂ ಲಚ್ಚಿಗೆ ದಿನ ತುಂಬಿದುವು. ಒಂದು ದಿನ ರಾತ್ರಿ ಹೆರಿಗೆಯ ನೋವು ಕಾಣಿಸಿಕೊಂಡಾಗ ಬಸ್ಸಣ್ಣಿ ಎದ್ದು ಬರಲಿಲ್ಲ. ನೆರೆಯ ಜನ ಅವಳನ್ನೊಯ್ದು ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಬಂದರು.

ಒಂದು ರಾತ್ರಿಯೆಲ್ಲ ಲಚ್ಚಿ ಯಮಯಾತನೆ ಸಹಿಸಿದಳು, ಒದ್ದಾಡಿದಳು, ಅತ್ತಳು. ಅವಳ ಅಳು ಕೇಳುವ ಆತ್ಮೀಯರಾರೂ ಅವಳ ಬಳಿಯಿರಲಿಲ್ಲ. ಅವಳನ್ನು ತಲೆ ನೇವರಿಸಿ ಸಂತೈಸುವ ಹಸ್ತ ಯಾವುದೂ ಅವಳ ಹತ್ತಿರದಲ್ಲಿರಲಿಲ್ಲ. ಸಾಂತ್ವನದ ಒಂದು ನುಡಿ ಹೇಳಿ ಅವಳ ಕಂಬನಿಯೊರಸುವ ಕೈ ಒಂದೂ ಅವಳ ಸನಿಹದಲ್ಲಿರಲಿಲ್ಲ.

ಲಚ್ಚಿ ಚೊಚ್ಚಲು ಹೆರಿಗೆಯ ನೋವಿನಿಂದ ನರಳಿದಳು, ಹೊರಳಾಡಿದಳು. ಕೊನೆಗೊಮ್ಮೆ ಹೆರಿಗೆಯಾಯಿತು. ಬಸ್ಸಣ್ಣಿಯ ತದ್ರೂಪದ ಗಂಡು ಮಗು ಅವಳುದರದಿಂದ ಜನ್ಮ ತಳೆಯಿತು.

ಮಗುವನ್ನು ನೋಡುವ ಆಸೆ ತಾಯಿ ವ್ಯಕ್ತಪಡಿಸಲಿಲ್ಲ. ಅಷ್ಟೇ ಅಲ್ಲ, ಅದನ್ನು ನೋಡಲೂ ಅವಳು ನಿರಾಕರಿಸಿದಳು. ಕಾರಣ ಅದು ಗಂಡು ಮಗು ಎಂಬುದೊಂದೇ ಅವಳ ತಲೆಯಲ್ಲಿತ್ತು.

ಒಂದು ದಿನವಿಡೀ ಕೂಸಿಗೆ ಹಾಲು ಕುಡಿಸಲು ನಿರಾಕರಿಸಿದಳು. ಮಾರನೆಯ ದಿನ ದಾದಿಯ ಒತ್ತಾಯಕ್ಕೆ ಮಣಿದು ಮಗುವನ್ನೆತ್ತಿಕೊಂಡು ಅದರ ಬಾಯಿಯಲ್ಲಿ ತನ್ನ ಮೊಲೆಯನ್ನಿಟ್ಟಳು.

ಮಗು ಮೊಲೆ ಚೀಪಿದಂತೆಲ್ಲ ಅವಳೆದೆಯ ವಾತ್ಸಲ್ಯ, ಮಮತೆ ತಳ ಮಳಿಸಿತು, ಕರಗಿತು. ಅಮೃತದ ಧಾರೆಯಂತೆ ಮಗುವಿನೆಡೆಗೆ ಭೋರ್ಗರೆದು ಪ್ರವಹಿಸಿತು.

ಅದರ ಒಂದೊಂದು ಸಲದ ಚೀಪುವಿಕೆಯೂ ಅವಳ ಮೊಲೆಯಲ್ಲಿ, ಹೃದಯದಲ್ಲಿ, ಎದೆಯಲ್ಲಿ ಅವರ್ಣನೀಯವಾದ ಆಹ್ಲಾದವನ್ನು ಅಂಕುರಿಸಿತು. ಅವಳಿಗರಿಯದಂತೆಯೇ ಅವಳ ಬಲಗೈ ಅದರ ತಲೆ ನೇವರಿಸಿತು. ಮುಖ ಸವರಿತು. ಕಣ್ಣು ಮುಚ್ಚಿ ಹಾಲು ಹೀರುತ್ತಿದ್ದ ಮಗುವಿನ ತಲೆಗೆ ಹಣೆಯಿಟ್ಟ ಲಚ್ಚಿ ಭೋರ್ಗರೆದು ಅತ್ತಳು.

ಮಗುವನ್ನು ನೋಡಲು ಬಸ್ಸಣ್ಣಿ ಅಪ್ಪಿ ತಪ್ಪಿಯೂ ಆಸ್ಪತ್ರೆಗೆ ಬರಲಿಲ್ಲ. ಮಗು ಸುಪುಷ್ಟವಾಗಿ ಮುದ್ದು ಮುದ್ದಾಗಿತ್ತಾದರೂ ಅದು ಕಣ್ಣು ಮುಚ್ಚಿ ತೊಟ್ಟಿಲಲ್ಲಿ ಮಲಗಿದಾಗಲೆಲ್ಲ ಲಚ್ಚಿ ಮಂಚದ ಮೇಲೆ ಕುಳಿತು ಅದನ್ನೇ ದಿಟ್ಟಿಸುತ್ತಾಳೆ. ದಿಟ್ಟಿಸುತ್ತಲೇ ಯೋಚಿಸುತ್ತಾಳೆ.

ಈ ಕೂಸು ಗಂಡಾಯಿತಲ್ಲ ಎನ್ನುವ ಬೇಸರ. ಈ ಪ್ರಪಂಚಕ್ಕೆ ಬಂದ ಗಂಡು ಯಾವುದೂ ಒಳ್ಳೆಯದಾಗಿರಲು ಸಾಧ್ಯವಿಲ್ಲ ಎಂಬುದು ಅವಳ ತಲೆಯಲ್ಲಿ ಗಟ್ಟಿಯಾಗಿ ಕುಳಿತ ಅಂಶ. ಅವಳ ಸಂಪರ್ಕಕ್ಕೆ ಬಂದ ಗಂಡಸರೆಲ್ಲ ಇಂಥದ್ದೊಂದು ವಿಕಾರ ಭಾವನೆ ಅವಳೆದೆಯಲ್ಲಿ ಬೆಳೆದು ಗಟ್ಟಿಯಾಗುವಂತೆ ಮಾಡಲು ಸಹಕಾರಿಯಾಗಿದ್ದರು. ಅವಳ ಬಾಳಿನಲ್ಲಿ ಬಂದ ಗಂಡುಗಳೆಷ್ಟು? ಒಬ್ಬನಾದರೂ ಅವಳನ್ನು ಪ್ರೀತಿಯಿಂದ, ಕಾಳಜಿಯಿಂದ, ಒಲವಿನಿಂದ ಕಂಡದ್ದುಂಟೆ? ಹಸಿಮಾಂಸ ಕಂಡ ರಣಹದ್ದುಗಳಂತೆ ಅವರೆಲ್ಲ ಬಂದು ಅವಳ ಮೇಲೆರಗಿದರು. ತಮಗೆ ತೃಪ್ತಿಯಾಗುವಷ್ಟು ಅವಳನ್ನು ಕುಕ್ಕಿ ಕುಕ್ಕಿ ತಿಂದರು. ಕೊನೆಗೊಮ್ಮೆ ಬಿಟ್ಟು ದಾರಿ ಹೋದರು.

ಕಾಸಿನಾತ..... ಕುಲಕರ್ಣಿ..... ಬಸ್ಸಣ್ಣಿ..... ಖಾಕಿಧಾರಿಗಳು.... 'ಸ್ತ್ರೀನಿಕೇತನ'ದ ಅಧಿಕಾರಿ ತನ್ನನ್ನು ರಾತ್ರಿ ಮಾರಾಟ ಮಾಡುತ್ತಿದ್ದಾಗ ಸಂಪರ್ಕಕ್ಕೆ ಬಂದ ಗಂಡಸರೆಷ್ಟು? ಗಂಡನಾಗಿ ಬಂದು ಕೊರಳಿಗೆ ತಾಳಿ ಕಟ್ಟಿ ಮನೆಗೆ ಕರೆ ತಂದ ಬಸ್ಸಣ್ಣಿ....

ಒಂದೇ....... ಎರಡೇ............. ಅವಳ ಬಾಳಿನಲ್ಲಿ ಗೂಳಿಗಳಂತೆ ಬಂದು ಅವಳನ್ನು ಬಲವಂತವಾಗಿ ಹಿಂಸಿಸಿ, ಭೋಗಿಸಿ ಬಿಟ್ಟು ಹೋದ ಈ ಎಲ್ಲ ಗಂಡುಗಳು. ಇದೆಲ್ಲ ನೆನೆದಾಗ ಲಚ್ಚಿಗೆ ತಮ್ಮ ಹಳ್ಳಿಯ ಲಕ್ಕವ್ವನ ಕಾರ್‍ಯಾದ ಕೋಣಗಳು ಕಣ್ಮುಂದೆ ಬಂದು ನಿಲ್ಲುತ್ತವೆ. ದೇವಿಯ ಹೆಸರ ಮೇಲೆ ಬಿಟ್ಟ ಕೋಣಗಳು ಎಲ್ಲೆಂದರಲ್ಲಿ ಯಾರ ಹೊಲವಾದರೂ ಸರಿ, ನುಗ್ಗಿ ತಮಗೆ ಬೇಕಾದಲ್ಲಿ ಬಾಯಿ ಹಾಕಿ ರಾಶಿಗೆ ಬಂದ ಬೆಳೆ ತಿಂದರೂ ಹೊಲದವರು ಅವುಗಳನ್ನು ಹೊಡೆಯುವ ಹಾಗಿಲ್ಲ. ತಮ್ಮ ಕಣ್ಣ ಮುಂದೆಯೇ ತಾವು ಉತ್ತು ಬಿತ್ತಿದ್ದು ಸಮೃದ್ಧ ಬೆಳೆಯಾಗಿ ನಿಂತಿದ್ದನ್ನು ಹಾಳು ಮಾಡುತ್ತವೆ, ತಿನ್ನುತ್ತವೆ. ಈ ವಕ್ಕಲಿಗರು ಕೈ ಕೈ ಹಿಸುಕುವುದಿಲ್ಲವಾದರೂ ಮನಸ್ಸಿನಲ್ಲಿ ಕಳಿಕಳ ಎನ್ನದೆ ಇರಲಾರರು. ಆದರೆ ಅವುಗಳನ್ನು ಹೊಡೆದೋಡಿಸುವ ಧೈರ್ಯ ಈಗಲೂ, ಈ ದಿನಕ್ಕೂ ಅವರಿಗೆ ಬಂದಿಲ್ಲ.

ಲಚ್ಚಿಯನ್ನು ತುಳಿದು, ತಿಂದು, ನಾಶಪಡಿಸಿ ಹೋದ ಬೆದೆಹತ್ತಿದ ಇಂಥ ಕೋಣಗಳೆಷ್ಟು? ಅಯ್ಯೋ ಲಚ್ಚೀ.....

ಬೇಸಿಗೆಯ ಬೆದೆ ಬಿಸಿಲು ಕಲಬುರ್ಗಿಯ ಆಕಾಶವನ್ನು ತನ್ನ ತೋಳುಗಳಲ್ಲಿ ಬಳಸಿಕೊಂಡು ಅದರ ಮೈಯ ಎಲುಬುಗಳನ್ನೆಲ್ಲ ಪುಡಿ ಪುಡಿ ಮಾಡಿತು. ಅದರ ಬೆದೆಯ ಬಲಕ್ಕೆ ತತ್ತರಿಸಿದ ಆಗಸ ಬೆವರಿಳಿಸಿ ನಿಂತು ನರಳಿತು. ಬಿಸಿಲು ಕೆಳಸರಿದು ಸರ್ಕಾರಿ ಆಸ್ಪತ್ರೆಯ ಮೂರಂತಸ್ತಿನ ಭವ್ಯ ಕಟ್ಟಡದ ತಲೆಯ ಮೇಲೆ ಬಿದ್ದು ಹೊರಳಾಡಿತು.

ಲೇಬರ್ ವಾರ್ಡಿನ ಒಂದು ಮಂಚದ ಮೇಲೆ ಮಲಗಿದ್ದ ಲಚ್ಚಿಯ ಕಣ್ಣುಗಳು ಮುಚ್ಚಿದುವು. ಮುಚ್ಚಿದ ಕಣ್ಣುಗಳ ನಡುವೆ ಕಲ್ಪನೆ ಕುಂಚವಾಡಿಸಿ ಚಿತ್ರ ಬಿಡಿಸುತ್ತಿತ್ತು.

ನಾಳೆ ಬಸ್ಸಣ್ಣಿಯ ಮಗು ದೊಡ್ಡವನಾಗುತ್ತಾನೆ. ಬೆಳೆಯುತ್ತ ಬೆಳೆಯುತ್ತ ಗಟ್ಟಿಯಾದ ಗಂಡಸಾಗುತ್ತಾನೆ. ಸುತ್ತಮುತ್ತ ಸಂಪರ್ಕಕ್ಕೆ ಬಂದ ಹರೆಯದ ಹೆಣ್ಣುಗಳ

ಮೇಲೆ ಅತ್ಯಾಚಾರವೆಸಗಿ ಅವರ ಬಾಳನ್ನು ಬಲಿ ತೆಗೆದುಕೊಳ್ಳುತ್ತಾನೆ. ಆಗ................ ಆಗ.................... ಆ ಬಡ ಹೆಣ್ಣು ಇವನ ಹೆಸರಿನ ಮೇಲೆ ಕಣ್ಣೀರುಗರೆಯುತ್ತ ಹಿಡಿ ಶಾಪ ಹಾಕುತ್ತಾಳೆ.

ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನೂ ಇಂತಹ ಗಂಡಸೇ ಆಗಬೇಕೇ......... ಅದಕ್ಕೇನು? ಎಲ್ಲ ಗಂಡಸರೂ ಹೀಗೆಯೇ ಆಗುವುದು. ಗಂಡು ಎಂದರೆ ಇನ್ನೇನು?

ಅವಳು ಕಣ್ಣು ತೆರೆಯುತ್ತಾಳೆ. ಮಲಗಿದ್ದ ಮಗುವನ್ನು ದಿಟ್ಟಿಸುತ್ತಾಳೆ. ಬಸ್ಸಣ್ಣಿಯದೇ ಕಣ್ಣು, ಮೂಗು, ಹೋಲಿಕೆಯನ್ನು ಹೊತ್ತ ಮಗು. ನೋಡ ನೋಡುತ್ತಿರುವಂತೆಯೇ ಬೆಳೆಯುತ್ತದೆ. ವಿಕಾರವಾಗಿ ಬೆಳೆದು ನಿಂತು ವಿಕಟ ನಗೆ ಬೀರುತ್ತದೆ. ಇನ್ನೇನು ಅದು ತನ್ನ ಮೇಲೆ ಆಕ್ರಮಣ ಮಾಡಬೇಕು. ಲಚ್ಚಿ ಕಿಟಾರನೆ ಕಿರುಚಿ ಬೆಚ್ಚಿ ಬೀಳುತ್ತಾಳೆ.

"ಎಲ್ಲ ಚಿತ್ತ ಭ್ರಮೆ!"

"ಯಾಕೇ ಲಚ್ಚೀ...... ಏನಾಯ್ತೇ?" ನೆರೆ ಮಂಚದ ಹೆಂಗಸು ಕೇಳುತ್ತಾಳೆ. ದೂರ ಕುಳಿತು ಕಾಗದ ಹಿಡಿದಿದ್ದ ನರ್ಸ್ ಓಡಿ ಬರುತ್ತಾಳೆ.

ಉಹೂಂ...... ಲಚ್ಚಿ ಏನನ್ನೂ ಹೇಳುವುದಿಲ್ಲ. ಅವಳ ಮೈಯಿಡೀ ಥರ ಥರ ನಡುಗುತ್ತಿರುತ್ತದೆ.

ನರ್ಸ್ ಅವಳ ಭುಜ ಅಲುಗಿಸಿ ಕೇಳುತ್ತಾಳೆ.

"ಯಾಕೆ ಲಚ್ಚೀ.............. ಏನಾಯ್ತು?"

ಲಚ್ಚಿ ಮಾತ್ರ ಥರಗುಟ್ಟುತ್ತ ಹೆದರಿಕೆಯಿಂದ ತೊಟ್ಟಿಲಲ್ಲಿಯ ತನ್ನ ಮಗುವನ್ನೇ ದಿಟ್ಟಿಸುತ್ತಿರುತ್ತಾಳೆ.

"ಪಾಪ..... ಪರದೇಶಿ ಹೆಂಗಸು. ಯಾರೂ ಬರೋವ್ರಿಲ್ಲ. ನೋಡೋವ್ರಿಲ್ಲ.... ಮನಸಿಗಿ ತರಾಸ ಆಗಿರ್ಬೇಕು."

ಪಕ್ಕದ ಮಂಚದ ಮಹಿಳೆಯ ಕಳಕಳಿಯ ದನಿ.

"ಏಯ್ ಸುಮ್ನೆ ಮನಗ್ರೊ. ನಾಳಿಗಿ ಹ್ಯಾಂಗಿದ್ರೂ ನಿನ್ನನ್ನು ಡಿಸ್ ಚಾರ್ಜ್ ಮಾಡ್ತಾರೆ. ಎಲ್ಲಿಗಾದ್ರೂ ಹೋಗುವಿಯಂತೆ."

ನರ್ಸ್ ಹೇಳಿ ತನ್ನ ಸ್ವಸ್ಥಳ ಸೇರಿದಳು.

ಲಚ್ಚಿ ಮತ್ತೆ ಮಂಚಕ್ಕೊರಗಿದಳು. ಅವಳ ತಲೆಯಲ್ಲಿ ವಿಚಾರಚಕ್ರ ಮತ್ತೆ ಸುತ್ತತೊಡಗಿತು. ಮಗು ಹಾಯಾಗಿ ಇದ್ಯಾವುದರ ಅರಿವಿಲ್ಲದೆಯೇ ನಿದ್ರಿಸಿತ್ತು.

ಹೊಯಿಂದು.... ನಾಳಿಗಿ ಹೊತ್ತ ಹೊರಟರ ಈ ದವಾಖಾನಿಯವ್ರು ನನಗ ಹೊರಗ ಹಾಕ್ತಾರ. ಹಡದು ಹತ್ತು ದಿನಾ ಆಯ್ತು. ಈ ಕೂಸಿಗಿ ಕಟಗೊಂಡು ಹೋಗ್ಬೇಕಾದರೂ ಎಲ್ಲಿಗಿ ಹೋಗ್ಬೇಕು ನಾನು? ಬಸ್ಸಣ್ಣಿಯ ಬಲ್ಲಿ? ಹುಂ, ತನ್‌ಮ್ಯಾಲ ಮತ್ತ ಈ ಕೂಸಿನ ಮ್ಯಾಲ ಅಂವಗ ಎಳ್ಳೋಟು ಮಾಯಾ ಮಮತಾ ಇದ್ದಿತ್ತಂದ್ರ ಈಸು ದಿನಾ ಆಯ್ತು ಹಡ್ದು. ಒಂದಿನಾ ಅರೆ ಬಂದು ನೋಡತಿರಲಿಲ್ಲೇನು? ಹಳ್ಳಿಯ ದಡ್ಡ, ಅಮಾಯಕ ಹೆಂಗಸರು ಸಿಕ್ಕರೆ ಎಲ್ಲಾ ಗಂಡಸರೂ ಧೋಕಾ ಮಾಡವರೇ.. ಗಂಡಸರೇನೋ ಮ್ಯಾಲ ಮಾತರ ಬ್ಯಾರೆ ಬ್ಯಾರೆ ಮಾರಿಯವರಿರ್‍ತಾರ. ಬ್ಯಾರೆ ಬ್ಯಾರೆ ಅರವಿ ಅಂಚಡಿ ಉಡ್ತಾರ. ಅದರ ಎಲ್ಲೋರ್‍ದೂ ಮೈಮ್ಯಾಲಿನ ಬಟ್ಟೆ ಹಿರ್‍ದು ತಗ್ದು ನೋಡ್ಬೇಕು. ಒಳಗ ಎಲ್ಲೋರೂ ಬರೇ ಬತ್ತಲೆನೇ. ಎಲ್ಲೋರಿಗನೂ ಬರೇ ತೊಗಲಿನ ಬಟ್ಟೇನೇ. ಛಂದನ ಹರ್‍ಯಾದ ಹೆಂಗಸ ಕಂಡ್ರಾಯ್ತು; ಎಲ್ಲೋರ ಗಂಡಸ್ತನಾನೂ ನಿಗರಿ ನಿಂದರತಾದ. ಛೀ......

ನಾಳಿಗಿ ತನ್ನ ಮಗಾನೂ ಹಂತಾ ಗಂಡನೇ ಆಗ್ತಾನ. ಆದರ ನನ್ ಮಗಾ ಹಾಂಗಾಗಬಾರ್‍ದು. ಅಮಾಯಕ ಹಳ್ಳಿ ಹೆಂಗಸರಿಗಿ ಕೆಡ್ಸಿ ಅಕಿನ ಬಾಳ್ಯಾಕ ಬೆಂಕಿಯಿಡಾ ಜೋಕುಮಾರನ್ಹಂಗ ಆಗಬಾರ್‍ದು ನನ್‌ಮಗಾ..... ಹೆಂಗಸರ ಕಳಕಳಕಿ ಉಸರ ಹತ್ತಿ ಮೈಯ್ಯಾಗೆಲ್ಲ ಹುಳಾಬಿದ್ದ ನನ್‌ಮಗಾ. "ಹೆಂತಾ ಹೆಂಗ್ಸ ಹಡದಾಳ ಇವನಿಗಿ, ಅಕಿನ ಹೆಣಾ ಎತ್ಲ." ಅಂತ ಹೆಂಗಸರು ನನಗ ಲಟಗಿ ಮುರ್‍ದು ಸರಾಪಸಗೋ ಹಾಂಗ ಆಗಬಾರ್‍ದು.

ಆದರ.... ಗಂಡ್ಸಾದ ಮ್ಯಾಲ ಇದೆಲ್ಲಾ ಆಗಬಾರ್‍ದು ಅಂದ್ರ ಹ್ಯಾಂಗಾಗ್ತದ? ಗಂಡಜಾತಿ ಹುಟ್ಟಿರಾದೇ ಹೆಂಗಸರ ಕುತಗಿ ಕೊಯ್ದು, ಪಿರೀತಿ ನಾಟಕಾ ಆಡಿ, ಅಕಿನ ಎದ್ಯಾಗ ಚಾಕು ಚುಚ್ಚಿ ಹಸಿ ರಗತಾ ಹೀರಿ ಕುಡಿಲಕ್ಕ... ಗಂಡಸರಲಿಂದ ಖರೇ ಪಿರೀತಿ ಬೇಡಾದೂ ಹುಲಿ ಮುಂದ ನಿಂತು ಜೆಂವದ ಭಿಕಶ್ಯಾ ಬೇಡಾದೂ ಒಂದೇ ಅದಾ......

ಅದರ ಈ ಕೂಸಗಿ ಏನು ಮಾಡ್ಬೇಕು? ಇದರ ಕುತಗಿ ಹಿಚಕಿ ಸತ್ತು ಹೊಡ್ದು ಎಲ್ಲೆರೆ ಬಿಕಾಟದರ ಹ್ಯಾಂಗ.... ಇದಕ್ಕೊಂದರ ಕುತಗಿ ಬತ್ತಿ ಬಿಕಾಯ್ತಿ ಖರೇ...... ಮತ್ತ ನಿನಗ ಗಂಡಸ್ರು ಸುಮ್ಮನ ಬಿಡಂಗಿಲ್ಲ. ನಿನಗ ಬೇಡಾಗ್ಲಿ ಮತ್ತ ನೀ ಬಸರಾಗ್ತಿ. ಮತ್ತನೀ ಹಡೀತಿ. ಹಿಂಗೇ ಏಸ ಮಕ್ಕಳ ಕುತಗಿ ಒತ್ತಾಕಿನೀ? ಅಂತ ಇನ್ನೊಂದು ಮನಸ್ಸು ಕೇಳಿತು.

ಹೊಯಿಂದು ಅದುನೂ ಖರೇನೇ....... ಎಂದವಳೇ ಯಾವುದೋ ನಿರ್ಧಾರಕ್ಕೆ ಬಂದವಳಂತೆ ನಿಶ್ಚಿಂತೆಯ ನಿಡಿದಾದ ಉಸಿರೆಳೆದು ಬಿಟ್ಟಳು.

ಮುಗಿಲಿನ ಗರ್ಭಕ್ಕೆ ಚೂರಿ ಹಾಕಿ ಮಳೆ ಒಂದೇ ಸಮನೆ ಧೋ ಎಂದು ಬೀಳುತ್ತಿತ್ತು. ಸಂಜೆಯ ಹೊತ್ತಿನಲ್ಲಿಯೇ ಕರಾಳ ಗಾಢಾಂಧಕಾರ ಆಕಾಶದಿಂದಿಳಿದು ಮುದ್ದೆ ಮುದ್ದೆಯಾಗಿ ಮಳೆಯೊಂದಿಗೆ ಬೆರೆತು ನೆಲಕ್ಕಿಳಿಯತೊಡಗಿತು. ಗಿಡ, ಮರ, ಮನೆ ಮಠಗಳಲ್ಲಿ ಗಟ್ಟಿಯಾಗಿ ಕುಳಿತುಕೊಳ್ಳುತ್ತ ರಸ್ತೆಯ ದೀಪಗಳ ಕುತ್ತಿಗೆ ಹಿಚುಕುತ್ತಿತ್ತು.

ಆ ಮಳೆಯಲ್ಲಿ ನೆನೆದು ತೊಪ್ಪೆಯಾಗಿ ಹತ್ತೇ ಹತ್ತು ದಿನಗಳ ಹಸಿ ಮೈಯ ಬಾಣಂತಿ ಲಚ್ಚಿ ಮಗುವನ್ನು ಎದೆಗೊತ್ತಿಕೊಂಡು ಗದಗದ ನಡುಗುತ್ತ ಬಂದು ಬಸ್ಸಣ್ಣಿಯ ಬಾಗಿಲು ತಟ್ಟಿದಳು. ಬಸ್ಸಣ್ಣೀ.... ಬಸ್ಸಣ್ಣೀ.... ಅಂತ ಕೂಗಿದಳು. ಬಾಗಿಲು ತೆರೆಯಲಿಲ್ಲ. ಮತ್ತೆ ತಟ್ಟಿದಳು. ಮತ್ತೆ ಕೂಗಿದಳು.

ಮಂಚಕ್ಕೆ ಮೈ ಅಂಟಿಸಿ ಪ್ರೇಯಸಿಯ ಮಗ್ಗುಲಿಗೊತ್ತಿಕೊಂಡಿದ್ದ ಬಸ್ಸಣ್ಣಿಗೆ ಎಲ್ಲಿಲ್ಲದ ಸಿಟ್ಟು ಬಂದಿತು. ಎದ್ದು ಧಡಧಡನೆ ಬಂದು ರಭಸದಿಂದ ಬಾಗಿಲು ತೆರೆದ.

"ಯಾರು ನೀನು?"

"ನಾನು ಬಸ್ಸಣ್ಣೀ.... ನಿನ್ ಹೆಣ್ತಿ ಲಚ್ಚಿ. ನಿನ್ ಮಗಾ.... ಥೇಟ ನಿನ್ಹ್ಹಂಗೇ ಅದಾ.... ಒಮ್ಮೆ ನೋಡು ಬಸ್ಸಣ್ಣೀ...."

ಲಚ್ಚಿ ಗೋಗರೆದಳು. ಬಸ್ಸೆಯ ಸಿಟ್ಟು ನೆತ್ತಿಗೇರಿತು.

"ಬೋಸಡಿ ಮುಂಡೀ.... ಮತ್ತ ನೀ ಇಲ್ಲಿಗಿ ಬಂದ್ಯಾ.... ಹಾದರಕ್ಹುಟ್ಟಿದ್ದ ಮಗಾನ್ನ ನನ್ನ ಮಗಾ ಅಂತೀಯಲ್ಲೇ ಛಿನಾಲಿ.... ಈಗ ಇಲ್ಲಿಂದ ಹೋಗ್ತ್ಯಾ ಏನು ಮೆಟ್ಟಲಿಂದ ಹೊಡ್ದು ಹೊರಗ ಹಾಕ್ಬೇಕಾ...."

ಅವನು ಅಬ್ಬರಿಸಿದ. ಅಂತಹ ಚಳಿಗಾಳಿ ಮಳೆಯಲ್ಲಿಯೂ ಲಚ್ಚಿಯ ಇಡೀ ಮೈಯಲ್ಲಿ ನಡುಕ ಏರಿನಿಂತಿತು.

"ನಿನ್ ಕಾಲಿಗಿ ಬೀಳ್ತೀನಿ ಬಸ್ಸಣ್ಣೀ.... ದೀಪದ ಬೆಳಕನ್ಯಾಗ ಜರಾ ಈ ಕೂಸಿಗೆರೆ ನೋಡು. ನಿಂದಂತ ಖಾತ್ರಿ ಅದರ ಇಟಗೋ.... ಇಲ್ದರ ಬ್ಯಾಡ.... ಹಿಂತಾ ಜುಲಮ್ ನನ್ ಮ್ಯಾಲ ಈ ಹಸು ಕಂದನ ಮ್ಯಾಲ ಮಾಡಬ್ಯಾಡ ಬಸ್ಸಣ್ಣೀ...."

"ನಿನ್ನವ್ವನ ರಂಡೀ.... ಹೋಗ್ತ್ಯಾ ಇಲ್ಲಾ ಇಲ್ಲೀದು....."

ಎಂದವನೇ ಬಸ್ಸಣ್ಣಿ ಅವಳ ಕೂದಲು ಹಿಡಿದೆಳೆದು ದೂರ ಒಯ್ದು ನೂಕಿದ. ಲಚ್ಚಿ ಮಗುವಿನೊಂದಿಗೆ ಹರಿವ ನೀರಿನಲ್ಲಿ ಧೊಪ್ಪನೆ ಬಿದ್ದಳು. ಅವನು ತಿರುಗಿ ಬಂದು ತನ್ನ ಮನೆಯ ಬಾಗಿಲು ಮುಚ್ಚಿಕೊಂಡುಬಿಟ್ಟ.

ಸೊಂಟದೆತ್ತರ ರಭಸದಿಂದ ಹರಿವ ಚರಂಡಿಯ ಮತ್ತು ಮಳೆಯ ನೀರಿನಿಂದ ಹಾಗೂ ಹೀಗೂ ಮೇಲೆದ್ದು ಸುಧಾರಿಸಿಕೊಂಡು ಎದ್ದವಳೇ ಲಚ್ಚಿ ಮಗುವನ್ನು ಎದೆಗೊತ್ತಿಕೊಂಡು ಓಡಿದಳು. ಓಡಿಯೇ ಓಡಿದಳು. ನಿರ್ಜನವಾದ ರಸ್ತೆಯಲ್ಲಿ ಮೊಳಕಾಲುದ್ದದ ನೀರು. ಸಾಯುವ ಬೀದಿ ದೀಪಗಳು.

ಅವಳು ಮೈಮೇಲೆ ಎಚ್ಚರವಿಲ್ಲದವಳಂತೆ, ಭೂತ ಹಿಡಿದವಳಂತೆ ಓಡಿಯೇ ಓಡಿದಳು. ಅವಳ ಮೆದುಳು ಪ್ರಜ್ಞೆ ಕಳೆದುಕೊಂಡಿತು. ರಭಸದಿಂದ ಓಡಿ ಬಂದವಳೇ ಕೋಟೆಯ ಕಂದಕದ ಆಳವಾದ ನೀರಿನಲ್ಲಿ ಮಗುವಿನೊಂದಿಗೆ ಹಿಂದೆಮುಂದೆ ನೋಡದೆ ಏಕದಂ ಹಾರಿ ಬಿಟ್ಟಳು.

ಅದೇ ಮಳೆಯಲ್ಲಿ ಓಡುತ್ತಿದ್ದ ಸೈಕಲ್ ಸವಾರನ ಕಣ್ಣಿಗೆ ಈ ದೃಶ್ಯ ಬಿದ್ದಿತು. ಅವನು ತನ್ನ ಸೈಕಲ್ ಬಿಟ್ಟು ಓಡಿ ಬಂದವನೇ ಅದೇ ಸ್ಥಳದಲ್ಲಿ ಕಂದಕದ ನೀರಿಗೆ ಹಾರಿದ.

* * * *

ಮಳೆ ನಿಂತಿತು.

ಶರಣಬಸಪ್ಪನ ಕೆರೆ ಮತ್ತು ಕೋಟೆ ಕಂದಕದ ನಡುವಿನ ಟಾರು ರಸ್ತೆಯ ಮೇಲೆ ಲಚ್ಚಿ ಮತ್ತವಳ ಮಗುವನ್ನು ತಂದು ಮಲಗಿಸಲಾಗಿತ್ತು.

ಪೋಲೀಸ್ ವ್ಯಾನ್‌ಗಳು ಬಂದುವು. ಇನ್ಸ್‌ಪೆಕ್ಟರ್, ಎಸ್. ಪಿ. ಬಂದಿಳಿದರು. ದೊಡ್ಡ ದೊಡ್ಡ ಅಧಿಕಾರಿಗಳು ಬಂದು ಸುತ್ತ ನೆರೆದರು.

ಲಚ್ಚಿಯ ಮಗು ಎಂದೋ ಸತ್ತು ಹೋಗಿತ್ತು. ಲಚ್ಚಿಯನ್ನು ಆ ಸೈಕಲ್ ಸವಾರ ಸಾವಿನ ದವಡೆಯಿಂದ ಪಾರುಮಾಡಿದ್ದ. ಹಾಗೆ ಪಾರು ಮಾಡಿದ್ದ ವ್ಯಕ್ತಿಗೆ ಅವಳು ಸಾವಿಗಿಂತಲೂ ಭೀಕರವಾರ ಮತ್ತೊಂದು ರಕ್ಕಸ ದವಡೆಗೆ ಬಲಿಯಾಗುತ್ತಾಳೆಂಬ ಅರಿವು ಅವನಿಗೆಂದಿಗೂ ಬಂದಿರಲಿಲ್ಲ. ಬರುವುದು ಸಾಧ್ಯವೂ ಇರಲಿಲ್ಲ.

ಮಾರನೆಯ ದಿನ ಲಚ್ಚಿಯ ಮೇಲೆ ಆತ್ಮಹತ್ಯೆಯ ಕೇಸು ದಾಖಲಾಯಿತು. ಎಳೆಮಗುವನ್ನು ಕೊಂದು, ತಾನೂ ಆತ್ಮಹತ್ಯೆಯ ಕಾರ್ಯಕ್ಕೆಳೆಸಿದ ಅಪರಾಧಿಯೆಂದು ಪೋಲೀಸರು ಅವಳನ್ನು ಕೋರ್ಟಿನಲ್ಲಿ ಹಾಜರುಪಡಿಸಿದರು.

ಮಗುವಂತೂ ಹೋಯಿತು. ಲಚ್ಚಿ ತನ್ನ ಬಸುರಿಗೆಯೇ ಕಿಚ್ಚು ಹೊತ್ತಿಸಿ ಎದೆ ಎದೆ ಬಡಿದುಕೊಂಡು ತಲೆಕೂದಲು ಕಿತ್ತುಕೊಳ್ಳುತ್ತ ಅಳುತ್ತ ಕೋರ್ಟಿನ ಕಟಕಟೆಯಲ್ಲಿ ನಿಂತು ಹೇಳಿಕೆ ಕೊಟ್ಟಳು.

"ಹೋಯಿಂದ್ರೀ ಸಾಬ್ರೇ.... ನನ್ ಹೊಟ್ಟಿಲಿಂದ ಹುಟ್ಟಿದ ಕೂಸಿ ಸಂಗಾಟೀ ನಾನೂ ಸಾಯ್ಬೇಕಂತ ಕಂದಕದ ನೀರಿಗಿ ಹಾರಿದ್ದೆನ್ರೀ.... ಆದರೆ ಯಾವನೋ ನನಗ ಉಳಸ್ದ. ಹತ್ತು ದಿನದ ನನ್ ಕೂಸು.... ಹಸೀ ಕೂಸು....... ಸತ್ತು ಸೆಟಗೊಂಡು ಹೊಯ್ತ್ರೀಯಪ್ಪಾ.... ನಾ ಬದುಕೀನಿ ನೋಡ್ರಿ..... ನನಗ ಅಂವಾ ಉಳಸ್ದ. ನಾ ಸಾಯ್ಬೇಕಿತ್ತರ್ರೀ...."

"ನೀ ಯಾಕ ಆ ಕೂಸಿಗಿ ಕೊಲ್ಲಬೇಕಂತ ಮಾಡಿದ್ದಿ ಲಚ್ಚಿ?"

ವಕೀಲನ ಪ್ರಶ್ನೆ.

"ಯಾಕಂದ್ರ... ಯಾಕಂದ್ರ.... ಅದರ ಅಪ್ಪ ಅದಕ ತಂದೆಂತ ತಗೋಲಿಲ್ಲ್ರೀ.... ಮ್ಯಾಲಾಗಿ ಅದು ಗಂಡಸ ಮಗಾ ಇತ್ತು. ನಾಳಿಗಿ ದೊಡ್ಡದಾಗಿ ಸಾವಿರ ಹೆಂಗಸರ ಬಾಳ್ಯಾ ಹಾಳ ಮಾಡಿ ಅವರ ಬದುಕಿಗಿ ಬೆಂಕಿ ಹಚ್ಚಾ ಗಂಡ ಮಗಾ.... ಅದಕ..... ಅದಕ್ಕನೂ ಕೊಲ್ಲಿ ನಾನೂ ಸಾಯ್ಬೇಕಂತ ಮಾಡಿದ್ದನ್ರೀ ಸಾಬ್ರೇ...... ಇಬ್ಬರೂ ಒಮ್ಮೆ ಸಾಯ್ತಿದ್ವಿ.... ಆದರ...... ಆದರ....."

ಅವಳು ಕಟಕಟೆಯ ಕಂಬಿಗೊರಗಿ ಬಿಕ್ಕಳಿಸುತ್ತ ಎಚ್ಚರ ತಪ್ಪಿದಳು. ಹತ್ತೇ ಹತ್ತು ದಿನಗಳ ಬಾಣಂತಿಯಾದ ಲಚ್ಚಿಗೆ ನಿಲ್ಲಲು ಶಕ್ತಿ ಎಲ್ಲಿಯದು?

ವಾರದ ನಂತರ ನ್ಯಾಯಾಧೀಶರ ತೀರ್ಮಾನ ಹೊರಬಿದ್ದಿತು.

ಮಗುವನ್ನು ಕೊಲ್ಲಲೆತ್ನಿಸಿದ ಲಚ್ಚಿಗೆ ಐ.ಪಿ.ಸಿ. 304ರ ಕಲಮಿನ ಮೇರೆಗೆ ಜೀವಾವಧಿ ಶಿಕ್ಷೆ ವಿಧಿಸಲ್ಪಟ್ಟಿತು.

ಪೋಲೀಸರು ಅವಳನ್ನು ಎಳೆದುಕೊಂಡು ಜೇಲಿನ ಬಾಗಿಲಿಗೆ ತಂದಾಗ ಅವಳು ಕಬ್ಬಿಣದ ಹೆಣ್ಣಾಗಿದ್ದಳು. ಹೃದಯ, ಮನಸ್ಸು, ಭಾವನೆರಹಿತ ಬರೀ ಲೋಹದ ಹೆಣ್ಣು.

ಸೆರೆಮನೆಯ ಲೋಹದ ಕಟಕಟೆಯ ಹಿಂದೆ ನಿಂತು ಒಮ್ಮೆ ಅವಳು ಹೊರಗಡೆ ನೋಡಿದಳು. ವಿಚಿತ್ರ ವಿಕಟಾಟ್ಟಹಾಸದ ಕ್ಷಯಗ್ರಸ್ತ ಮಂದಹಾಸವೊಂದು ಅವಳಧರಗಳ ಮೇಲೆ ಮೂಡಿ ನಿಂತಿತು.

ಅದು ಬೆಳೆಯಿತು, ಬೆಳೆಯುತ್ತ ಬೆಳೆಯುತ್ತ ಭೀಕರವಾಯಿತು. ಸಶಬ್ದವಾಗಿ, ವಿಕಾರವಾಗಿ, ದೊಡ್ಡ ದನಿ ತೆಗೆದು ನಗುತ್ತ ಅವಳು ಕಟಕಟೆಯ ಕಬ್ಬಿಣದ ಸರಳು ಹಿಡಿದು ಹಾಗೆಯೇ ಕುಸಿದುಬಿದ್ದಳು. ನಕ್ಕಳು. ಅತ್ತಳು, ಕೊನೆಗೊಮ್ಮೆ ಕೈಕಾಲು ಬಡಿದು ತಲೆಗೂದಲು ಕಿತ್ತುಕೊಳ್ಳುತ್ತ ಭಯಂಕರವಾಗಿ ಹೃದಯ ಕಿತ್ತು ಬರುವಂತೆ ಕಿರುಚಿ ಎಚ್ಚರ ತಪ್ಪಿ ನೆಲದ ಮೇಲುರುಳಿ ಮುದ್ದೆಯಾದಳು.

ಕನ್ನಡದಲ್ಲಿ ಲೇಖಕ-ಪ್ರಕಾಶಕ-ಮಾರಾಟಗಾರ -ಓದುಗರ ನಡುವೆ ಗಾಢ ಸಂಬಂಧವನ್ನು ಏರ್ಪಡಿಸಿ, ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಬೆಳೆಸಿ, ಓದುಗರಿಗೆ ಒಳ್ಳೆಯ ಪುಸ್ತಕಗಳು ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು, ಕನ್ನಡ ಪುಸ್ತಕೋದ್ಯಮವನ್ನು ಜನಪರವಾಗಿ ಬೆಳೆಸುವುದು- ಇದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಮುಖ ಧ್ಯೇಯೋದ್ದೇಶಗಳಲ್ಲಿ ಒಂದು. ಈಗಾಗಲೇ ಪ್ರಕಟವಾಗಿ ಮನ್ನಣೆಗಳಿಸಿ, ಈಗ ಲಭ್ಯವಿಲ್ಲದಿರುವ ಪುಸ್ತಕಗಳನ್ನು ''ಜನಪ್ರಿಯ ಪುಸ್ತಕ ಮಾಲೆ''ಯಲ್ಲಿ ಪ್ರಕಟಿಸಿ ಸುಲಭ ಬೆಲೆಗೆ ಪ್ರಾಧಿಕಾರವು ಓದುಗರ ಕೈಯಲ್ಲಿಡುತ್ತಿದೆ. ನಿನ್ನೆ-ಇಂದುಗಳ ನಡುವಣ ಒಂದು ಸೇತುವೆ ''ಜನಪ್ರಿಯ ಪುಸ್ತಕ ಮಾಲೆ''.